ಲಿಖಿತ ಮೂಲಕ ಉತ್ತರಿಸುವ
ಪ್ರಶ್ನೆಗಳ ಪಟ್ಟಿ

ಒಟ್ಟು ಪ್ರಶ್ನೆಗಳು – ೧೦೭

# ಪಟ್ಟಿ – ೧೧

# ಕರ್ನಾಟಕ ವಿಧಾನ ಪರಿಷತ್ತು

## ನೂರ ಐವತ್ತೈದನೇ ಅಧಿವೇಶನ

**ಬುಧವಾರ, ದಿನಾಂಕ : ೧೯ನೇ ಮಾರ್ಚ್, ೨೦೨೫**

---

## ಸಮೂಹ – III

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ಮೀನು ಮರಿ ಉತ್ಪಾದನಾ ಮತ್ತು ಪಾಲನೆ ಬಗ್ಗೆ

**ಶ್ರೀ ಎಂ.ಎಲ್ ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೮೯೪ (೧೩೮೧) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೩ ವರ್ಷಗಳಲ್ಲಿ ರಾಜ್ಯದಲ್ಲಿರುವ ಮೀನು ಮರಿ ಉತ್ಪಾದನಾ ಮತ್ತು ಪಾಲನ ಕೇಂದ್ರಗಳ ಸಂಖ್ಯೆ ಎಷ್ಟು ; ಯಾವ ಸ್ಥಳದಲ್ಲಿ ಇವೆ; ಉತ್ಪಾದಿಸಲಾದ ಮೀನು ಮರಿ ಎಷ್ಟು ; ವಿತರಣೆ ಮಾಡಿದ ಮೀನು ಮರಿ ಎಷ್ಟು ; ಹಾಗೂ ಯಾರಿಗೆ ವಿತರಿಸಲಾಗಿದೆ ; (ಕೇಂದ್ರವಾರು ವಿವರ ನೀಡುವುದು)

(ಆ) ಕಳೆದ ೦೩ ವರ್ಷಗಳಲ್ಲಿ ರಾಜ್ಯದಲ್ಲಿ ಮೀನುಮರಿಗಾಗಿ ಇರುವ ಬೇಡಿಕೆ ಎಷ್ಟು ಹಾಗೂ ಇದನ್ನು ಸಾಧಿಸಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ; ಯಾವೆಲ್ಲ ಸಾಮಾಗ್ರಿಗಳನ್ನು ಯಾರಿಂದ ಖರೀದಿಸಲಾಗಿದೆ ; ಹಾಗೂ ಎಷ್ಟು ವೆಚ್ಚ ಮಾಡಲಾಗಿದೆ ;

(ಇ) ರಾಜ್ಯದಲ್ಲಿ ಮೀನುಗಾರಿಕೆ ಮಾಡಲು ಇರುವ ಕೆರೆಗಳು, ನದಿಗಳು ಜಲಾಶಯಗಳು ಯಾವುವು ; (ಜಿಲ್ಲಾವಾರು ವಿವರ ನೀಡುವುದು) ಈ ಪೈಕಿ ಎಷ್ಟು ಕೆರೆಗಳನ್ನು ಕಳೆದ ಮೂರು ವರ್ಷಗಳಲ್ಲಿ ಮಾಡಲಾಗಿದೆ ; ಎಷ್ಟು ಆದಾಯ ಬಂದಿದೆ ; (ವಿವರ ನೀಡುವುದು)

(ಈ) ಗುತ್ತಿಗೆ/ಹರಾಜು ಮಾಡದೆ ಎಷ್ಟು ಕೆರೆಗಳು ಬಾಕಿ ಇವೆ ; ಈ ಪೈಕಿ ಏತ ನೀರಾವರಿ ಯೋಜನೆ ಕೆರೆಗಳು ಎಷ್ಟು ಬಾಕಿ ಇದೆ ; (ಜಿಲ್ಲಾವಾರು ವಿವರ ನೀಡುವುದು)

(ಉ) ಏತ ನೀರಾವರಿ ಯೋಜನೆ ಕೆರೆಗಳನ್ನು ಎಷ್ಟು ವರ್ಷಗಳಿಂದ ಗುತ್ತಿಗೆ ಹರಾಜು ಮಾಡಿರುವುದಿಲ್ಲ ಹಾಗೂ ಇದರಿಂದ ಕೆರೆವಾರು ಹಾಗೂ ವರ್ಷವಾರು ಸರ್ಕಾರದ ಆದಾಯಕ್ಕೆ ಎಷ್ಟು ನಷ್ಟ ಆಗಿದೆ ;

(ಊ) ಏತ ನೀರಾವರಿ ಯೋಜನೆ ಕೆರೆಗಳನ್ನು ಗುತ್ತಿಗೆ ಹರಾಜು ಮಾಡಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ; ಹಾಗೂ ಯಾವ ಮಾನದಂಡಗಳನ್ನು ಅನುಸರಿಸಲಾಗುವುದು ?

## ದೇವಸ್ಥಾನಗಳಿಗೆ ಅನುದಾನ ನೀಡುವ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೯೫ (೧೩೧೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನಲ್ಲಿ ಮುಜರಾಯಿ ಇಲಾಖೆಗೆ ಒಳಪಟ್ಟ ದೇವಾಲಯಗಳು ಯಾವುವು ;

(ಆ) ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ದೇವಾಲಯಗಳಿಗೆ ಕಳೆದ ಐದು ವರ್ಷದಲ್ಲಿ ಸರ್ಕಾರದಿಂದ ಮಂಜೂರಾದ ಅನುದಾನವೆಷ್ಟು ?

## ರಸ್ತೆಗಳ ಕಾಮಗಾರಿಯ ಬಗ್ಗೆ

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೮೯೬ (೧೩೮೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿಗೆ ಲೋಕೋಪಯೋಗಿ ಇಲಾಖೆಯ ವಿವಿಧ ಲೆಕ್ಕ ಶೀರ್ಷಿಕೆಯಲ್ಲಿ ರಸ್ತೆ ಮತ್ತು ಸೇತುವೆ ನಿರ್ಮಾಣಕ್ಕೆ ಕರ್ನಾಟಕ ರಾಜ್ಯ ಹೆದ್ದಾರಿ ಅಭಿವೃದ್ಧಿ ಯೋಜನೆ ಅಡಿಯಲ್ಲಿ ೨೦೨೦–೨೧ ರಿಂದ ೨೦೨೪–೨೫ನೇ ಸಾಲಿನಲ್ಲಿ ವಿವಿಧ ಕಾಮಗಾರಿಗಳಿಗೆ ಮಂಜೂರಾದ ಅನುದಾನವೆಷ್ಟು ; (ವಿವರ ನೀಡುವುದು)

(ಆ) ಸಿಂಧನೂರು ತಾಲ್ಲೂಕಿಗೆ ರಸ್ತೆಗಳ ಅಭಿವೃದ್ಧಿಗಾಗಿ ಸರ್ಕಾರವು ಯಾವ ಯಾವ ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲಾಗಿದೆ ?

## ದೇವಸ್ಥಾನಗಳಿಗೆ ಅನುದಾನ ನೀಡುವ ಕುರಿತು

**ಶ್ರೀ ಬಸನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೯೭೭ (೧೩೧೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಿಂಧನೂರು ತಾಲ್ಲೂಕಿನಲ್ಲಿ ಮುಜರಾಯಿ ಇಲಾಖೆಗೆ ಒಳಪಟ್ಟ ದೇವಾಲಯಗಳು ಯಾವುವು ;

(ಆ) ದೇವಸ್ಥಾನಗಳ ಜೀರ್ಣೋದ್ಧಾರಕ್ಕೆ ದೇವಾಲಯಗಳಿಗೆ ಕಳೆದ ಐದು ವರ್ಷದಲ್ಲಿ ಸರ್ಕಾರದಿಂದ ಮಂಜೂರಾದ ಅನುದಾನವೆಷ್ಟು ?

## ಮೀನು ಉತ್ಪಾದನೆ ಬಗ್ಗೆ

**ಶ್ರೀ ಎಸ್.ಎಲ್. ಭೋಜೇಗೌಡ (ಶಿಕ್ಷಕರ ಕ್ಷೇತ್ರ) :–**

೧೯೭೮ (೧೩೩೪) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಮೀನುಗಾರಿಕೆ ಇಲಾಖೆಯಲ್ಲಿ ಅನುಷ್ಠಾನ ಮಾಡಿರುವ ಕೇಂದ್ರ ಮತ್ತು ರಾಜ್ಯ ಸರ್ಕಾರದ ಯೋಜನೆಗಳು ಹಾಗೂ ವೆಚ್ಚ ಮಾಡಲಾದ ಅನುದಾನವೆಷ್ಟು ; (ವಿವರ ನೀಡುವುದು)

(ಆ) ಕರಾವಳಿ ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಲ್ಲಿ ಎಷ್ಟು ಮೀನು ಉತ್ಪಾದನೆ ಆಗಿದೆ ಮತ್ತು ಯಾವ ಮೀನುಗಳನ್ನು ಎಷ್ಟು ಮೌಲ್ಯಕ್ಕೆ ರಫ್ತು ಮಾಡಲಾಗಿದೆ ; (ವಿವರ ನೀಡುವುದು)

(ಇ) ರಾಜ್ಯದಲ್ಲಿ ಎಷ್ಟು ಜನ ಮೀನುಗಾರರಿದ್ದಾರೆ (ಜಿಲ್ಲಾವಾರು) ಅವರು ಮಾಡುತ್ತಿರುವ ಕಸುಬು ಹಾಗೂ ಗಳಿಸುತ್ತಿರುವ ಆದಾಯವೆಷ್ಟು ; (ವಿವರ ನೀಡುವುದು)

(ಈ) ೩ ವರ್ಷಗಳಲ್ಲಿ ಕೈಗೊಂಡಿರುವ ಕಾಮಗಾರಿಗಳು ಯಾವುವು ಮತ್ತು ಈ ಕಾಮಗಾರಿಗಳಿಗೆ ಎಷ್ಟು ಅನುದಾನ ಉಪಯೋಗಿಸಲಾಗಿದೆ ಹಾಗೂ ಯಾವ ಏಜೆನ್ಸಿಗಳಿಂದ ಕಾಮಗಾರಿ ಕೈಗೊಳ್ಳಲಾಗಿದೆ ? (ವಿವರ ನೀಡುವುದು)

## ತುಮಕೂರು ಜಿಲ್ಲೆಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ ಅವ್ಯವಸ್ಥೆಯ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೧೮೯ (೧೩೬೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅತಿ ಹೆಚ್ಚು ವಾಹನಗಳು ಸಂಚರಿಸುವ ರಾಷ್ಟ್ರೀಯ ಹೆದ್ದಾರಿಗಳು ಯಾವುವು ; ಸದರಿ ರಸ್ತೆಯಲ್ಲಿ ಪ್ರತಿನಿತ್ಯ ಸಂಚರಿಸುವ ಸರಾಸರಿ ವಾಹನಗಳ ಸಂಖ್ಯೆ ಎಷ್ಟು ;

(ಆ) ತುಮಕೂರು ಜಿಲ್ಲೆಯಲ್ಲಿ ಹಾದು ಹೋಗುವ ರಾಷ್ಟ್ರೀಯ ಹೆದ್ದಾರಿಗಳ ಸಂಖ್ಯೆ ಎಷ್ಟು ; ಅವು ಯಾವುವು ;

(ಇ) ರಾಷ್ಟ್ರೀಯ ಹೆದ್ದಾರಿ ನಿರ್ಮಾಣ ಮತ್ತು ನಿರ್ವಹಣೆಯಲ್ಲಿ ರಾಜ್ಯ ಸರ್ಕಾರದ ಪಾತ್ರವೇನು ;

(ಈ) ರಾಜಧಾನಿಗೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ೪೮ರಲ್ಲಿ (ಬೆಂಗಳೂರು–ಪುಣೆ, ಶಿರಾ ಮಾರ್ಗ) ಹಲವು ಕಡೆ ರಸ್ತೆ ಗುಂಡಿ ಬಿದ್ದಿರುವುದು, ಅರ್ಧಂಬರ್ಧ ಕಾಮಗಾರಿಗಳಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ರಸ್ತೆಗಳ ಡಾಂಬರೀಕರಣಕ್ಕೆ ಮತ್ತು ಕಾಮಗಾರಿಗಳನ್ನು ತ್ವರಿತವಾಗಿ ಕೈಗೊಳ್ಳಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಉ) ರಾಷ್ಟ್ರೀಯ ಹೆದ್ದಾರಿ ೨೩೪ ಗೌರಿಬಿದನೂರು–ಮಧುಗಿರಿ–ಶಿರಾ ಮಾರ್ಗ (ಮಳವಳ್ಳಿ ರಸ್ತೆ) ಸಹ ಸಂಪೂರ್ಣ ಹದೆಗಟ್ಟಿದ್ದು ಈ ರಸ್ತೆಯ ಸುಧಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

## ರೈತರ ಹೊಲದಲ್ಲಿ ಲೋಕೋಪಯೋಗಿ ಇಲಾಖೆಯವರು ನಿರ್ಮಿಸಿರುವ ರಸ್ತೆಗೆ ಪರಿಹಾರ ನೀಡುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೧೧೦೦ (೧೩೬೦) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಲೋಕೋಪಯೋಗಿ ಇಲಾಖೆಯಿಂದ ರಸ್ತೆ ನಿರ್ಮಾಣಕ್ಕೆ ಭೂ ಸ್ವಾಧೀನ ಕೈಗೊಂಡಲ್ಲಿ ನೀಡುವ ಪರಿಹಾರದ ಮೊತ್ತವನ್ನು ಯಾವ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ ;

(ಆ) ಹಲವು ಗ್ರಾಮಗಳ ಖಾಸಗಿ ಜಮೀನಿನಲ್ಲಿ ಈ ಹಿಂದೆ ರಸ್ತೆ ನಿರ್ಮಾಣ ವಾಗಿದ್ದರೂ ಸಂಬಂಧಿಸಿದ ಭೂ ಮಾಲೀಕರಿಗೆ ಪರಿಹಾರ ನೀಡದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ ಸಂಬಂಧಿಸಿದ ರೈತರಿಗೆ ಯಾವಾಗ ಪರಿಹಾರ ನೀಡಲಾಗುವುದು ;

(ಇ) ಈ ಹಿಂದೆ ಚಿಕ್ಕದಾದ ರಸ್ತೆಯಿದ್ದು ತದನಂತರ ರಸ್ತೆ ಅಗಲೀಕರಣ ಮಾಡಿದ ನಂತರ ರೈತರು ತಮ್ಮ ಆರ್.ಟಿ.ಸಿಯಲ್ಲಿ ದಾಖಲಾಗಿರುವ ವಿಸ್ತೀರ್ಣಕ್ಕಿಂತ ಹೆಚ್ಚು ಭೂಮಿಯನ್ನು ಕಳೆದುಕೊಂಡಲ್ಲಿ ರೈತರಿಗೆ ಹೆಚ್ಚಿನ ಪರಿಹಾರ ನೀಡಲಾಗುವುದೇ ?

## ರೈತರ ಹೊಲಗಳಿಗೆ ತೆರಳುವ ರಸ್ತೆ ನಿರ್ಮಾಣ ಮತ್ತು ಒತ್ತುವರಿ ತೆರಸುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೧೧೦೧ (೧೩೬೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಲವು ಗ್ರಾಮಗಳಲ್ಲಿ ರೈತರ ಹೊಲಗಳಿಗೆ ತೆರಳಲು ಇರುವ ಕಾವಲುದಾರಿ ಮತ್ತು ಬಂಡಿ ಜಾಡು ರಸ್ತೆಯನ್ನು ಕೆಲವು ಭೂ ಮಾಲೀಕರು ಒತ್ತುವರಿ ಮಾಡಿಕೊಂಡು ರೈತರಿಗೆ ತೊಂದರೆ ನೀಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಸದರಿ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಕೆಲವು ಹೊಲಗಳಿಗೆ ತೋಟಗಳಿಗೆ ನಕಾಶೆ ರಸ್ತೆಯೇ ಇಲ್ಲದ ಕಾರಣ ಅವರು ತೋಟಕ್ಕೆ ಕೃಷಿ ಸಲಕರಣೆ. ಗೊಬ್ಬರ, ತೋಟದ ಬೆಳೆಗಳ ಸಾಗಾಟಕ್ಕೆ ತೊಂದರೆ ಅನುಭವಿಸುತ್ತಿದ್ದು, ಅವರು ರಸ್ತೆ ಸೌಲಭ್ಯ ಪಡೆಯುವ ವಿಧಾನ ಯಾವುದು ;

(ಈ) ನಕಾಶೆ ರಸ್ತೆಯೇ ಇಲ್ಲದ ಜಮೀನಿಗೆ ರಸ್ತೆ ಸೌಲಭ್ಯ ಒದಗಿಸಲು ಜಮೀನಿನಲ್ಲಿ ಇರುವ ಖರಾಬು ಜಾಗವನ್ನು ಉಪಯೋಗಿಸಬಹುದೇ ? (ಸುತ್ತೋಲೆ/ಆದೇಶದ ಪ್ರತಿಯೊಂದಿಗೆ ವಿವರವಾದ ಮಾಹಿತಿ ನೀಡುವುದು)

(ಉ) ರೈತರು ಭೂಮಿಯ ಮಾರುಕಟ್ಟೆಯ ಬೆಲೆ ನೀಡಿದ್ದಲ್ಲಿ ಹೊಲ/ತೋಟಕ್ಕೆ ರಸ್ತೆಯನ್ನು ಸರ್ಕಾರದ ವತಿಯಿಂದ ಭೂಮಿ ಖರೀದಿಸಿ ರೈತರಿಗೆ ರಸ್ತೆಯನ್ನು ಮಾಡಿಕೊಡಲಾಗುವುದೇ ? (ವಿವರ ನೀಡುವುದು)

## ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಬಡ್ತಿಗೆ ವಿಳಂಬ ಮಾಡುತ್ತಿರುವ ಬಗ್ಗೆ

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) :–**

೧೧೦೨ (೧೩೮೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಕಾರ್ಯನಿರ್ವಹಿಸುತ್ತಿರುವ ಉಪ ನೋಂದಣಾಧಿಕಾರಿಗಳ, ಜಿಲ್ಲಾ ನೋಂದಣಾಧಿಕಾರಿಗಳ ಕಛೇರಿಗಳ ಸಂಖ್ಯೆ ಎಷ್ಟು ; ಕಛೇರಿವಾರು ಸಿಬ್ಬಂದಿಗಳ ಸಂಖ್ಯೆ, ಖಾಲಿ ಹುದ್ದೆ ಸಹಿತವಾಗಿ ಪ್ರತ್ಯೇಕವಾಗಿ ಮಾಹಿತಿ ಒದಗಿಸುವುದು ;

(ಆ) ಮೇಲ್ಕಂಡ ಕಛೇರಿಗಳಲ್ಲಿ ಪ್ರಭಾರ, ನಿಯೋಜನೆಯ ಮೇಲೆ ಕಾರ್ಯನಿರ್ವಹಿಸುತ್ತಿರುವವರ ಸಂಖ್ಯೆ ಎಷ್ಟು ; (ಹುದ್ದೆವಾರು ಕಾರಣ ಸಹಿತ ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಈ ಇಲಾಖೆಗಳಲ್ಲಿ ನಿಗಧಿತ ಸೇವಾವಧಿ ಪೂರ್ಣಗೊಳಿಸಿದ ನಂತರವೂ ಮುಂಬಡ್ತಿ ನೀಡಲು ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕೆ.ಸಿ.ಎಸ್.ಆರ್. ನಿಯಮಾವಳಿ ಮತ್ತು ಮುಂಬಡ್ತಿ ನೀಡುವ ಆದೇಶಗಳ ಪಾಲನೆಯಾಗದಿರುವುದು ನಿಜವೇ ; ಹಾಗಿದ್ದಲ್ಲಿ ವಿವಿಧ ಹಂತದ ಹುದ್ದೆಗಳಿಗೆ ಮುಂಬಡ್ತಿ ನೀಡಿಕೆಗೆ ವಿಳಂಬವಾಗಲು ಕಾರಣ ಏನು; ಇದಕ್ಕಾಗಿ ಯಾವ ಕ್ರಮ/ಪರಿಹಾರೋಪಾಯಗಳನ್ನು ಸರ್ಕಾರ ಕಂಡುಕೊಂಡಿದೆ ? (ಸಂಪೂರ್ಣ ಮಾಹಿತಿಯನ್ನು ನೀಡುವುದು)

## ರಾಜ್ಯದ ಗ್ರಾಮ ಆಡಳಿತ ಅಧಿಕಾರಿಗಳ ಕಛೇರಿ ಕುರಿತು

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೦೩ (೭೪೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗ್ರಾಮ ಆಡಳಿತ ಅಧಿಕಾರಿಗಳಿಗೆ ಕೇಂದ್ರ ಸ್ಥಾನದಲ್ಲಿ ಸರ್ಕಾರಿ ಕಛೇರಿ ಇವೆಯೇ ; (ವಿವರ ನೀಡುವುದು)

(ಆ) ಈ ಅಧಿಕಾರಿಗಳಿಗೆ ಕಛೇರಿಯಲ್ಲಿ ಇತ್ತೀಚೆಗೆ ನೀಡುವ ಕೆಲಸಗಳಿಂದ E-office ಮತ್ತು ಮೊಬೈಲ್ ಆಪ್ ಗಳಲ್ಲಿ ಮಾಡುವಂತಹ ಕೆಲಸಗಳಿಗೆ ಮೂಲಭೂತ ಸೌಕರ್ಯ ನೀಡಲಾಗಿದೆಯೇ ;

(ಇ) ಸದರಿ ಅಧಿಕಾರಿಗಳ ಬಳಿ ಪಹಣಿಗೆ ಆಧಾರ್ ಲಿಂಕ್ ಮಾಡಿಸುತ್ತಿದ್ದು, ಈ ಬಗ್ಗೆ ಯಾವುದಾದರೂ ಸರ್ಕಾರಿ ಆದೇಶ ಹೊರಡಿಸಲಾಗಿದೆಯೇ ; ಹಾಗೂ ಇದರಿಂದ ಸಾರ್ವಜನಿಕರಿಗೆ ಆಗುವ ಉಪಯೋಗಗಳ ಮಾಹಿತಿಯನ್ನು ಅಧಿಕೃತವಾಗಿ ಪ್ರಚಾರ ಪಡಿಸಿದೆಯೇ ; (ವಿವರ ನೀಡುವುದು)

(ಈ) ಗ್ರಾಮ ಆಡಳಿತ ಅಧಿಕಾರಿಗಳಿಗೆ ಕಾಲ ಕಾಲಕ್ಕೆ ಮುಂಬಡ್ತಿ ನೀಡಲಾಗುತ್ತಿದೆಯೇ ? (ವಿವರಿಸುವುದು)

## ಕೊಪ್ಪಳ ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳತ್ತಿರುವ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೦೪ (೧೩೨೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೃಷಿ ಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಲು ಇರುವ ಅರ್ಹತೆ/ಮಾನದಂಡಗಳೇನು ;

(ಆ) ಕೊಪ್ಪಳ ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಲ್ಲಿ ಕೃಷಿಭೂಮಿಯನ್ನು ಕೃಷಿಯೇತರ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಲು ಅನುಮತಿ ನೀಡಲಾಗಿದೆಯೇ ಹಾಗೂ ಅನುಮತಿ ನೀಡಿದ ಎಕರೆಗಳೆಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಇ) ಕೊಪ್ಪಳ ಜಿಲ್ಲೆಯಲ್ಲಿ ಕೃಷಿ ಜಮೀನನ್ನು ಕಾರ್ಖಾನೆಗಳಿಗೆ ಮತ್ತು ವಾಸದ ಉದ್ದೇಶಕ್ಕಾಗಿ ಉಪಯೋಗಿಸಿಕೊಂಡ ಜಮೀನುಗಳು ಎಷ್ಟು; (ತಾಲ್ಲೂಕುವಾರು ಮಾಹಿತಿ ನೀಡುವುದು)

(ಈ) ಕೊಪ್ಪಳ ಜಿಲ್ಲೆಯಲ್ಲಿ ಇರುವ ಒಟ್ಟು ಸರ್ಕಾರಿ ಜಮೀನು ಎಷ್ಟು? (ತಾಲ್ಲೂಕುವಾರು ಸರ್ವೇ ನಂಬರ್‌ಗಳವಾರು ಸಂಪೂರ್ಣ ಮಾಹಿತಿ ನೀಡುವುದು)

## ಕೊಪ್ಪಳ–ಹೊಸಪೇಟೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೦೫ (೧೩೨೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಪ್ಪಳ ದಿಂದ ಹೊಸಪೇಟೆ ಸಂಪರ್ಕಿಸುವ ರಾಷ್ಟ್ರೀಯ ಹೆದ್ದಾರಿ ಎಷ್ಟು ಕಿ.ಮೀ. ಇದೆ ; ಈ ಹೆದ್ದಾರಿಯನ್ನು ನಿರ್ಮಾಣಮಾಡಿ

ನಿರ್ವಹಣೆ ಮಾಡುತ್ತಿರುವ ಸಂಸ್ಥೆ ಯಾವುದು ; ಇದು ಮಾಡಿಕೊಂಡಿರುವ ಒಡಂಬಡಿಕೆ ಅನ್ವಯ ಇವರ ಅವಧಿ ಯಾವಾಗ ಮುಗಿದಿದೆ ; (ವಿವರವಾದ ಮಾಹಿತಿ ನೀಡುವುದು)

(ಆ) ಸದರಿ ರಸ್ತೆಯ ನಿರ್ವಹಣೆಯ ಸಂಸ್ಥೆಯೊಂದಿಗೆ ಒಡಂಬಡಿಕೆ ಮಾಡಿಕೊಂಡಿರುವ ಅವಧಿ ಮುಗಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲ, ರಸ್ತೆಯನ್ನು ಟೋಲ್ ಮುಕ್ತ ರಸ್ತೆಯನ್ನಾಗಿ ಮಾಡದೇ ಸಂಸ್ಥೆಯೇ ಟೋಲ್ ಶುಲ್ಕವನ್ನು ಸಂಗ್ರಹಿಸುತ್ತಿರುವುದು ನ್ಯಾಯ ಸಮ್ಮತವೇ ; ಒಂದು ದಿನಕ್ಕೆ ಸರಾಸರಿ ಹಿಟ್ನಾಳ ಟೋಲ್‌ನಲ್ಲಿ ಸಂಗ್ರಹವಾಗುತ್ತಿರುವ ಶುಲ್ಕವೆಷ್ಟು ;

(ಇ) ಹಿಟ್ನಾಳ ಟೋಲ್ ನಲ್ಲಿ ಮರಳು ಟ್ರಾಕ್ಟರ್‌ಗಳಿಗೆ ಪ್ರತ್ಯೇಕವಾಗಿ ಶುಲ್ಕ ಕಟ್ಟದೆ ಹೋಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು ;

(ಈ) ಟೋಲ್‌ನಲ್ಲಿ ಪ್ರತ್ಯೇಕವಾಗಿ ಮರಳಿನ ಟ್ರಾಕ್ಟರ್‌ಗಳು ಹೋಗುತ್ತಿರುವ ಒಂದು ವರ್ಷದ ವಿಡಿಯೋ ನೀಡಲಾಗುವುದೇ ?

## ರಾಜ್ಯದಲ್ಲಿನ ಪಶು ಸಂಜೀವಿನಿ ಯೋಜನೆ ಕುರಿತು

**ಶ್ರೀಮತಿ ಹೇಮಲತಾ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೦೬ (೧೩೨೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪಶು ಸಂಜೀವಿನಿ ಯೋಜನೆ ಜಾರಿಯಲ್ಲಿದೆಯೇ ; ಈ ಯೋಜನೆಯಡಿ ಪ್ರಸ್ತುತ ವರ್ಷದಲ್ಲಿ ಎಷ್ಟು ಅಂಬ್ಯುಲೆನ್ಸ್‌ಗಳನ್ನು ಖರೀದಿಸಲಾಗಿದೆ ; ಹಾಗೂ ಈ ಅಂಬ್ಯುಲೆನ್ಸ್‌ಗಳನ್ನು ಯಾವ ಯಾವ ಜಿಲ್ಲೆಗಳಿಗೆ ವಿತರಿಸಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಪಶು ಸಂಜೀವಿನಿ ಯೋಜನೆಯಡಿ ಖರೀದಿಸಲಾಗಿರುವ ಅಂಬ್ಯುಲೆನ್ಸ್‌ಗಳನ್ನು ಸಿಬ್ಬಂದಿಗಳನ್ನು ನೇಮಿಸದ ಕಾರಣ ಈ

ವಾಹನಗಳು ನಿಂತಲ್ಲೇ ಧೂಳು ಹಿಡಿಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಈ ಅಂಬ್ಯುಲೆನ್ಸ್‌ಗಳನ್ನು ಪೂರ್ಣ ಪ್ರಮಾಣದಲ್ಲಿ ಬಳಕೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ಖಾಲಿ ಇರುವ ಪಶು ವೈದ್ಯರ ಹುದ್ದೆಗಳು ಎಷ್ಟು; ಅವುಗಳನ್ನು ಭರ್ತಿ ಮಾಡಲು ಸರ್ಕಾರ ಕೈಗೊಂಡ ಕ್ರಮಗಳೇನು ? (ಕೊಪ್ಪಳ ಜಿಲ್ಲೆಯ ತಾಲ್ಲೂಕುವಾರು ಮಾಹಿತಿ ನೀಡುವುದು)

## ಎಲೆಕ್ಟ್ರಿಕ್ ಆಟೋ ರಿಕ್ಷಾಗಳಿಗೆ ಪರ್ಮಿಟ್ ಮತ್ತು ನಿಗದಿತ ಸ್ಥಳ ಗುರುತಿಸುವ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೦೭ (೧೩೦೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಲೆಕ್ಟ್ರಿಕ್ ಆಟೋ ರಿಕ್ಷಾಗಳು ರಾಜ್ಯಾದ್ಯಂತ ಸಂಚರಿಸುತ್ತಿದ್ದು, ಆಟೋ ರಿಕ್ಷಾಗಳಿಗೆ ಪರ್ಮಿಟ್ ಮತ್ತು ನಿಗಧಿತ ಸ್ಥಳ ಗುರುತು ಪಡಿಸದೇ ಇರುವುದರಿಂದ ನಗರ ಸಂಚಾರಿ ವ್ಯವಸ್ಥೆಯಲ್ಲಿ ಗೊಂದಲ ಉಂಟಾಗಿರುವುದನ್ನು ಸರಿಪಡಿಸಲು ಕೈಗೊಂಡ ಕ್ರಮವೇನು ;

(ಆ) ಅನುಮತಿ ಪಡೆದು ರಿಕ್ಷಾ ಚಾಲನೆ ಮಾಡುವ ಚಾಲಕರಿಗೆ ಇರುವ ಸಂಚಾರಿ ನಿಯಮಗಳು ಎಲೆಕ್ಟ್ರಿಕ್ ಆಟೋ ರಿಕ್ಷಾಗಳಿಗೆ ಅನ್ವಯ ಆಗುವುದಿಲ್ಲವೇ ; ಇದ್ದಲ್ಲಿ ಈ ಬಗ್ಗೆ ಇಲಾಖೆ ಕೈಗೊಂಡ ಕ್ರಮವೇನು ; (ವಿವರ ನೀಡುವುದು)

(ಇ) ಮಂಗಳೂರು ನಗರದಲ್ಲಿ ಇರುವ ರಿಕ್ಷಾಗಳ ಸಂಖ್ಯೆ ಎಷ್ಟು; ಪರ್ಮಿಟ್‌ಗಳನ್ನು ನೀಡಲಾಗಿರುವ ಸಂಖ್ಯೆ ಎಷ್ಟು ; ಯಾವ ಯಾವ ಉದ್ದೇಶಕ್ಕಾಗಿ ನೀಡಲಾಗಿದೆ ; (ವಿವರ ನೀಡುವುದು)

(ಈ) ೨೦೨೨–೨೩; ೨೦೨೩–೨೪ ಮತ್ತು ೨೦೨೪–೨೫ನೇ ಸಾಲಿನಲ್ಲಿ ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಒಳಗಡೆ ನೋಂದಾವಣೆಗೊಂಡ ರಿಕ್ಷಾಗಳ ಸಂಖ್ಯೆ ಎಷ್ಟು ; ಯಾವ ಪರ್ಮಿಟ್ ನೀಡಲಾಗಿದೆ ; ಇದರಲ್ಲಿ ಎಲೆಕ್ಟ್ರಿಕ್ ಆಟೋ ರಿಕ್ಷಾಗಳ ಸಂಖ್ಯೆ ಎಷ್ಟು ; (ವಿವರ ನೀಡುವುದು)

(ಉ) ರಾಜ್ಯಮಟ್ಟದಲ್ಲಿ ಎಲೆಕ್ಟ್ರಿಕಲ್ ಆಟೋ ರಿಕ್ಷಾಗಳ ಸಂಚಾರಿ ಮತ್ತು ಮೋಟಾರು ವಾಹನ ಕಾಯ್ದೆಯಡಿ ತರಲು ಇಲಾಖೆ ಮುಂದಿರುವ ಕ್ರಮವೇನು ; ಸರ್ಕಾರಕ್ಕೆ ಪಾವತಿ ಮಾಡುವ ಪರ್ಮಿಟ್ ಮತ್ತು ಇತರ ವೆಚ್ಚಗಳು ಎಷ್ಟು ; (ವಿವರ ನೀಡುವುದು)

(ಊ) ಎಲೆಕ್ಟ್ರಿಕ್ ಆಟೋ ರಿಕ್ಷಾಗಳ ನೋಂದಾವಣೆ ಮತ್ತು ಚಾಲನೆ ಮಾಡಲು ಲೈಸನ್ಸ್ ಅವಶ್ಯಕತೆ ಇದೆಯೇ ; ಎಲೆಕ್ಟ್ರಿಕಲ್ ಆಟೋ ರಿಕ್ಷಾಗಳು ಸಂಚರಿಸಲು ಇರುವ ನಿಯಮಗಳೇನು ? (ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಶಾಲೆ/ಕಾಲೇಜು ಹಾಗೂ ಹಾಸ್ಟೆಲ್‌ಗಳ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೦೮ (೧೩೦೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಇಲಾಖೆಯಿಂದ ನಡೆಸಲ್ಪಡುವ ಶಾಲೆ/ಕಾಲೇಜುಗಳು ಹಾಗೂ ಹಾಸ್ಟೆಲ್‌ಗಳ ಸಂಖ್ಯೆ ಎಷ್ಟು ; (ಸಂಪೂರ್ಣ ವಿವರ ನೀಡುವುದು)

(ಆ) ಹಾಸ್ಟೆಲ್‌ಗಳಿಗಾಗಿ ಎಷ್ಟು ಅರ್ಜಿಗಳು ಬಂದಿದೆ ; ೨೦೨೨–೨೩, ೨೦೨೩–೨೪ ಮತ್ತು ೨೦೨೪–೨೫ ರಲ್ಲಿ ವಸತಿ ಶಾಲೆಗಳಲ್ಲಿ ಎಷ್ಟು ಮಕ್ಕಳಿಗೆ ಪ್ರವೇಶ ನೀಡಲಾಗಿದೆ ; ಯಾವ ಯಾವ

ಸಮುದಾಯದವರಿಗೆ ನೀಡಲಾಗಿದೆ ; (ಸಂಪೂರ್ಣ ವಿವರ ನೀಡುವುದು)

(ಇ) ಶಾಲೆ/ವಸತಿ ಶಾಲೆಗಳಲ್ಲಿ ಕಳೆದ ೦೩ ವರ್ಷಗಳಲ್ಲಿ ಕರೆಯಲಾದ ಟೆಂಡರ್ ಎಷ್ಟು; ಯಾರಿಗೆ ಟೆಂಡರ್ ನೀಡಲಾಗಿದೆ ; ಯಾವ ಯಾವ ಉದ್ದೇಶಕ್ಕಾಗಿ ; (ವಿವರ ನೀಡುವುದು)

(ಈ) ಕಳೆದ ೦೩ ವರ್ಷಗಳಿಂದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ/ ನಿರ್ದೇಶನಾಲಯಗಳಲ್ಲಿ ಕರೆದ ಟೆಂಡರ್‌ಗಳ ಸಂಖ್ಯೆ ಎಷ್ಟು ? (ವಿವರ ನೀಡುವುದು)

## ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ವ್ಯಾಪಾರಕ್ಕಾಗಿ ನೀಡಿರುವ ಸಾಲದ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೧೯ (೧೩೦೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಮತ್ತು ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ ವತಿಯಿಂದ ಕಳೆದ ೦೩ ವರ್ಷಗಳಿಂದ ನೀಡಲ್ಪಟ್ಟ ವಿವಿಧ ಯೋಜನೆಗಳ ಫಲಾನುಭವಿಗಳ ಸಂಖ್ಯೆ ಎಷ್ಟು ; (ಪಟ್ಟಿ ನೀಡುವುದು)

(ಆ) ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ/ಕೆ.ಎಂ.ಡಿ.ಸಿ.ನಿಂದ ವ್ಯಾಪಾರಕ್ಕಾಗಿ ನೀಡಿದ ಫಲಾನುಭವಿಗಳ ಸಂಖ್ಯೆ ಎಷ್ಟು ; ವಿನಿಯೋಗಿಸಿದ ಹಣ ಎಷ್ಟು ; (ವಿವರ ನೀಡುವುದು)

(ಇ) ಕಳೆದ ೦೩ ವರ್ಷಗಳಿಂದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯಿಂದ ಅರಿವು ಯೋಜನೆ ಅನ್ವಯ ಎಷ್ಟು ವಿದ್ಯಾರ್ಥಿಗಳಿಗೆ ಶಿಕ್ಷಣಕ್ಕಾಗಿ ಸಾಲಸೌಲಭ್ಯ ನೀಡಲಾಗಿದೆ ; ಯಾವ ಕೋರ್ಸ್‌ಗಾಗಿ ನೀಡಲಾಗಿದೆ ? (ವಿವರ ನೀಡುವುದು)

## ಮಂಗಳೂರು ನಗರದಲ್ಲಿ ಕೆ.ಎಸ್.ಆರ್.ಟಿ.ಸಿ. ಬಸ್‌ಗಳ ನಿಲ್ದಾಣದ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೧೦ (೧೩೧೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂಗಳೂರು ನಗರದಲ್ಲಿರುವ ಕೆ.ಎಸ್.ಆರ್.ಟಿ.ಸಿ.ಯ ಪ್ರಸ್ತುತ ನಿಲ್ದಾಣದಿಂದ ಸಂಚರಿಸುವ ಬಸ್‌ಗಳಿಗೆ ಮೂಲ ಸೌಕರ್ಯಕ್ಕೆ ಚಿಕ್ಕದಾಗಿದ್ದು, ಇದನ್ನು ವಿಸ್ತರಣೆ ಮಾಡುವ ಪ್ರಸ್ತಾವನೆ ಇದೆಯೇ ; ಪ್ರಸ್ತುತ ಈ ನಿಲ್ದಾಣದಿಂದ ಸಂಚರಿಸುವ ಬಸ್ಸುಗಳ ಸಂಖ್ಯೆ ಎಷ್ಟು ;

(ಆ) ಮೂಲ್ಕಿ–ಮೂಡಬಿದ್ರೆ–ಕಾರ್ಕಳ ಕೆ.ಎಸ್.ಆರ್.ಟಿ.ಸಿ. ಬಸ್ ನಿಲ್ದಾಣಗಳ ರಚನೆಯ ಬಗ್ಗೆ ಇಲಾಖೆ ಮುಂದೆ ಪ್ರಸ್ತಾವನೆ ಇದೆಯೇ ; (ವಿವರ ನೀಡುವುದು)

(ಇ) ಮಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಕೆ.ಎಸ್.ಆರ್.ಟಿ.ಸಿ. ನಗರ ಸಾರಿಗೆಗೆ ಪ್ರತ್ಯೇಕವಾದ ನಿಲ್ದಾಣವನ್ನು ಸ್ಥಾಪಿಸಬೇಕೆಂಬ ಬೇಡಿಕೆ ಇದ್ದು, ಈ ಬಗ್ಗೆ ಕೈಗೊಂಡ ಕ್ರಮವೇನು ? (ವಿವರ ನೀಡುವುದು)

## ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಶುಸಂಗೋಪನೆ ಕಾಲೇಜು ಸ್ಥಾಪನೆ ಬಗ್ಗೆ

**ಶ್ರೀ ಐವನ್ ಡಿ'ಸೋಜಾ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೧೧ (೧೩೧೧) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪುತ್ತೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯಲ್ಲಿ ಪಶುಸಂಗೋಪನೆ ಇಲಾಖೆಯಿಂದ ಪ್ರಾರಂಭಿಸಲು ಉದ್ದೇಶಿಸಿದ ಪಶು ವೈದ್ಯಕೀಯ

ಕಾಲೇಜು ಸ್ಥಾಪಿಸುವ ಯೋಜನೆ ಯಾವ ಹಂತದಲ್ಲಿದೆ ; ಈ ಯೋಜನೆ ಯಾವ ಕಾಲಮಿತಿಯೊಳಗೆ ಪ್ರಾರಂಭಗೊಳ್ಳುವುದು; ಇದಕ್ಕೆ ತಗುಲಿದ ವೆಚ್ಚ ಎಷ್ಟು; (ವಿವರ ನೀಡುವುದು)

(ಆ) ಪುತ್ತೂರು ವಿಧಾನಸಭಾ ಕ್ಷೇತ್ರದಲ್ಲಿ ಪಶು ವೈದ್ಯಕೀಯ ಕಾಲೇಜು/ ವಿಶ್ವವಿದ್ಯಾನಿಲಯ ಪ್ರಾರಂಭಿಸಬೇಕೆಂಬ ಬೇಡಿಕೆಯನ್ನು ಇಲಾಖೆ ಕಾರ್ಯಗತಗೊಳಿಸುವುದೇ ; (ವಿವರ ನೀಡುವುದು)

(ಇ) ಮಂಗಳೂರು ನಗರದಲ್ಲಿ ಇರುವ ಪಶು ವೈದ್ಯಕೀಯ ಆಸ್ಪತ್ರೆಗಳಲ್ಲಿ ವೈದ್ಯರುಗಳ ಕೊರತೆ ಇರುವುದೆಂದು ವರದಿಗಳು ಪ್ರಕಟವಾಗಿರುವುದು ನಿಜವೇ; ಪ್ರಸ್ತುತ ಇಲ್ಲಿ ಎಷ್ಟು ಆಸ್ಪತ್ರೆ/ಕ್ಲಿನಿಕ್ ಕಾರ್ಯನಿರ್ವಹಿಸುತ್ತಿವೆ ; ಇವುಗಳಲ್ಲಿ ಖಾಲಿ ಇರುವ ಹುದ್ದೆಗಳೆಷ್ಟು ಹಾಗೂ ಭರ್ತಿ ಮಾಡಲು ಇಲಾಖೆ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಖರಾಬ್ ಜಮೀನುಗಳ ನಿರ್ಧರಣಾ ಸಮಿತಿ ಬಗ್ಗೆ

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೧೨ (೧೩೦೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಒಬ್ಬ ರೈತನ ಹಿಡುವಳಿ ಜಮೀನಿನಲ್ಲಿ ಸಾಗುವಳಿಗೆ ಯೋಗ್ಯವಲ್ಲದ ಕಲ್ಲು, ಬಂಡೆ, ಹಳ್ಳ, ತಗ್ಗಿನ ಪ್ರದೇಶ, ಮರಡಿ ಇತ್ಯಾದಿ ಖರಾಬ್ ಜಮೀನುಗಳು ಸರ್ಕಾರಕ್ಕೆ ಸೇರಿದ ಸ್ವತ್ತೇ ಅಥವಾ ಹಿಡುವಳಿದಾರರಿಗೆ ಸೇರಿದ ಸ್ವತ್ತೇ ; (ಸರ್ಕಾರದ ಆದೇಶ/ಅಧಿಸೂಚನೆ/ಸುತ್ತೋಲೆ ಪ್ರತಿಯನ್ನು ನೀಡುವುದರೊಂದಿಗೆ ವಿವರ ನೀಡುವುದು)

(ಆ) ಇಂತಹ ಜಮೀನುಗಳನ್ನು ರುಜುವಾತು ಪಡಿಸುವ ದಾಖಲೆಗಳನ್ನು ಪರಿಶೀಲಿಸಿ ನಿರ್ಧರಿಸಲು ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ "ಖರಾಬ್ ಜಮೀನುಗಳ ನಿರ್ಧರಣಾ ಸಮಿತಿಯನ್ನು" ರಚನೆ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ಈ ನಿರ್ಧರಣಾ ಸಮಿತಿಗಳು ಇಲ್ಲಿಯವರೆಗೆ ಎಷ್ಟು ಸಭೆಗಳನ್ನು ನಡೆಸಿ ಪರಿಶೀಲನಾ ವರದಿಗಳನ್ನು ಸಲ್ಲಿಸಿರುತ್ತವೆ ; (ಜಿಲ್ಲಾವಾರು ಮಾಹಿತಿಯನ್ನು ಸಲ್ಲಿಸುವುದು)

(ಈ) ನಿರ್ಧರಣೆ ಸಮಿತಿಯ ಅಭಿಪ್ರಾಯಗಳನ್ನು ಆಧರಿಸಿ, ಸಂಬಂಧಪಟ್ಟ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಆದೇಶ ಹೊರಡಿಸತಕ್ಕದ್ದು ಎಂದು ಸರ್ಕಾರದ ದಿನಾಂಕ:೧೬.೦೫.೨೦೧೮ರ ಆದೇಶದಲ್ಲಿ ಸ್ಪಷ್ಟವಾಗಿ ಹೇಳಲಾಗಿದೆಯೇ ;

(ಉ) ಹೇಳಲಾಗಿದ್ದಲ್ಲಿ, ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳು ಇಲ್ಲಿಯ ತನಕ ಎಷ್ಟು ಪ್ರಕರಣಗಳಲ್ಲಿ ಆದೇಶಗಳನ್ನು ಹೊರಡಿಸಿದ್ದಾರೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಊ) ಸರ್ಕಾರದ ಆದೇಶ ಸಂಖ್ಯೆ: ಆರ್.ಡಿ.೦೫ಎಲ್.ಜಿ.ಇ.೨೦೧೮, ದಿನಾಂಕ:೧೬.೦೫.೨೦೧೮ರ ಆದೇಶ ಇನ್ನು ಇಲ್ಲಿಯವರೆಗೆ ಜಾರಿಯಲ್ಲಿದೆಯೇ ? (ವಿವರ ನೀಡುವುದು)

## ಸರ್ವೆ ಅಳತೆಗೆ ಬಳಸುತ್ತಿದ್ದ ಸರಪಳಿ ಬದಲಿಗೆ ರೋವರ್ ಬಳಕೆ ಕುರಿತು

**ಶ್ರೀ ಟಿ.ಎನ್. ಜವರಾಯಿ ಗೌಡ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೧೩ (೧೨೭೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಭೂಮಿ ಸರ್ವೆ ಅಳತೆಗೆ ಬಳಸುತ್ತಿದ್ದ ಸರಪಳಿ ಪದ್ಧತಿ ಬದಲಿಗೆ ಆಧುನಿಕ ತಂತ್ರಜ್ಞಾನ ಆಧಾರಿತ ರೋವರ್ ಬಳಕೆ ಮಾಡಲಾಗುತ್ತಿದೆಯೇ ;

(ಆ) ಹಾಗಿದ್ದಲ್ಲಿ, ಈ ರೋವರ್ ಬಳಕೆಯ ವೈಶಿಷ್ಟ್ಯವೇನು ; ಹಾಗೂ ಇದರ ಕಾರ್ಯ ಚಟುವಟಿಕೆಗಳೇನು ; (ಸಂಪೂರ್ಣ ವಿವರಣೆ ನೀಡುವುದು)

(ಇ) ಈ ರೋವರ್ ಆಧಾರಿತ ಸರ್ವೆ ಮಾಡಲು ಈಗಾಗಲೇ ಪ್ರಯೋಗಿಕವಾಗಿ ಯಾವುದಾದರೂ ಜಿಲ್ಲೆಯೊಂದನ್ನು ಆಯ್ಕೆ ಮಾಡಿಕೊಂಡು ಸರ್ವೆ ಕಾರ್ಯ ಮಾಡಲಾಗಿದೆಯೇ ; (ವಿವರ ನೀಡುವುದು)

(ಈ) ಆಧುನಿಕ ತಂತ್ರಜ್ಞಾನ ಆಧಾರಿತ ರೋವರ್ ಸರ್ವೆ ಕಾರ್ಯವನ್ನು ರಾಜ್ಯದಲ್ಲಿ ಎಂದಿನಿಂದ ಜಾರಿಗೆ ತರಲಾಗಿದೆ ; (ಸ್ಪಷ್ಟಪಡಿಸುವುದು)

(ಉ) ಇದೇ ರೀತಿಯಾಗಿ ಸರ್ವೆ ಇಲಾಖೆಯಲ್ಲಿ ಈಗಿನ ಆಧುನಿಕ ಕಂಪ್ಯೂಟರ್ ಯುಗದಲ್ಲಿ ಹೊಸದಾಗಿ ನವೀನ ಮಾದರಿಯ ಯಾವ ಯಾವ ತಂತ್ರಜ್ಞಾನಗಳನ್ನು ಅಳವಡಿಸಿಕೊಳ್ಳಲಾಗುತ್ತಿದೆ ? (ವಿವರವಾದ ಮಾಹಿತಿ ಒದಗಿಸುವುದು)

## ಬಸ್ ಸಂಚಾರವನ್ನು ಸಮರ್ಪಕವಾಗಿ ಜಾರಿಗೊಳಿಸುವ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೧೪ (೧೨೮೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ರಾಮೋಹಳ್ಳಿಯಿಂದ ೨೨೭/೧ ನಂಬರ್ ಬಸ್ಸು ಬೆಳಗ್ಗೆ ೦೮.೩೦ ಗಂಟೆಗೆ ಕೆಂಗೇರಿ ಮಾರ್ಗವಾಗಿ ಟೌನ್‌ಹಾಲ್ ಮೂಲಕ ಮೈಸೂರು ಬ್ಯಾಂಕ್ ಮಾರ್ಗವಾಗಿ ಹೈಕೋರ್ಟ್/ವಿಧಾನಸೌಧಕ್ಕೆ ಆಗಮಿಸುತ್ತಿದ್ದು, ಸುಮಾರು ೪ ತಿಂಗಳುಗಳಿಂದ ರಾಮೋಹಳ್ಳಿಯ ಬದಲಾಗಿ ಚಂದ್ರಪ್ಪ ಸರ್ಕಲ್‌ನಿಂದ ಬಸ್ಸನ್ನು ಚಾಲನೆಗೊಳಿಸಲಾಗಿದೆ ; ಇದರಿಂದ ಹೈಕೋರ್ಟ್/ವಿಧಾನಸೌಧಕ್ಕೆ ಬರತಕ್ಕಂಥ ಅಧಿಕಾರಿ/ನೌಕರರುಗಳಿಗೆ ವೇಳೆಯ ಬದಲಾವಣೆ ಹಾಗೂ ಸ್ಥಳದ ಅಭಾವದಿಂದ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಸುಮಾರು ಎರಡು ತಿಂಗಳಿನಿಂದ ಈ ಬಸ್ಸಿಗೆ ಡ್ರೈವರ್ ಹಾಗೂ ಕಂಡಕ್ಟರ್ ಇಲ್ಲವೆಂದು ಸಾರಿಗೆ ಇಲಾಖೆಯವರು ಸಬೂಬು ಹೇಳುತ್ತಿರುವುದರಿಂದ ಈ ಮಾರ್ಗದಲ್ಲಿ ಪ್ರಯಾಣಿಸುವ ವಿಕಾಸಸೌಧ ವಿಕಾಸಸೌಧ, ಎಂ.ಎಸ್ ಬಿಲ್ಡಿಂಗ್, ಹೈಕೋರ್ಟ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಅಧಿಕಾರಿ/ನೌಕರರುಗಳಿಗೆ ತೀವ್ರ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದಲ್ಲಿ, ಈ ಬಸ್ಸನ್ನು ಪುನರ್ ಪ್ರಾರಂಭಿಸಿ, ಬೆಳಗ್ಗೆ ೦೮.೩೦ಕ್ಕೆ ರಾಮೋಹಳ್ಳಿಯಿಂದ ಮತ್ತು ಸಂಜೆ ೦೫.೩೦ ಗಂಟೆಗೆ ವಿಧಾನಸೌಧದ ಮುಂಭಾಗದಿಂದ ಟೌನ್‌ಹಾಲ್, ಕೆಂಗೇರಿ ಮಾರ್ಗವಾಗಿ ರಾಮೋಹಳ್ಳಿಗೆ ಸಂಚರಿಸುವ ಬಗ್ಗೆ ಕ್ರಮ ಜರುಗಿಸಲಾಗುವುದೇ ? (ಸಂಪೂರ್ಣ ಮಾಹಿತಿ ನೀಡುವುದು)

## ಸಾರಿಗೆ ಬಸ್‌ಗಳ ನಿರ್ವಹಣೆ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೧೫ (೧೩೪೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಬಸ್‌ಗಳ ನಿರ್ವಹಣೆಗಾಗಿ ವೆಚ್ಚ ಮಾಡಿರುವ ಹಣ ಎಷ್ಟು; (ನಿಗಮವಾರು ವಿವರ ನೀಡುವುದು)

(ಆ) ಕಳೆದ ೩ ವರ್ಷದಿಂದ ರಾಜ್ಯಾದ್ಯಂತ ಎಷ್ಟು ಬಸ್‌ಗಳು ನಿರ್ವಹಣೆ ಕೊರತೆ ಕಾರಣದಿಂದಾಗಿ ರಸ್ತೆ ಮಧ್ಯದಲ್ಲಿ ಕೆಟ್ಟು ನಿಂತಿವೆ ; (ನಿಗಮವಾರು ವಿವರ ನೀಡುವುದು)

(ಇ) ಬಸ್‌ಗಳು ರಸ್ತೆಗಳಲ್ಲಿ ಕೆಟ್ಟು ನಿಲ್ಲುವುದರಿಂದ ಪ್ರಯಾಣಿಕರಿಗೆ ತೀವ್ರ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಹಾಗಿದ್ದಲ್ಲಿ, ಬಸ್‌ಗಳ ನಿರ್ವಹಣೆ ಕೊರತೆ ಸರಿಪಡಿಸಲು ಯಾವ ಕ್ರಮ ಕೈಗೊಳ್ಳಲಾಗುವುದು ;

(ಈ) ಕಳೆದ ೩ ವರ್ಷಗಳಲ್ಲಿ ವಿವಿಧ ನಿಗಮಗಳಲ್ಲಿ ಎಷ್ಟು ಹೊಸ ಬಸ್‌ಗಳನ್ನು ಖರೀದಿಸಲಾಗಿದೆ ? (ನಿಗಮವಾರು ಮಾಹಿತಿ ನೀಡುವುದು)

## ಅಕ್ರಮ ಕಸಾಯಿ ಖಾನೆಗಳ ಬಗ್ಗೆ

**ಶ್ರೀ ಕಿಶೋರ್ ಕುಮಾರ್ ಪುತ್ತೂರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೧೬ (೧೩೪೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಅಕ್ರಮ ಕಸಾಯಿ ಖಾನೆಗಳೆಷ್ಟು; ಕಳೆದ ೨ ವರ್ಷದಿಂದ ರಾಜ್ಯದಲ್ಲಿ ಅಕ್ರಮವಾಗಿ ಕಸಾಯಿ ಖಾನೆ ನಡೆಸುತ್ತಿರುವ ಕುರಿತು ದಾಖಲಾದ ಪ್ರಕರಣಗಳೆಷ್ಟು; (ಜಿಲ್ಲಾವಾರು ವಿವರ ನೀಡುವುದು)

(ಆ) ಸದರಿ ಪ್ರಕರಣಗಳಲ್ಲಿ ಎಷ್ಟು ಜನರನ್ನು ಬಂಧಿಸಲಾಗಿದೆ; ಸದರಿಯವರುಗಳ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು; (ಜಿಲ್ಲಾವಾರು ವಿವರ ನೀಡುವುದು)

(ಇ) ಅಕ್ರಮ ಕಸಾಯಿ ಖಾನೆಗಳನ್ನು ಮುಚ್ಚಲು ಹಾಗೂ ಮುಂದಿನ ದಿನಗಳಲ್ಲಿ ಅಕ್ರಮ ಕಸಾಯಿ ಖಾನೆಗಳನ್ನು ತೆರೆಯುವುದನ್ನು ತಡೆಯಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ಸಂಪೂರ್ಣ ವಿವರ ಒದಗಿಸುವುದು)

## ವಿರಾಜಪೇಟೆಯ ನೂತನ I.B. ಕಾಮಗಾರಿಯ ಬಗ್ಗೆ

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೧೭ (೧೨೬೪) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯ ವಿರಾಜಪೇಟೆಯಲ್ಲಿ ನೂತನವಾಗಿ ನಿರ್ಮಿಸಲಾಗಿರುವ ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ನಿರೀಕ್ಷಣಾ ಬಂಗಲೆ (ಐ.ಬಿ) ಕಾಮಗಾರಿಗೆ ಬಿಡುಗಡೆಯಾದ ಮತ್ತು ವಿನಿಯೋಗಿಸಿದ ಅನುದಾನ ಎಷ್ಟು;

(ಆ) ಸದರಿ ಕಟ್ಟಡದ ನಿರ್ಮಾಣದ ವೆಚ್ಚವನ್ನು ಕಾಮಗಾರಿಯ ಅನುಸಾರ ಕ್ರಿಯಾ ಯೋಜನೆ ಮತ್ತು ಗುತ್ತಿಗೆದಾರರ ವಿವರವನ್ನು ನೀಡುವುದು ;

(ಇ) ನೂತನ ಕಟ್ಟಡದ ಕಾಮಗಾರಿ ಪೂರ್ಣಗೊಂಡಿದ್ದರೂ ಇಲ್ಲಿಯವರೆಗೆ ಉದ್ಘಾಟನೆಗೊಳ್ಳದಿರಲು ಕಾರಣವೇನು; ಯಾವ ಕಾಲಮಿತಿಯೊಳಗೆ ಉದ್ಘಾಟನೆಗೊಳಿಸಲಾಗುವುದು ;

(ಈ) ಕೊಡಗು ಜಿಲ್ಲೆಯಲ್ಲಿರುವ ಒಟ್ಟು ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ಸರ್ಕಾರಿ ಅತಿಥಿ ಗೃಹಗಳ ಸಂಖ್ಯೆ ಎಷ್ಟು ಮತ್ತು ಅವುಗಳು ಯಾವ ಸ್ಥಳದಲ್ಲಿವೆ ?

## ಮೀನುಗಾರಿಕೆ ಇಲಾಖೆಯಿಂದ ಅನುಮತಿ ನೀಡಿರುವ FPO ಬಗ್ಗೆ

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೧೮ (೧೩೪೬) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೀನುಗಾರಿಕೆ ಇಲಾಖೆಯಿಂದ ಅನುಮತಿ ನೀಡಿರುವ FPO ಗಳ ಸಂಖ್ಯೆ ಎಷ್ಟು ; ಆ FPO ಗಳಿಗೆ ಈ ತಹಲ್‌ವರೆಗೆ ಯಾವ ಉದ್ದೇಶಗಳಿಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; ಬಳಕೆ ಮಾಡಿರುವ ಅನುದಾನ ಎಷ್ಟು ; (ವಿವರ ಒದಗಿಸುವುದು)

(ಆ) ಅನುಮತಿಸಿರುವ FPO ಗಳು ಯಾವ ಕಾರ್ಯ ಚಟುವಟಿಕೆಗಳನ್ನು ಕೈಗೊಳ್ಳುತ್ತಿವೆ, ಹಾಗೂ ಬಿಡುಗಡೆ ಆಗಿರುವ ಅನುದಾನವನ್ನು ಸದ್ಬಳಕೆ ಮಾಡಲಾಗಿದೆಯೇ ;

(ಇ) ಪ್ರತಿ FPO ಗಳಲ್ಲಿ ಎಷ್ಟು ಸದಸ್ಯರುಗಳನ್ನು ಹೊಂದಿವೆ ; ಒಂದೇ ಕುಟುಂಬದವರನ್ನು ಸದಸ್ಯರನ್ನಾಗಿ ಮಾಡಲಾಗಿದೆಯೇ ; (ವಿವರ ಒದಗಿಸುವುದು)

(ಈ) FPO ಗಳಲ್ಲಿ CEO, DEO ಗಳನ್ನು ನೇಮಕ ಮಾಡಿಕೊಳ್ಳಲು ಇರುವ ನಿಯಮಗಳೇನು ; ಇಲ್ಲಿ ನಿಯಮಾನುಸಾರ ನೇಮಕ ಮಾಡದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; FPO ಗಳು ಬಾಡಿಗೆ ಕಟ್ಟಡದ ಹೆಸರಿನಲ್ಲಿ ಸರ್ಕಾರದ ಅನುದಾನವನ್ನು ದುರ್ಬಳಕೆ ಮಾಡಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? (CEO, DEO ನೇಮಕ ಮಾಡಿರುವ ವಿವರ ಹಾಗೂ ಬಾಡಿಗೆ ಕಟ್ಟಡಗಳ ವಿವರ ಒದಗಿಸುವುದು)

## ರಾಜೀವ್ ಗಾಂಧಿ ವಸತಿ ನಿಗಮ ವತಿಯಿಂದ ಅನುಷ್ಠಾನಗೊಳಿಸುವ ಯೋಜನೆಗಳ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೧೯ (೧೨೭೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಾವುವು ;

(ಆ) ಕಳೆದ ೧೫ ವರ್ಷಗಳಲ್ಲಿ ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಯಾವ ಯಾವ ವಸತಿ ಯೋಜನೆಗಳ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ ; ಪ್ರಸ್ತುತ ಕಾಮಗಾರಿಗಳ ಹಂತವೇನು ; (ಟೆಂಡರ್‌ಗಳ, ಕಾಮಗಾರಿಗಳ ಸಂಪೂರ್ಣ ವಿವರ ಒದಗಿಸುವುದು)

(ಇ) ರಾಜ್ಯದಲ್ಲಿ ಕಳೆದ ೦೫ ವರ್ಷಗಳಲ್ಲಿ ಆಶ್ರಯ ಬಡಾವಣೆಗಳಿಗೆ ಮೂಲಭೂತ ಸೌಕರ್ಯ ಯೋಜನೆಯಡಿ ಯಾವ ಯಾವ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ. ಪ್ರಸ್ತುತ ಕಾಮಗಾರಿಯ ಹಂತವೇನು ; ಕಾಮಗಾರಿಗಳನ್ನು ಕೈಗೊಂಡ ಟೆಂಡರ್‌ದಾರರು ಯಾರು ; ಕಾಮಗಾರಿಗಳ ಖರ್ಚು ವೆಚ್ಚ ಎಷ್ಟು ? (ಸಂಪೂರ್ಣ ಮಾಹಿತಿ ನೀಡುವುದು)

## ನೆರೆ ಸಂತ್ರಸ್ಥರ ಪುರ್ನವಸತಿ ಕಾರ್ಯಕ್ರಮ ಯೋಜನೆಯಡಿ ಕೊಡಗು ಜಿಲ್ಲೆಯಲ್ಲಿ ಕೈಗೊಂಡ ಕಾಮಗಾರಿಗಳ ಬಗ್ಗೆ

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೨೦ (೧೨೭೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ೦೫ ವರ್ಷಗಳಲ್ಲಿ ನೆರೆ ಸಂತ್ರಸ್ಥರ ಪುರ್ನವಸತಿ ಕಾರ್ಯಕ್ರಮ ಯೋಜನೆಯಡಿ ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ಕೈಗೊಂಡ ಕಾಮಗಾರಿಗಳಾವುವು ; (ಕಾಮಗಾರಿಗಳು ಮತ್ತು ಗುತ್ತಿಗೆದಾರ ಸಂಸ್ಥೆ ಅಥವಾ ವ್ಯಕ್ತಿಗಳ ಅನುಸಾರ ತಾಲ್ಲೂಕುವಾರು ವಿವರ ನೀಡುವುದು)

(ಆ) ೨೦೧೮–೧೯ನೇ ಸಾಲಿನಲ್ಲಿ ಅತೀವೃಷ್ಟಿ/ನೆರೆಯಿಂದ ಹಾನಿಗೀಡಾದ ಕೊಡಗು ಜಿಲ್ಲೆಯ ಸಂತ್ರಸ್ಥರಿಗೆ ರಾಜೀವ್ ಗಾಂಧಿ ವಸತಿ ನಿಗಮದ ವತಿಯಿಂದ ನಿರ್ಮಿಸಲಾದ ಮನೆಗಳಿಗೆ ವೆಚ್ಚವಾದ ಅನುದಾನ ಎಷ್ಟು ; ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ ? (ಫಲಾನುಭವಿಗಳ ಸಂಪೂರ್ಣ ವಿವರ ಒದಗಿಸುವುದು)

## ಸರ್ಕಾರಿ ಬಸ್ ಸೌಲಭ್ಯ ಹಾಗೂ ಬಸ್ ನಿಲ್ದಾಣವನ್ನು ಒದಗಿಸುವ ಬಗ್ಗೆ

**ಶ್ರೀ ಕುಶಾಲಪ್ಪ ಎಂ.ಪಿ (ಸುಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೨೧ (೧೩೫೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ, ಸಿರಾ ತಾಲ್ಲೂಕ್‌ನಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಬಸ್ ನಿಲ್ದಾಣದಿಂದ ಗ್ರಾಮಗಳ ಮಾರ್ಗವಾಗಿ ಹಿರಿಯೂರು ತಾಲ್ಲೂಕಿನ ಧರ್ಮಾಪುರ ಗ್ರಾಮಕ್ಕೆ ಸಂಚರಿಸುತ್ತಿರುವ ಸರ್ಕಾರಿ ಬಸ್ಸುಗಳು ದಿನಕ್ಕೆ ಎಷ್ಟು ಭಾರಿ ಸಂಚರಿಸುತ್ತಿದೆ ; (ವಿವರ ಒದಗಿಸುವುದು)

(ಆ) ಸದರಿ ಮಾರ್ಗದಲ್ಲಿ ಸಂಚರಿಸುತ್ತಿರುವ ಕೆ.ಎಸ್.ಆರ್.ಟಿ.ಸಿ ಬಸ್ಸುಗಳು ನಿಗದಿತ ಸಮಯಕ್ಕೆ ಸಂಚರಿಸದಿರುವುದರಿಂದ ಅಲ್ಲಿಯ ಶಾಲಾ ಕಾಲೇಜುಗಳ ಬಡ ವಿದ್ಯಾರ್ಥಿಗಳಿಗೆ, ಕೂಲಿ ಕಾರ್ಮಿಕರಿಗೆ ಹಾಗೂ ಗ್ರಾಮಸ್ಥರಿಗೆ ತುಂಬ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ತ್ವರಿತವಾಗಿ ಹೆಚ್ಚುವರಿ ಬಸ್ಸುಗಳನ್ನು ಸಮಯಕ್ಕೆ ಸರಿಯಾಗಿ ಸಂಚರಿಸಲು ಕ್ರಮ ವಹಿಸಲಾಗುವುದೇ ;

(ಈ) ಧರ್ಮಾಪುರ ಕೆ.ಎಸ್.ಆರ್.ಟಿ.ಸಿ ಬಸ್ಸುಗಳನ್ನು ನಿಲ್ಲಿಸಲು ನಿಲ್ದಾಣದಲ್ಲಿ ಜಾಗ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಬಸ್ ನಿಲ್ದಾಣವನ್ನು ಯಾವಾಗ ನಿರ್ಮಿಸಲಾಗುವುದು ? (ಸಂಪೂರ್ಣ ವಿವರ ನೀಡುವುದು)

## ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳನ್ನಾಗಿಸುವ ಕುರಿತು

**ಶ್ರೀ ಕೇಶವ ಪ್ರಸಾದ್ ಎನ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೨೨ (೧೩೪೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಈವರೆಗೆ ಯಾವ ಯಾವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಮೇಲ್ದರ್ಜೆಗೇರಿಸಲಾಗಿದೆ ; ಯಾವ ಯಾವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಪರಿಗಣಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ ; ಈ ಸಂಬಂಧ ಸರ್ಕಾರದಿಂದ ಕೈಗೊಳ್ಳಲಾದ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಆ) "ಶಿರಾಡೋಣದಿಂದ ಲಿಂಗಸುಗೂರುರವರೆಗೆ ಇರುವ ರಾಜ್ಯ ಹೆದ್ದಾರಿ ೪೧ ಅನ್ನು ರಾಷ್ಟ್ರೀಯು ಹೆದ್ದಾರಿಯುನ್ನಾಗಿ ಮೇಲ್ದರ್ಜೆಗೇರಿಸಲಾಗಿದೆಯೇ, ಇದನ್ನು ರಾಷ್ಟ್ರೀಯ ಹೆದ್ದಾರಿಯಾಗಿ

ಘೋಷಿಸಲು ರಾಜ್ಯ ಸರ್ಕಾರ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿದ್ದರೆ, ಪ್ರಸ್ತುತ ಇದು ಯಾವ ಹಂತದಲ್ಲಿದೆ; ಇದನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಪರಿಗಣಿಸಲು ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಕೈಗೊಂಡಿರುವ ಕ್ರಮಗಳೇನು ; (ಸಂಪೂರ್ಣ ವಿವರ ನೀಡುವುದು)

(ಇ) "ವಿಜಯಮರ ಜಿಲ್ಲೆಯಿಂದ ಈವರೆಗೆ ಯಾವ ಯಾವ ರಾಜ್ಯ ಹೆದ್ದಾರಿಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಮೇಲ್ದರ್ಜೆಗೇರಿಸಲಾಗಿದೆ ; ಈ ಪಟ್ಟಿಯಲ್ಲಿ ಇನ್ನೂ ಯಾವ ಯಾವ ರಸ್ತೆಗಳನ್ನು ರಾಷ್ಟ್ರೀಯ ಹೆದ್ದಾರಿಗಳಾಗಿ ಪರಿಗಣಿಸಲು ಶಿಫಾರಸ್ಸು ಮಾಡಲಾಗಿದೆ ; ಈ ಸಂಬಂಧ ಸರ್ಕಾರದಿಂದ ಕೈಗೊಳ್ಳಲಾದ ಕ್ರಮಗಳೇನು ? (ವಿವರ ನೀಡುವುದು)

## ರಾಜ್ಯದ ರೇಷ್ಮೆ ಬೆಳೆಗಾರರ ಕುರಿತು

**ಶ್ರೀ ಕೇಶವ ಪ್ರಸಾದ್ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೨೩ (೧೩೭೦) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ರೇಷ್ಮೆ ಬೆಳೆಗಾರರ ಸಂಖ್ಯೆ ಎಷ್ಟು ; ರೇಷ್ಮೆ ಬೆಳೆ ಬೆಳೆಯುತ್ತಿರುವ ಪ್ರದೇಶ ಎಷ್ಟು ; ಅದರಿಂದ ಉತ್ಪಾದನೆಯಾಗುತ್ತಿರುವ ರೇಷ್ಮೆ ಎಷ್ಟು ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ರೇಷ್ಮೆ ಬೆಳೆಗಾರರಿಗೆ ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳು ಯಾವುವು ; ರೇಷ್ಮೆ ಬೆಳೆಯುವ ರೈತರಿಗೆ ಸರ್ಕಾರದಿಂದ ನೀಡುತ್ತಿರುವ ಸಹಾಯಧನವೆಷ್ಟು ; ಬೆಳೆಗಾರರಿಗೆ ಯಾವ ಜಿಲ್ಲೆಗಳಲ್ಲಿ ಮಾರುಕಟ್ಟೆ ಸೌಲಭ್ಯ ಒದಗಿಸಲಾಗಿದೆ ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಇ) ಉತ್ತರ ಕರ್ನಾಟದ ಜಿಲ್ಲೆಗಳಲ್ಲಿ ರೇಷ್ಮೆ ಬೆಳೆಯನ್ನು ಬೆಳೆಯುವ ಸಲುವಾಗಿ ರೈತರಿಗೆ ಸರ್ಕಾರ ವಿಶೇಷ ಸೌಲಭ್ಯ ಕಲ್ಪಿಸಲಾಗಿದೆಯೇ ; (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

(ಈ) ಇತ್ತೀಚೆಗೆ ರೇಷ್ಮೆ ಕೃಷಿಯನ್ನು ರೈತರು ಕೈಬಿಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ರೇಷ್ಮೆ ಹುಳು ಸಾಕಾಣಿಕೆ, ಮನೆ ನಿರ್ಮಾಣಕ್ಕೆ ಸರ್ಕಾರದಿಂದ ನೀಡುತ್ತಿರುವ ಸಹಾಯಧನವೆಷ್ಟು ; ಸಹಾಯಧನ ಹೆಚ್ಚಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ? (ಜಿಲ್ಲಾವಾರು ಸಂಪೂರ್ಣ ಮಾಹಿತಿ ನೀಡುವುದು)

## ನೆರೆ ಪರಿಹಾರ ವಿತರಣೆಯಲ್ಲಿ ಅಕ್ರಮವಾಗಿರುವ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೧೨೪ (೧೩೨೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೧–೨೨, ೨೦೨೨–೨೩ನೇ ಸಾಲುಗಳಲ್ಲಿ ಸುರಿದ ಭಾರಿ ಮಳೆ/ ಅತಿವೃಷ್ಟಿಯಿಂದ ಉಂಟಾದ ಹಾನಿಗೆ ಪರಿಹಾರ ಕ್ರಮಗಳನ್ನು ಕೈಗೊಳ್ಳಲು ರಾಜ್ಯ ವಿಪತ್ತು ನಿರ್ವಹಣಾ (ಎಸ್.ಡಿ.ಆರ್.ಎಫ್)ಯಿಂದ ಮಂಡ್ಯ ಜಿಲ್ಲೆ, ಶ್ರೀರಂಗಪಟ್ಟಣ ತಾಲ್ಲೂಕು ತಹಶೀಲ್ದಾರ್‌ರವರಿಗೆ ಬಿಡುಗಡೆ ಮಾಡಲಾದ ಅನುದಾನ ಎಷ್ಟು ; (ಅನುದಾನ ಬಿಡುಗಡೆ ಮಾಡಿದ ದಿನಾಂಕ ಹಾಗೂ ಮೊತ್ತದ ವಿವರ ನೀಡುವುದು)

(ಆ) ನೆರೆ ಪರಿಹಾರ ವಿತರಣೆಯಲ್ಲಿ ಭಾರಿ ಅಕ್ರಮ ನಡೆದಿರುವ ಆರೋಪಗಳಿದ್ದು, ಭಾರಿ ಮೊತ್ತದ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಇದ್ದಲ್ಲಿ, ತಪ್ಪಿತಸ್ಥ ಅಧಿಕಾರಿ ಮತ್ತು ನೌಕರರ ವಿರುದ್ಧ ಕೈಗೊಂಡ ಶಿಸ್ತು ಕ್ರಮಗಳೇನು ; (ಹಣ ದುರುಪಯೋಗ ಸಂಬಂಧ ನಡೆದಿರುವ ತನಿಖಾ ವರದಿಗಳನ್ನು ನೀಡುವುದು ಹಾಗೂ ತೆಗೆದುಕೊಂಡಿರುವ ಶಿಸ್ತು ಕ್ರಮ ಕುರಿತು ಸಂಪೂರ್ಣ ಮಾಹಿತಿ ನೀಡುವುದು)

(ಈ) ಪರಿಹಾರ ವಿತರಣೆಯಲ್ಲಿ ದುರುಪಯೋಗ ಆಗಿರುವ ಒಟ್ಟು ಮೊತ್ತ ಎಷ್ಟು ; ಹಾಗೂ, ಸದರಿ ಮೊತ್ತವನ್ನು ತಪ್ಪಿತಸ್ಥ ಅಧಿಕಾರಿ/ ನೌಕರರಿಂದ ವಸೂಲು ಮಾಡಲು ಸರ್ಕಾರ ಯಾವ ರೀತಿಯ ಕ್ರಮಗಳನ್ನು ಕೈಗೊಳ್ಳಲಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಸಮುದ್ರ ನೀರಿಗೆ ಮೃತಪಟ್ಟ ಮೀನುಗಾರರು ಮತ್ತು ಪ್ರವಾಸಿಗರ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೧೨೫ (೧೩೨೩) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳಲ್ಲಿ ಮೀನುಗಾರಿಕೆಯಲ್ಲಿ ತೊಡಗಿರುವಾಗ ಮೃತಪಟ್ಟ ಮೀನುಗಾರರ ಸಂಖ್ಯೆ ಎಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಆ) ಮೀನುಗಾರರ ಮರಣ ಪ್ರಕರಣಗಳಿಗೆ ಸಂಬಂಧಿಸಿದಂತೆ ಅವರ ವಾರಸುದಾರರಿಗೆ/ಅವಲಂಬಿತದಾರರಿಗೆ ನೀಡಲಾಗುವ ಗರಿಷ್ಠ ಪರಿಹಾರ ಮೊತ್ತ ಎಷ್ಟು ; ಕಳೆದ ೫ ವರ್ಷಗಳಲ್ಲಿ ವಿತರಿಸಲಾಗಿರುವ ಪರಿಹಾರ ಮೊತ್ತ ಎಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಇ) ಮೀನುಗಾರಿಕೆಯಲ್ಲಿ ತೊಡಗಿರುವಾಗ ಬಳೆಹಾನಿ, ದೋಣಿಹಾನಿ ಹಾಗೂ ವೈದ್ಯಕೀಯ ವೆಚ್ಚಗಳಿಗಾಗಿ ನೀಡಲಾಗುವ ಗರಿಷ್ಠ ಪರಿಹಾರ

ಮೊತ್ತ ಎಷ್ಟು ; (ಕಳೆದ ೫ ವರ್ಷಗಳಲ್ಲಿ ನೀಡಲಾದ ಪರಿಹಾರ ಕುರಿತು ಮಾಹಿತಿ ನೀಡುವುದು)

(ಈ) ಕಳೆದ ೫ ವರ್ಷಗಳಲ್ಲಿ ಸಮುದ್ರಕ್ಕೆ ಇಳಿದು ಮೃತಪಟ್ಟ ಹಾಗೂ ರಕ್ಷಿಸಲ್ಪಟ್ಟ ಪ್ರವಾಸಿಗರ ಸಂಖ್ಯೆ ಎಷ್ಟು ; ಪ್ರವಾಸಿಗರ ಸುರಕ್ಷತೆಗೆ ತೆಗೆದುಕೊಂಡಿರುವ ಕ್ರಮಗಳೇನು ? (ವರ್ಷವಾರು ಮಾಹಿತಿ ನೀಡುವುದು)

## ವಾಹನಗಳಿಗೆ ವಿಧಿಸುವ ಹಸಿರು ತೆರಿಗೆ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೧೨೬ (೧೩೨೪) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಸಿರು ತೆರಿಗೆ (ಗ್ರೀನ್ ಟ್ಯಾಕ್ಸ್) ಎಂದರೇನು ; ಯಾವ ಯಾವ ವಾಹನಗಳಿಗೆ ಹಸಿರು ತೆರಿಗೆ ವಿಧಿಸಲಾಗುತ್ತದೆ ; ವಿಧಿಸಲಾಗುವ ಶೇಕಡವಾರು ತೆರಿಗೆ ಪ್ರಮಾಣ ಎಷ್ಟು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಕಳೆದ ೫ ವರ್ಷಗಳಲ್ಲಿ ಸಂಗ್ರಹಿಸಲ್ಪಟ್ಟಂತಹ ಹಸಿರು ತೆರಿಗೆ ಎಷ್ಟು ; ವಾಯುಮಾಲಿನ್ಯ ನಿಯಂತ್ರಣಕ್ಕಾಗಿ ಭರಿಸಲಾದ ವೆಚ್ಚ ಎಷ್ಟು ; (ವರ್ಷವಾರು ಮಾಹಿತಿ ನೀಡುವುದು)

(ಇ) ಇದೇ ಅವಧಿಯಲ್ಲಿ ಅಭಿವೃದ್ಧಿ ಮತ್ತು ಕಲ್ಯಾಣ ನಿಧಿಗಳ ಅಡಿಯಲ್ಲಿ ತೆರೆಯಲಾದ ಹಸಿರು ತೆರಿಗೆ, ಉಪಕರ ನಿಧಿಗೆ ವರ್ಗಾಯಿಸಲ್ಪಟ್ಟ ಸ್ವೀಕೃತಿಗಳು ಮತ್ತು ವೆಚ್ಚ ಎಷ್ಟು ; ವರ್ಗಾಯಿಸದಿದ್ದರೆ, ಕಾರಣಗಳೇನು ; ಹಾಗೂ ಯಾವ ವರ್ಷ ವರ್ಗಾಯಿಸಲಾಗಿದೆ ; (ವಿವರ ನೀಡುವುದು)

(ಈ) ವಿವಿಧ ವರ್ಗದ ಮೋಟಾರು ವಾಹನಗಳಿಗೆ ವಿಧಿಸಲಾಗುವ ರಸ್ತೆ ಸುರಕ್ಷತೆ ಉಪಕರ ಎಷ್ಟು ;

(ಉ) ಕಳೆದ ೫ ವರ್ಷಗಳಲ್ಲಿ ಸಂಗ್ರಹಿಸಲ್ಪಟ್ಟ ರಸ್ತೆ ಸುರಕ್ಷತೆ ಉಪಕರ ಎಷ್ಟು; ಈ ಉಪಕರವನ್ನು ಯಾವ ಯಾವ ಉದ್ದೇಶಗಳಿಗೆ ಬಳಸಿಕೊಳ್ಳಲಾಗಿದೆ ? (ಸಂಪೂರ್ಣ ಮಾಹಿತಿ ನೀಡುವುದು)

## ಮೇಕೆ ಹಾಲು ಉತ್ಪಾದನಾ ಮತ್ತು ಸಂಸ್ಕರಣಾ ಘಟಕ ಕಾರ್ಯಾರಂಭ ಕುರಿತು

**ಶ್ರೀ ಮಧು ಜಿ. ಮಾದೇಗೌಡ (ಪದವೀಧರರ ಕ್ಷೇತ್ರ) :–**

೧೧೨೭ (೧೩೨೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕೊಡಗು ಜಿಲ್ಲೆಯಲ್ಲಿ ಸ್ಥಾಪಿಸಿರುವ ಮೇಕೆ ಹಾಲು ಉತ್ಪಾದನಾ ಮತ್ತು ಸಂಸ್ಕರಣಾ ಘಟಕ ಕಾರ್ಯಾರಂಭ ಮಾಡಿದೆಯೇ ;

(ಆ) ಇದ್ದಲ್ಲಿ, ಯೋಜನಾ ವೆಚ್ಚ, ಉಪಕರಣಗಳ ಅಳವಡಿಕೆ ಕಾರ್ಯ ಸೇರಿದಂತೆ ಕಾಮಗಾರಿಗಳ ಪ್ರಸ್ತುತ ಸ್ಥಿತಿಗತಿ ಹಾಗೂ ಯೋಜನೆ ಕಾರ್ಯಗತವಾಗಿರುವ ಕುರಿತು ವಿವರ ನೀಡುವುದು ;

(ಇ) ರಾಜ್ಯದಲ್ಲಿ ಹೈನುಗಾರಿಕೆಯಂತೆ ಮೇಕೆ ಹಾಲಿಗೂ ಬೇಡಿಕೆ ಇದೆಯೇ ; ಬೇಡಿಕೆ ಇದ್ದಲ್ಲಿ, ಈ ಬಗ್ಗೆ ಸಂಪೂರ್ಣ ಮಾಹಿತಿ ನೀಡುವುದು ;

(ಈ) ಮೇಕೆ ಸಾಕಣೆ, ತಳಿ ಅಭಿವೃದ್ಧಿ, ಮೇವು ಅಭಿವೃದ್ಧಿ, ರೈತರಿಗೆ ತರಬೇತಿ, ಮೇಕೆ ಹಾಲಿಗೆ ಮಾರುಕಟ್ಟೆ ಒದಗಿಸುವುದು, ದರ ನಿಗದಿ ಸೇರಿದಂತೆ ಇನ್ನಿತರೆ ಚಟುವಟಿಕೆಗಳ ಮೂಲಕ 'ಮೇಕೆ ಹಾಲು ಉತ್ಪಾದನೆ' ಹೆಚ್ಚಿಸಲು ಮತ್ತು ಜನಪ್ರಿಯಗೊಳಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ಸಂಪೂರ್ಣ ಮಾಹಿತಿ ನೀಡುವುದು)

# ಕರ್ನಾಟಕ ರಾಜ್ಯದಲ್ಲಿ ವಸತಿ ಯೋಜನೆಯ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೨೮ (೧೩೬೪) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೨ ವರ್ಷಗಳಲ್ಲಿ ರಾಜ್ಯದಲ್ಲಿ ವಸತಿ ಯೋಜನೆಯಡಿ ಹೊಸದಾಗಿ ಎಷ್ಟು ಮನೆಗಳನ್ನು ನೀಡಲಾಗಿದೆ; ನೀಡಬೇಕಾದ ಮನೆಗಳ ಗುರಿಯನ್ನು ಯಾವ ಮಾನದಂಡಗಳ ಆಧಾರದಲ್ಲಿ ನಿರ್ಧರಿಸಲಾಗುತ್ತಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ಈಗಾಗಲೇ ನೀಡಿರುವ ಮನೆಗಳು ಹೆಚ್ಚು ಇದ್ದು ಅವುಗಳ ಆಯ್ಕೆಯ ಮಾನದಂಡಗಳನ್ನು ಪರಿಶೀಲಿಸದೇ ಇರುವುದರಿಂದ ಒಟ್ಟು ಸಂಖ್ಯೆ ಹೆಚ್ಚಾಗಿದ್ದು ಯಾವುದೇ ಮನೆಗೆ ವಸತಿ ಸಹಾಯಧನ ನೀಡದಿರುವುದು ನಿಜವೇ ;

(ಇ) ಅನರ್ಹ ಫಲಾನುಭವಿಗಳನ್ನು ಪರಿಶೀಲಿಸಿ ರದ್ದು ಪಡಿಸಲು ಹಾಗೂ ಅರ್ಹ ಫಲಾನುಭವಿಗಳನ್ನು ಪರಿಗಣಿಸಿ ನಿಗದಿತವಾಗಿ ಮತ್ತು ನಿಯಮವಾಗಿ ವಸತಿ ಸಹಾಯಧನವನ್ನು ಬಿಡುಗಡೆ ಮಾಡಲು ಸರ್ಕಾರದ ಕ್ರಮಗಳೇನು ;

(ಈ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಪ್ರಸ್ತುತ ಜಿಪಿಎಸ್ ಮಾಡಿರುವ ನಿಯಮಾನುಸಾರ ಸರಿಯಿರುವ ಎಷ್ಟು ಮನೆಗಳಿಗೆ ಅನುದಾನ ಬಿಡುಗಡೆಯಾಗಿದೆ ; ಅನುದಾನ ಬಿಡುಗಡೆಗೆ ಬಾಕಿಯಿರುವ ಮನೆಗಳೆಷ್ಟು; ಇದಕ್ಕೆ ಕಾರಣಗಳೇನು ; ಯಾವಾಗ ಈ ಮನೆಗಳಿಗೆ ಅನುದಾನ ಬಿಡುಗಡೆ ಮಾಡಲಾಗುವುದು ;

(ಉ) ರಾಜ್ಯದಲ್ಲಿ ಮನೆಗಳ ಅನುದಾನ ಬಿಡುಗಡೆಯಾಗುವಲ್ಲಿ ಮತ್ತು ಜಿಪಿಎಸ್ ಮಾಡುವಲ್ಲಿ ಜಿಲ್ಲೆಗಳು ಎದುರಿಸುತ್ತಿರುವ ತಾಂತ್ರಿಕ ಸಮಸ್ಯೆಗಳು ಯಾವುವು; ಜಿಲ್ಲೆಗಳಿಂದ ಸಲ್ಲಿಕೆಯಾದ ಒಟ್ಟು ಪ್ರಕರಣಗಳಲ್ಲಿ ಎಷ್ಟು ಮನೆಗಳ ಸಮಸ್ಯೆಗಳನ್ನು ಪರಿಹರಿಸಲಾಗಿದೆ ; ಉಳಿದವುಗಳನ್ನು ಯಾವಾಗ ಪರಿಹರಿಸಲಾಗುವುದು ;

(ಊ) ಅನುದಾನ ಬಿಡುಗಡೆ ಮತ್ತು ಜಿಪಿಎಸ್ ಮಾಡುವ ಬಗೆಗಿನ ಮೊಬೈಲ್ ಮತ್ತು ಕಂಪ್ಯೂಟರ್ ಆಧಾರಿತ ಆ್ಯಪ್/ತಂತ್ರಾಂಶಗಳನ್ನು ಎಷ್ಟು ಬಾರಿ ಬದಲಾಯಿಸಲಾಗಿದೆ ಮತ್ತು ಉನ್ನತೀಕರಿಸಿದೆ; ಈ ಪ್ರಕ್ರಿಯೆಯಲ್ಲಿ ಉದ್ಭವಿಸಿರುವ ಸಮಸ್ಯೆಗಳನ್ನು ಯಾವಾಗ ಬಗೆಹರಿಸಲಾಗುವುದು ?

## ಕಂದಾಯ ಇಲಾಖೆ ನಿಯಮಗಳಲ್ಲಿ ತಿದ್ದುಪಡಿಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೨೯ (೧೩೬೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪ್ರಸ್ತುತ ವಿವಿಧ ರೀತಿಯ ಕಟ್ಟಡ, ಸರ್ಕಾರಿ ಮತ್ತು ಖಾಸಗಿ ಲೇಔಟ್‌ಗಳು ನಿರ್ಮಾಣವಾಗುತ್ತಿದ್ದು ಆಸ್ತಿಗಳು ವಿವಿಧ ರೀತಿಯ ನೋಂದಣಿ ಮೂಲಕ ಪರಭಾರೆಯಾಗುತ್ತಿದ್ದು ಅವುಗಳ ಮೇಲೆ ವಿವಿಧ ಇಲಾಖೆಗಳು ನಿಯಂತ್ರಣ ಹೊಂದುತ್ತಿದ್ದು ಕಂದಾಯ ನಿಯಮಗಳನ್ನು ಅಗತ್ಯಕ್ಕೆ ತಕ್ಕಂತೆ ಮಾರ್ಪಡಿಸಲು ಮುಂದಾಗಿದೆಯೇ; ಈ ಕುರಿತಂತೆ ನ್ಯಾಯಾಲಯದಲ್ಲಿ ಪ್ರಕರಣಗಳು ದಾಖಲಾಗುತ್ತಿರುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ರಾಜ್ಯದಲ್ಲಿರುವ ಎಲ್ಲಾ ಆಸ್ತಿಗಳನ್ನು ಬಿ–ಖಾತೆ, ಇ–ಸ್ವತ್ತು, ಇ–ಖಾತೆ ಇತ್ಯಾದಿ ಹೆಸರಿನಲ್ಲಿ ಸ್ಥಳೀಯ ಸಂಸ್ಥೆಗಳ ಆಸ್ತಿ ತೆರಿಗೆ ವ್ಯಾಪ್ತಿಗೆ ತರಲು ಕ್ರಮವಹಿಸಲಾಗುತ್ತಿದ್ದು ಕಂದಾಯ ನಿಯಮಗಳಲ್ಲಿ ಪೂರಕ ತಿದ್ದುಪಡಿಗಳನ್ನು ಮಾಡಲು ಯಾವ ಕ್ರಮವಹಿಸಲಾಗಿದೆ ;

(ಇ) ಕರಾವಳಿ, ದಕ್ಷಿಣ ಕನ್ನಡ, ಉಡುಪಿ ಮತ್ತು ಮಲೆನಾಡು ಭಾಗಗಳಲ್ಲಿರುವ ತುಂಡು ಭೂಮಿ ಮತ್ತು ಹರಡಿಕೊಂಡಿರುವ ಜನವಸತಿ ಪ್ರದೇಶಗಳಲ್ಲಿ ಮನೆ, ಕಟ್ಟಡಗಳು ಕೃಷಿ ಭೂಮಿಯಲ್ಲಿದ್ದು ಕಂದಾಯ ಭೂಮಿಯಲ್ಲಿರುವ ಕಟ್ಟಡಗಳಿಗೆ ವಿಧಿಸುವಂತೆ ತೆರಿಗೆ ವಿಧಿಸಲು ಅವಕಾಶವಿದೆಯೇ; ಗ್ರಾಮೀಣಾಭಿವೃದ್ಧಿ ಇಲಾಖೆಯು

ನಿಯಮಗಳ ಮೂಲಕ ಈ ಕಟ್ಟಡಗಳಿಗೆ ದುಪ್ಪಟ್ಟು ಮನೆ ತೆರಿಗೆ ವಿಧಿಸಿ ಖಾತೆ ನೀಡಲು ಸೂಚಿಸಿದ್ದು, ಈ ಕುರಿತು ಕಂದಾಯ ಇಲಾಖೆಯು ಸದರಿ ಜಾಗವನ್ನು ಕೃಷಿ–ಕಂದಾಯ ದಾಖಲೆಗಳಲ್ಲಿ ಅಗತ್ಯ ಬದಲಾವಣೆ ಮಾಡಲು ಏನು ಕ್ರಮವಹಿಸಿದೆ ;

(ಈ) ಈ ಜಿಲ್ಲೆಗಳಲ್ಲಿ ಹಲವಾರು ರಸ್ತೆಗಳು ಖಾಸಗಿ ಜಾಗದಲ್ಲಿ ಹಾದುಹೋಗಿದ್ದು ಅವುಗಳನ್ನು ಅಧಿಸೂಚನೆ ಮೂಲಕ ಸಾರ್ವಜನಿಕ ಪ್ರಾಧಿಕಾರಕ್ಕೆ ಹಸ್ತಾಂತರಿಸಿಕೊಳ್ಳಲು ಯಾಕೆ ಇನ್ನೂ ಕ್ರಮವಹಿಸಿಲ್ಲ ; ಇದರಿಂದಾಗಿ ಅನೇಕ ಮನೆಮಾಲಿಕರಿಗೆ ಸಕ್ಷಮ ಪ್ರಾಧಿಕಾರದಿಂದ ಬಡಾವಣೆ ನಕ್ಷೆ ಅನುಮೋದನೆ ಮತ್ತು ಆಸ್ತಿ ಖಾತೆ ಪಡೆಯಲು ಸಮಸ್ಯೆಗಳಾಗಿರುವುದನ್ನು ಸರ್ಕಾರ ಗಮನಿಸಿದೆಯೇ ; ಈ ಕುರಿತು ಯಾವಾಗ ಅಗತ್ಯ ಕ್ರಮ ವಹಿಸಲಾಗುವುದು ?

## ಕರ್ನಾಟಕ ರಾಜ್ಯದಲ್ಲಿ ರಸ್ತೆ ಸಾರಿಗೆ ವಾಹನಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೩೦ (೧೩೬೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಸಾರಿಗೆ ಇಲಾಖೆಯಿಂದ ರಾಜ್ಯದ ರಾಜಧಾನಿ ಹಾಗೂ ಕೆಲವು ಜಿಲ್ಲಾ ಕೇಂದ್ರಗಳ ನಡುವೆ ಬಸ್ಸು ಸೇವೆಗಳನ್ನು ಆರಂಭಿಸಿದ್ದು ಉಳಿದ ಜಿಲ್ಲೆಗಳಲ್ಲಿ ಆದಾಯ ತರುವ ಸೇವೆಗಳನ್ನು ಒದಗಿಸಲು ಯಾವ ಕ್ರಮ ವಹಿಸಲಾಗುತ್ತಿದೆ ;

(ಆ) ಸಾರಿಗೆ ಇಲಾಖೆಯಿಂದ ಶಕ್ತಿ ಯೋಜನೆಯಡಿ ಮಹಿಳಾ ಪ್ರಯಾಣಿಕರಿಗೆ ಉಚಿತ ಪ್ರಯಾಣ ವ್ಯವಸ್ಥೆ ನೀಡಲಾಗುತ್ತಿದ್ದು ಖಾಸಗಿ ಸಾರಿಗೆ ವಾಹನಗಳ ಹೆಚ್ಚು ಪ್ರಾಬಲ್ಯವಿರುವ ಪ್ರದೇಶಗಳಿಗೆ ರಸ್ತೆ ಸಾರಿಗೆ ಸೌಲಭ್ಯ ವಿಸ್ತರಿಸಲು ಏನು ಕ್ರಮ ವಹಿಸಿದೆ ;

(ಇ) ಮಹಿಳಾ ಪ್ರಯಾಣಿಕರಿಗೆ ಉಚಿತ ಪ್ರಯಾಣ ಸೌಲಭ್ಯ ಒದಗಿಸುವುದರ ಜೊತೆಗೆ ಪುರುಷ ಪ್ರಯಾಣಿಕರನ್ನು ಆಕರ್ಷಿಸಿ ಆದಾಯ ಹೆಚ್ಚಿಸುವ ಬಗ್ಗೆ ಇಲಾಖೆಯ ಕ್ರಮಗಳೇನು ; ಖಾಸಗಿ ಮತ್ತು ಸರ್ಕಾರಿ ಬಸ್ಸು ಸೇವೆಗಳ ಗುಣಮಟ್ಟವನ್ನು, ಸಾರಿಗೆ ದರ ಮತ್ತಿತರ ವಿಷಯಗಳಲ್ಲಿ ಏಕರೂಪತೆಯನ್ನು ಸಾಧಿಸಲು ಇಲಾಖೆಯ ಕ್ರಮಗಳೇನು ;

(ಈ) ಕೆಲವು ಪ್ರದೇಶಗಳಲ್ಲಿ ದರ ಸಮರ ಜಾರಿಯಲ್ಲಿದ್ದು ಸಾರಿಗೆ ಇಲಾಖೆಯ ಬಸ್ಸು ಸೇವೆ ಖಾಸಗಿಯವರಿಗಿಂತ ದುಬಾರಿಯಾಗಿರುವುದನ್ನು ಸರಿಪಡಿಸಲು ಯಾವ ಕ್ರಮಗಳನ್ನು ಕೈಗೊಳ್ಳಲು ಉದ್ದೇಶಿಸಿದೆ ; (ವಿವರ ನೀಡುವುದು)

(ಉ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಗ್ರಾಮಾಂತರ ಒಳ ಪ್ರದೇಶಗಳಲ್ಲಿ ಹೊಸ ಮಾರ್ಗಗಳು ಅಭಿವೃದ್ಧಿಯಾಗಿದ್ದು, ಅವುಗಳಲ್ಲಿ ಮತ್ತು ನಗರ ಪ್ರದೇಶದಲ್ಲಿ ಹೆಚ್ಚುವರಿ ಸಾರಿಗೆ ಸೌಲಭ್ಯ ಒದಗಿಸುವಂತೆ ಜನಪ್ರತಿನಿಧಿಗಳು/ವಿದ್ಯಾರ್ಥಿಗಳು/ ಸಾರ್ವಜನಿಕರಿಂದ ಇಲಾಖೆಗೆ ಸಲ್ಲಿಸಿರುವ ಬೇಡಿಕೆಗಳನ್ನು ಯಾವ ಕಾಲ ಮಿತಿಯಲ್ಲಿ ಈಡೇರಿಸಲು ಕ್ರಮವಹಿಸಲಾಗುವುದು ?

## ಪಶುಸಂಗೋಪನೆ ಇಲಾಖೆಯ ಸುಧಾರಣೆ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೩೧ (೧೩೬೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ಖಾಲಿಯಿರುವ ಒಟ್ಟು ೯೮೯೧ ಹುದ್ದೆಗಳನ್ನು ನೇಮಕಾತಿ ಮಾಡಲು ಇಲ್ಲಿಯವರೆಗೆ ಏನು ಕ್ರಮ ವಹಿಸಲಾಗಿದೆ ; (ಖಾಲಿಯಿರುವ ಒಟ್ಟು ಹುದ್ದೆಗಳ ಜಿಲ್ಲಾವಾರು ವಿವರ ನೀಡುವುದು)

(ಆ) ಪ್ರಾಥಮಿಕ ಹಾಗೂ ಇತರ ಪಶು ಚಿಕಿತ್ಸಾ ಸೇವೆಗಳು ಒಂದು ಅವಶ್ಯಕ ಸೇವೆಗಳಾಗಿದ್ದು ಕನಿಷ್ಟ ಪಕ್ಷ ಖಾಲಿಯಿರುವ ಹುದ್ದೆಗಳ ೫೦% ಪ್ರಾಮುಖ್ಯ ಹುದ್ದೆಗಳನ್ನಾದರೂ ನೇಮಕಾತಿ ಮಾಡುವ ಬಗ್ಗೆ ಇಲಾಖೆಯ ಕ್ರಮಗಳೇನು ;

(ಇ) ಪಶುವೈದ್ಯರು ಮತ್ತು ಅವಶ್ಯಕ ಸಿಬ್ಬಂದಿಗಳ ಕೊರತೆಯಿಂದಾಗಿ ಜಾನುವಾರುಗಳ ಚಿಕಿತ್ಸೆಗೆ ಮತ್ತು ಕೆಲವು ಸಾಂಕ್ರಮಿಕ ರೋಗಗಳ ಕುರಿತ ಮುನ್ನೆಚ್ಚರಿಕೆ ಮಾಹಿತಿ ನೀಡಲು ಮತ್ತು ಸಮೀಕ್ಷೆ ಮಾಡಲು ಸಾಧ್ಯವಾಗದ ಕಾರಣ ಹಲವಾರು ಜಾನುವಾರುಗಳು ಸಾಕು ಪ್ರಾಣಿಗಳು ಸಾವನ್ನಪ್ಪುತ್ತಿರುವುದರಿಂದ ಅಗತ್ಯ ಅನುಸರಣ ಕ್ರಮ ವಹಿಸಲು ಇಲಾಖೆ ಮುಂದಾಗಿದೆಯೇ ;

(ಈ) ಪಶುಸಂಗೋಪನೆ ಇಲಾಖೆಯಲ್ಲಿ ಅಗತ್ಯ ಔಷಧಿಗಳ ಪೂರೈಕೆಯಿಲ್ಲದೆ ರೇಬಿಸ್, ಮೆದುಳುಜ್ವರ ಇತ್ಯಾದಿಗಳಿಗೆ ಚಿಕಿತ್ಸಾ ವೆಚ್ಚವನ್ನು ಜಾನುವಾರು ಮಾಲೀಕರೇ ಭರಿಸಬೇಕಾದ ಅನಿವಾರ್ಯತೆ ಸೃಷ್ಟಿಯಾಗಿರುವ ಬಗ್ಗೆ ಇಲಾಖೆಯ ಸುಧಾರಣಾ ಕ್ರಮಗಳೇನು ?

## ಲೋಕೋಪಯೋಗಿ ಇಲಾಖೆಯ ರಸ್ತೆಗಳ ಕುರಿತು

**ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೩೨ (೧೩೬೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳ ನಿರ್ವಹಣೆಗಾಗಿ ಬಿಡುಗಡೆಯಾದ ಅನುದಾನ ಪೂರ್ಣವಾಗಿ ವೆಚ್ಚವಾಗಿದೆಯೇ; ಇವುಗಳಲ್ಲಿ ಜಂಗಲ್ ಕ್ಲಿಯರೆನ್ಸ್, ರಸ್ತೆ ಅಂಚು ಮತ್ತು ಚರಂಡಿಗಳ ನಿರ್ವಹಣೆ, ಬರ್ಮ ಕಟ್ಟಿಂಗ್, ಗುಂಡಿಗಳನ್ನು ಮುಚ್ಚುವ ಕಾಮಗಾರಿ ಹಾಗೂ ಅಪಾಯಕಾರಿ ಕಟ್ಟಡ ಮತ್ತು ಮರಗಳನ್ನು ತೆರವುಗೊಳಿಸುವ ನಿರ್ವಹಣೆ ಮಾಡಲಾಗಿದೆಯೇ ;

(ಆ) ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಲೋಕೋಪಯೋಗಿ ರಸ್ತೆಗಳ ಅಂಚಿನಲ್ಲಿ ಎಷ್ಟು ಅಗಲದ ಪ್ರದೇಶವನ್ನು ತೆರೆದ (ಓಪನ್ ಸ್ಪೇಸ್) ಪ್ರದೇಶವನ್ನಾಗಿ ನಿರ್ವಹಿಸಬೇಕಾಗಿದೆ ; ಈ ಜಿಲ್ಲೆಗಳ ಯಾವ ರಸ್ತೆಗಳ ಬದಿಯಲ್ಲಿ ಹುಲ್ಲು, ಅಪಾಯಕಾರಿ ಕಟ್ಟಡ ಮತ್ತು ಮರಗಳನ್ನು ತೆರವುಗೊಳಿಸಲಾಗಿದೆ ;

(ಇ) ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿರುವ ರಸ್ತೆಗಳ ಅಂಚಿನಲ್ಲಿ ಕಟ್ಟಡ ಕಟ್ಟುವವರಿಗೆ ನೀಡಿದ ನಿರಾಕ್ಷೇಪಣಾ ಪತ್ರದಲ್ಲಿ ದಾಖಲಿಸಿರುವ ಷರತ್ತುಗಳೇನು ; ಅನ್ವಯಿಸಿರುವ ನಿಯಮಗಳಾವುವು ;

(ಈ) ರಸ್ತೆ ಅಂಚಿನಲ್ಲಿ ಕಟ್ಟಡ ಕಟ್ಟುವವರಿಗೆ ನಿರಾಕ್ಷೇಪಣಾ ಪತ್ರ ನೀಡುವಾಗ ಲೋಕೋಪಯೋಗಿ ಇಲಾಖೆ ಗ್ರಾಮ ಪಂಚಾಯತಿಗಳಿಗೆ ಅಭಿಪ್ರಾಯ ಕೋರಿ ಎಷ್ಟು ಪತ್ರ ಬರೆಯಲಾಗಿದೆ; ನಿಯಮಗಳಲ್ಲಿ ಇದಕ್ಕೆ ಅವಕಾಶವಿದೆಯೇ ;

(ಉ) ಯಾವುದೇ ರಸ್ತೆಗಳನ್ನು ರಾಜ್ಯ ಹೆದ್ದಾರಿ ಮತ್ತು ರಾಷ್ಟ್ರೀಯ ಹೆದ್ದಾರಿಯನ್ನು ಘೋಷಿಸಿದಾಗ ಮತ್ತು ಮಾರ್ಗ ಪಲ್ಲಟ (ಬೈಪಾಸ್) ಮಾಡಿದಾಗ ಹಿಂದಿನ ಹಳೆಯ ರಸ್ತೆಗಳ ನಿರ್ವಹಣೆ ಯಾರ ಜವಾಬ್ದಾರಿ; ಉಭಯ ಜಿಲ್ಲೆಗಳಲ್ಲಿ ಇಂತಹ ಎಷ್ಟು ರಸ್ತೆಗಳು ನಿರ್ವಹಣೆಗೆ ಬಾಕಿಯಿವೆ; ಈ ಕುರಿತು ಇಲಾಖೆಯ ಕ್ರಮಗಳೇನು ?

## ತಹಶೀಲ್ದಾರ್ ಗ್ರೇಡ್–೧ ಮತ್ತು ಗ್ರೇಡ್–೨ ಹುದ್ದೆಗಳ ಪದೋನ್ನತಿ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೩೩ (೧೪೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಳಿಕೆ ಮೂಲ ವೃಂದದ ತಹಶೀಲ್ದಾರ್ ಗ್ರೇಡ್–೨ ವೃಂದದಲ್ಲಿ ನ್ಯಾಯಾಲಯದ ಯಾವುದೇ ಆದೇಶವಿಲ್ಲದೇ ಇದ್ದರೂ ದಿನಾಂಕ : ೨೩.೦೩.೨೦೨೧ರ ಅಂತಿಮ ಜ್ಯೇಷ್ಠತಾ ಪಟ್ಟಿಯನ್ನು ಪರಿಷ್ಕರಿಸಲು ಕಾರಣವೇನು ;

(ಆ) ತಹಶೀಲ್ದಾರ್ ಗ್ರೇಡ್–೨ ವೃಂದದಲ್ಲಿ ಕರಡು ಜ್ಯೇಷ್ಠತಾ ಪಟ್ಟಿಯನ್ನು ದಿನಾಂಕ:೧೮.೧೦.೨೦೨೪ ರಂದು ಪ್ರಕಟಿಸಿದ ೫ ತಿಂಗಳ ನಂತರವೂ ಜ್ಯೇಷ್ಠತಾ ಪಟ್ಟಿಯನ್ನು ಅಂತಿಮಗೊಳಿಸದೇ ಇರಲು ಕಾರಣವೇನು ;

(ಇ) ಕಳೆದ ೦೨ ವರ್ಷದಿಂದ ಕಂದಾಯ ಇಲಾಖೆಯಲ್ಲಿ ಸಹಾಯಕ ಆಯುಕ್ತರು, ತಹಶೀಲ್ದಾರ್ ಗ್ರೇಡ್–೧ ಮತ್ತು ತಹಶೀಲ್ದಾರ್ ಗ್ರೇಡ್–೨ ಹುದ್ದೆಗೆ ಪದೋನ್ನತಿ ನೀಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಸರ್ಕಾರವು ಸಹಾಯಕ ಆಯುಕ್ತರು, ತಹಶೀಲ್ದಾರ ಗ್ರೇಡ್–೧ ಮತ್ತು ತಹಶೀಲ್ದಾರ್ ಗ್ರೇಡ್–೨ ವೃಂದದಲ್ಲಿ ಲಭ್ಯವಿರುವ ಖಾಲಿ ಹುದ್ದೆಗಳಿಗೆ ಪದೋನ್ನತಿಯನ್ನು ಯಾವ ಕಾಲಾವಧಿಯಲ್ಲಿ ನೀಡುವ ಉದ್ದೇಶವನ್ನು ಹೊಂದಿದೆ ;

(ಉ) ಪದೋನ್ನತಿ ವಂಚಿತ ನೌಕರರ ಮನೋಬಲವನ್ನು ಸುಧಾರಿಸಲು ಸರ್ಕಾರವು ಯಾವ ಕ್ರಮ ಕೈಗೊಂಡಿದೆ ?

## ತಹಶೀಲ್ದಾರ್ ಹುದ್ದೆಗಳ ಬಗ್ಗೆ

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೩೪ (೧೩೦೦) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯಲ್ಲಿ ಮಂಜೂರಾದ ತಹಶೀಲ್ದಾರ್ ಗ್ರೇಡ್–೧ ಮತ್ತು ತಹಶೀಲ್ದಾರ್ ಗ್ರೇಡ್–೨ ಹುದ್ದೆಗಳ ಸಂಖ್ಯೆ ಎಷ್ಟು ;

(ಆ) ಸದರಿ ಹುದ್ದೆಗಳಲ್ಲಿ ಭರ್ತಿಯಾದ ಮತ್ತು ಖಾಲಿ ಇರುವ ಹುದ್ದೆಗಳ ಸಂಖ್ಯೆ ಎಷ್ಟು ;

(ಇ) ತಹಶೀಲ್ದಾರ್ ಗ್ರೇಡ್–೧ ಮತ್ತು ತಹಶೀಲ್ದಾರ್ ಗ್ರೇಡ್–೨ ಅಧಿಕಾರಿಗಳ ಜ್ಯೇಷ್ಠತಾ ಪಟ್ಟಿಯನ್ನು ಯಾವಾಗ ಪ್ರಕಟಿಸಲಾಗವುದು ;

(ಈ) ತಹಶೀಲ್ದಾರ್ ಗ್ರೇಡ್–೨ ಹುದ್ದೆಯಲ್ಲಿ ಕೆ.ಸಿ.ಎಸ್.ಆರ್ ನಿಯಮ ೩೨ ರಡಿ ಕಾರ್ಯನಿರ್ವಹಿಸುತ್ತಿರುವ ಶಿರಸ್ತೇದಾರ್/ಉಪ ತಹಶೀಲ್ದಾರ್‌ರನ್ನು ಯಾವಾಗ ೪೨ಬಿ ರಡಿ ಖಾಯಂ ಮಾಡಲಾಗುವುದು ;

(ಉ) ತಹಶೀಲ್ದಾರ್ ಗ್ರೇಡ್–೧ ಖಾಲಿ ಹುದ್ದೆ ಎಷ್ಟು ; ಈ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ?

## ರೈತರ ಜಮೀನು ದುರಸ್ತಿಗೆ ಸಲ್ಲಿಕೆಯಾದ ಅರ್ಜಿಗಳ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೩೫ (೧೩೦೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಜಿಲ್ಲೆಯಲ್ಲಿ ರೈತರ ಜಮೀನು ದುರಸ್ತಿಗೆ ಸಂಬಂಧಿಸಿದಂತೆ ನಿಗದಿಪಡಿಸಲಾದ ಗಡುವಿನೊಳಗೆ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ ಎಷ್ಟು ;

(ಆ) ಗಡುವಿನ ಅವಧಿಯೊಳಗೆ ಎಷ್ಟು ಜಮೀನುಗಳನ್ನು ದುರಸ್ತಿ ಮಾಡಲಾಗಿದೆ ;

(ಇ) ಗಡುವಿನೊಳಗೆ ದುರಸ್ತಿ ಮಾಡದೆ ಬಾಕಿ ಉಳಿದ ಅರ್ಜಿಗಳ ಸಂಖ್ಯೆ ಎಷ್ಟು ; ಈ ಸಂಬಂಧ ಅಧಿಕಾರಿಗಳ ಮೇಲೆ ಕೈಗೊಂಡ ಕ್ರಮಗಳೇನು ?

## ಕುಕ್ಕೆ ಸುಬ್ರಮಣ್ಯದಲ್ಲಿ ಖಾಸಗಿ ವಸತಿ ಗೃಹಗಳ ಹಾವಳಿ ಕುರಿತು

**ಶ್ರೀ ಸಿ.ಎನ್. ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೨೧೩೬ (೧೩೫೩) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕುಕ್ಕೆ ಸುಬ್ರಮಣ್ಯಕ್ಕೆ ಆಗಮಿಸುವ ಯಾತ್ರಿಕರಿಂದ ಖಾಸಗಿ ವಸತಿ ಗೃಹಗಳವರು ದುಪ್ಪಟ್ಟು ದರ ವಸೂಲಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈ ವಸತಿ ಗೃಹಗಳವರು ಕಳಪೆ ಸೌಲಭ್ಯಗಳನ್ನು ಒದಗಿಸುತ್ತಿರುವುದರ ಬಗ್ಗೆ ದೂರುಗಳು ಬಂದಿದೆಯೇ ;

(ಇ) ಬಂದಿದ್ದಲ್ಲಿ, ಖಾಸಗಿ ವಸತಿ ಗೃಹಗಳ ಹಾವಳಿಯನ್ನು ನಿಯಂತ್ರಿಸಲು ಕೈಗೊಂಡ ಕ್ರಮಗಳೇನು ;

(ಈ) ಇಲ್ಲಿ ವಸತಿ ಗೃಹಗಳ ಕೊರತೆ ಇರುವುದರಿಂದ ಹೆಚ್ಚಿನ ವಸತಿ ಗೃಹ ನಿರ್ಮಾಣಕ್ಕೆ ಸರ್ಕಾರ ಕ್ರಮ ಕೈಗೊಳ್ಳುವುದೇ ?

## ಸಬ್ ರಿಜಿಸ್ಟರ್ ಕಛೇರಿಗಳಲ್ಲಿ ಭ್ರಷ್ಟಾಚಾರ ಕುರಿತು

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೩೭ (೧೨೮೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಕಂದಾಯ ಇಲಾಖೆಯ ಸಬ್ ರಿಜಿಸ್ಟರ್ ಕಛೇರಿಗಳಲ್ಲಿ ಭ್ರಷ್ಟಾಚಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ದಲ್ಲಾಳಿಗಳ ಮೂಲಕ ಅಕ್ರಮವಾಗಿ ಹಣ ವಸೂಲಿ ಮಾಡಿ ಅಧಿಕಾರಿಗಳು ಅವ್ಯವಹಾರಗಳನ್ನು ನಡೆಸುತ್ತಿದ್ದು, ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸಬ್ ರಿಜಿಸ್ಟರ್ ಕಛೇರಿಗಳಲ್ಲಿ ನಡೆಯುತ್ತಿರುವ ಭ್ರಷ್ಟಾಚಾರಗಳನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ವಸತಿಗಳನ್ನು ನಿರ್ಮಿಸುವ ಬಗ್ಗೆ

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೩೮ (೧೨೮೮) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗೃಹ ನಿರ್ಮಾಣ ಮಂಡಳಿ ವತಿಯಿಂದ ವಸತಿ ನಿರ್ಮಾಣ ಮಾಡಲು ಯಾವ ಯಾವ ಯೋಜನೆಗಳಿವೆ ; ಕಳೆದ ಮೂರು ವರ್ಷಗಳಲ್ಲಿ ಎಷ್ಟು ವಸತಿಗಳು ನಿರ್ಮಾಣವಾಗಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಯಾವ ಯಾವ ವರ್ಗದವರಿಗೆ ಎಷ್ಟೆಷ್ಟು ಮನೆಗಳನ್ನು ನಿರ್ಮಿಸಲಾಗಿದೆ ; ಎಷ್ಟು ಮನೆಗಳನ್ನು ಹಂಚಿಕೆ ಮಾಡಲಾಗಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ಗೃಹ ಮಂಡಳಿಯಿಂದ ನಿರ್ಮಿಸುವ ಮನೆಗಳು ಕಳಪೆ ಗುಣಮಟ್ಟದಿಂದ ಕೂಡಿರುತ್ತವೆ ಎಂಬ ಅನುಮಾನ ಸಾರ್ವಜನಿಕರಲ್ಲಿದ್ದು, ಇದನ್ನು ಹೋಗಲಾಡಿಸಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ಮುಜರಾಯಿ ದೇವಾಲಯಗಳ ನಿರ್ವಹಣೆ ಮತ್ತು ಸಿಬ್ಬಂದಿಗಳ ಬಗ್ಗೆ

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೩೯ (೧೨೮೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಮುಜರಾಯಿ ದೇವಾಲಯಗಳಲ್ಲಿ ಎಷ್ಟು ವರ್ಗಗಳಿವೆ ; ಒದೊಂದು ವರ್ಗದಲ್ಲೂ ಎಷ್ಟು ದೇವಾಲಯುಗಳಿವೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಮುಜರಾಯಿ ದೇವಾಲಯಗಳಲ್ಲಿ ಅರ್ಚಕರು ಮತ್ತು ಇತರೆ ಸಿಬ್ಬಂದಿ ವರ್ಗದವರ ಸಂಖ್ಯೆ ಎಷ್ಟು ಮತ್ತು ಅವರಿಗೆ ನೀಡುವ ವೇತನ ಮತ್ತು ಮತ್ತಿತರ ಸೌಲಭ್ಯಗಳೇನು ; (ಎಲ್ಲಾ ವರ್ಗದ ದೇವಾಲಯಗಳ ಮಾಹಿತಿ ನೀಡುವುದು)

(ಇ) ಹುಂಡಿಗಳಲ್ಲಿ ಸಂಗ್ರಹವಾದ ಹಣವನ್ನು ಆಯಾ ದೇವಾಲಯಗಳಿಗೆ ಖರ್ಚು ಮಾಡಲಾಗುತ್ತಿದೆಯೇ ಅಥವಾ ಯಾವ ರೀತಿ ಖರ್ಚು ಮಾಡಲಾಗುವುದು ; (ವಿವರ ನೀಡುವುದು)

(ಈ) ದೇವಾಲಯಗಳ ನಿರ್ವಹಣೆಗೆ ಎಷ್ಟು ಹಣ ನೀಡಲಾಗುತ್ತಿದೆ ; ನೀಡಲಾಗುವ ಹಣ ತೀರಾ ಕಡಿಮೆ ಎಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದನ್ನು ಹೆಚ್ಚು ಮಾಡಲು ಕ್ರಮ ಕೈಗೊಳ್ಳಲಾಗುವುದೇ ?

## ಬಸ್ ನಿಲ್ದಾಣಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಕಲ್ಪಿಸುವ ಬಗ್ಗೆ

**ಡಾ|| ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೪೦ (೧೨೬೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಅನೇಕ ಸಾರಿಗೆ ಸಂಸ್ಥೆಯ ಬಸ್ ನಿಲ್ದಾಣಗಳಲ್ಲಿ ವಿಶ್ರಾಂತಿ ಕೊಠಡಿ, ಒಳ್ಳೆಯ ಉಪಹಾರ ಗೃಹ, ಶೌಚಾಲಯ, ಕುಡಿಯುವ ನೀರು ಮುಂತಾದ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದರೆ, ಇವುಗಳನ್ನು ಸರಿಪಡಿಸಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ಬಸ್ ನಿಲ್ದಾಣಗಳ ಸರ್ವೆ ಮಾಡಿ ಎಲ್ಲೆಲ್ಲಿ ತೊಂದರೆಗಳಿವೆ ಎಂಬುದನ್ನು ಪತ್ತೆ ಹಚ್ಚಿ ಹೆಚ್ಚು ಸೌಕರ್ಯಗಳನ್ನು ಮಾಡಿಕೊಡಲು ಸರ್ಕಾರ ಕೂಡಲೇ ಕಾರ್ಯ ಪ್ರವೃತ್ತವಾಗುತ್ತದೆಯೇ ?

## ಮಂತ್ರಾಲಯದಲ್ಲಿ ಇರುವ ಕರ್ನಾಟಕ ಭವನದಲ್ಲಿ ವಸತಿ ಸೌಕರ್ಯ ಹೆಚ್ಚಿಸುವ ಬಗ್ಗೆ

**ಡಾ॥ ಎಂ.ಜಿ. ಮುಳೆ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೪೧ (೧೨೯೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಂತ್ರಾಲಯದಲ್ಲಿರುವ ಕರ್ನಾಟಕ ಭವನದಲ್ಲಿ ಒಟ್ಟು ಎಷ್ಟು ವರ್ಗದ ಕೊಠಡಿಗಳಿವೆ ;

(ಆ) ಕರ್ನಾಟಕದಿಂದ ಪ್ರತಿನಿತ್ಯ ಸಾವಿರಾರು ಜನರು ಮಂತ್ರಾಲಯಕ್ಕೆ ಹೋಗುತ್ತಿದ್ದು, ಕರ್ನಾಟಕ ಭವನದಲ್ಲಿ ವಸತಿ ಸೌಕರ್ಯ ಸಿಗದೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಮಂತ್ರಾಲಯದ ಕರ್ನಾಟಕ ಭವನದಲ್ಲಿ ಹೊಸದಾಗಿ ಕಟ್ಟಡ ನಿರ್ಮಿಸಿ ಕರ್ನಾಟಕದಿಂದ ಹೋಗುವ ಜನರಿಗೆ ಹೆಚ್ಚು ಸುಸಜ್ಜಿತ ಕೊಠಡಿಗಳನ್ನು ಹಂಚಿಕೆ ಮಾಡಲು ವ್ಯವಸ್ಥೆ ಮಾಡಲಾಗುವುದೇ ?

## ಪಶು ಚಿಕಿತ್ಸಾಲಯ ಕೇಂದ್ರಗಳಿಗೆ ನೀಡುತ್ತಿರುವ ಔಷಧಿಗಳ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೪೨ (೧೨೭೩) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಎಷ್ಟು ಪಶು ಚಿಕಿತ್ಸಾಲಯ ಕೇಂದ್ರಗಳಿವೆ ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಈ ಪಶು ಚಿಕಿತ್ಸಾಲಯ ಕೇಂದ್ರಗಳಿಗೆ ಸರ್ಕಾರ ನೀಡುತ್ತಿರುವ ಔಷಧಿಗಳು ಯಾವುವು ; (ವಿವರ ಒದಗಿಸುವುದು)

(ಇ) ಪಶು ಚಿಕಿತ್ಸಾಲಯ ಕೇಂದ್ರಗಳಿಗೆ ಸರ್ಕಾರ ನೀಡುತ್ತಿರುವ ಔಷಧಿಗಳ ಗುಣಮಟ್ಟದ ಕೊರತೆ ಹಾಗೂ ಸರಿಯಾಗಿ ಔಷಧಿಗಳನ್ನು ವಿತರಣೆ

ಮಾಡದೇ ಇರುವುದು ಸರ್ಕಾರದ ಗಮನದಲ್ಲಿದೆಯೇ ;ಮುಂದಿನ ದಿನಗಳಲ್ಲಿ ಗುಣಮಟ್ಟದ ಔಷಧಿಗಳನ್ನು ಸಮರ್ಪಕವಾಗಿ ಪೂರೈಸಲು ಸರ್ಕಾರದ ಕ್ರಮವೇನು ? (ಸಂಪೂರ್ಣ ವಿವರ ಒದಗಿಸುವುದು)

## ಪಶುಸಂಗೋಪನೆ ಇಲಾಖೆಯಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರ ಬಗ್ಗೆ

**ಶ್ರೀ ಕೆ.ಎಸ್. ನವೀನ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೪೩ (೧೨೭೦) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೧ ವರ್ಷದಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ಹೊರ ಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರೆಷ್ಟು ; (ವೃಂದವಾರು ವಿವರ ಒದಗಿಸುವುದು)

(ಆ) ಹೊರಗುತ್ತಿಗೆ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ನೌಕರರಿಗೆ ನಿಗಧಿಪಡಿಸಿರುವ ವೇತನ ಎಷ್ಟು ; (ಪ್ರತಿ ವೃಂದದ ವೇತನದ ವಿವರವನ್ನು ಒದಗಿಸುವುದು)

(ಇ) ಹೊರಗುತ್ತಿಗೆ ನೌಕರರು ವೇತನ ಪಡೆಯಲು ಗುತ್ತಿಗೆದಾರರಿಗೆ ಲಂಚ ನೀಡಿ ವೇತನ ಪಡೆಯುತ್ತಿರುವುದು ಸರ್ಕಾರದ ಗಮನದಲ್ಲಿದೆಯೇ ; ಸದರಿ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ಕೈಗೊಂಡ ಕ್ರಮವೇನು ? (ಸಂಪೂರ್ಣ ವಿವರ ಒದಗಿಸುವುದು)

## ದೇವನಹಳ್ಳಿ ಕೋಟೆಯಲ್ಲಿರುವ ಕೃಷ್ಣ ದೇವಸ್ಥಾನದ ಬಗ್ಗೆ

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೪೪ (೧೩೩೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ತಾಲ್ಲೂಕಿನ ದೇವನಹಳ್ಳಿ ಪಟ್ಟಣದ ಕೋಟೆಯಲ್ಲಿರುವ

ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನವು ಪುರಾತನ ಕಾಲದಲ್ಲಿ ಸ್ಥಾಪಿತವಾಗಿದ್ದು, ಈ ದೇವಸ್ಥಾನವು ಮುಜರಾಯಿ ಇಲಾಖೆಯ ವ್ಯಾಪ್ತಿಗೆ ಒಳಪಟ್ಟಿದ್ದು ಇಲ್ಲಿ ಮೂಲಭೂತ ಸೌಕರ್ಯಗಳ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಈ ದೇವಸ್ಥಾನಕ್ಕೆ ಅಪಾರ ಸಂಖ್ಯೆಯಲ್ಲಿ ಭಕ್ತಾದಿಗಳು ದಿನನಿತ್ಯ ಭೇಟಿ ನೀಡುತ್ತಿದ್ದು, ಹಾಗೂ ಈ ದೇವಸ್ಥಾನವು ಒಂದು ಪ್ರೇಕ್ಷಣೀಯ ಸ್ಥಳವೂ ಕೂಡ ಆಗಿದ್ದು, ಸಾರ್ವಜನಿಕರಿಗೆ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಮುಜರಾಯಿ ಇಲಾಖೆಯಿಂದ ಸದರಿ ದೇವಸ್ಥಾನಕ್ಕೆ ಒದಗಿಸಲಾಗುತ್ತಿರುವ ಅನುದಾನವೆಷ್ಟು ? (ಮಾಹಿತಿ ನೀಡುವುದು)

## ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ವಿವಿಧ ಯೋಜನೆಗಳ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) :-**

೧೧೪೫ (೧೩೩೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪ ಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ಅಲ್ಪಸಂಖ್ಯಾತ ಸಮುದಾಯಗಳ ಸಾಮಾಜಿಕ ಮತ್ತು ಆರ್ಥಿಕ ಸಬಲೀಕರಣಕ್ಕಾಗಿ ಸರ್ಕಾರವು ಹಲವು ಕ್ರಮಗಳನ್ನು ಕೈಗೊಳ್ಳಲು ಯೋಜಿಸಿದ್ದು, ಅದರಲ್ಲಿ ಈ ಹಿಂದೆ ಆಯ-ವ್ಯಯದಲ್ಲಿ ೧೦೦ ಹೊಸ ಮೌಲನಾ ಆಜಾದ್ ಶಾಲೆಗಳನ್ನು ತೆರೆಯಲಾಗುವುದು ಎಂದು ಘೋಷಿಸಿದ್ದು, ರಾಜ್ಯದ ಯಾವ ಯಾವ ಜಿಲ್ಲೆಗಳಲ್ಲಿ ಎಷ್ಟು ಹೊಸ ಮೌಲಾನಾ ಆಜಾದ್ ಶಾಲೆಗಳನ್ನು ತೆರೆಯಲಾಗಿದೆ ;

(ಆ) ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಉದ್ಯಮಶೀಲರು ಸ್ಥಾಪಿಸುವ ಸೂಕ್ಷ್ಮ ಮತ್ತು ಸಣ್ಣ ಕೈಗಾರಿಕಾ ಹೊಸ ಘಟಕಗಳನ್ನು ಸ್ಥಾಪಿಸಲು ಹಾಗೂ ಅಸ್ತಿತ್ವದಲ್ಲಿರುವ ಘಟಕಗಳ ಉನ್ನತೀಕರಣಕ್ಕೆ ಕೆ.ಎಸ್.ಎಫ್.ಸಿ ಮೂಲಕ ಪಡೆಯುವ ೧೦ ಕೋಟಿ ರೂ.ವರೆಗಿನ

ಸಾಲಕ್ಕೆ ಶೇ.೬ರಷ್ಟು ಬಡ್ಡಿ ಸಹಾಯಧನ ನೀಡಲಾಗುವುದು ಎಂದು ಆಯ–ವ್ಯಯದಲ್ಲಿ ಘೋಷಿಸಿದ್ದು, ೨೦೨೪–೧೫ನೇ ಸಾಲಿನಲ್ಲಿ ಎಷ್ಟು ಫಲಾನುಭವಿಗಳು ಈ ಯೋಜನೆಯಲಡಿ ಅರ್ಜಿಗಳನ್ನು ಸಲ್ಲಿಸಿರುತ್ತಾರೆ ಮತ್ತು ಎಷ್ಟು ಫಲಾನುಭವಿಗಳ ಅರ್ಜಿಗಳನ್ನು ಪುರಸ್ಕರಿಸಲಾಗಿರುತ್ತದೆ ;

(ಇ) ರಾಜ್ಯದಲ್ಲಿನ ಪ್ರಮುಖ ಧಾರ್ಮಿಕ ಸ್ಥಳಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲು ೨೦ ಕೋಟಿ ರೂ. ಅನುದಾನ ಒದಗಿಸಲಾಗುವುದು ಎಂದು ಆಯ–ವ್ಯಯದಲ್ಲಿ ಘೋಷಿಸಿದ್ದು, ರಾಜ್ಯದ ಎಷ್ಟು ಪ್ರಮುಖ ಧಾರ್ಮಿಕ ಸ್ಥಳಗಳನ್ನು ಈ ಯೋಜನೆಯಡಿ ಗುರುತಿಸಲಾಗಿದೆ ಮತ್ತು ಈ ಧಾರ್ಮಿಕ ಸ್ಥಳಗಳಿಗೆ ಎಷ್ಟು ಅನುದಾನ ಒದಗಿಸಲಾಗಿದೆ ? (ಧಾರ್ಮಿಕ ಸ್ಥಳವಾರು ಮಾಹಿತಿ ನೀಡುವುದು)

## ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ನೆನೆಗುದಿಗೆ ಬಿದ್ದಿರುವ ಕುರಿತು

**ಶ್ರೀ ಕೆ. ಪ್ರತಾಪ್ ಸಿಂಹ ನಾಯಕ್ (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೪೬ (೧೩೭೯) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಅನುದಾನ ಕೊರತೆ ಹಾಗೂ ಭೂಸ್ವಾಧೀನ ಪ್ರಕ್ರಿಯೆಯಲ್ಲಾಗುತ್ತಿರುವ ವಿಳಂಬ ಧೋರಣೆಯಿಂದ ಹಲವಾರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಒಂದರಿಂದ ಐದು ವರ್ಷಗಳ ಹಿಂದೆಯೇ ಪೂರ್ಣಗೊಳ್ಳಬೇಕಿದ್ದ ಹಲವಾರು ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳು ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವುದನ್ನು ತಪ್ಪಿಸಲು ಸರ್ಕಾರ ಇದುವರೆಗೆ ಅಗತ್ಯ ಹಾಗೂ ಸೂಕ್ತ ಕ್ರಮ ವಹಿಸದಿರಲು ಕಾರಣಗಳೇನು ;

(ಇ) ದೀರ್ಘಕಾಲದಿಂದ ನೆನೆಗುದಿಗೆ ಬಿದ್ದಿರುವ ರಾಷ್ಟ್ರೀಯ ಹೆದ್ದಾರಿ ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಸರ್ಕಾರ ಈ ಕೂಡಲೇ ಅಗತ್ಯ ಕ್ರಮ ವಹಿಸುವುದೇ ?

## ತಸ್ತಿಕ್ ಮೊತ್ತವನ್ನು ಹೆಚ್ಚಿಸುವ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೪೭ (೧೩೨೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮುಜರಾಯಿ ಇಲಾಖೆಯಡಿ ಬರುವ 'ಸಿ' ವರ್ಗದ ದೇಗುಲಗಳಿಗೆ ನೀಡುತ್ತಿರುವ ತಸ್ತಿಕ್ ಮೊತ್ತವನ್ನು ಹೆಚ್ಚಿಸಬೇಕೆಂಬ ಬೇಡಿಕೆ ಬಹುಕಾಲದಿಂದ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಮುಜರಾಯಿ ಇಲಾಖೆಯಡಿ ಬರುವ 'ಸಿ' ವರ್ಗದ ದೇಗುಲಗಳಿಗೆ ಪ್ರಸ್ತುತ ನೀಡುತ್ತಿರುವ ತಸ್ತಿಕ್ ಮೊತ್ತವೆಷ್ಟು ;

(ಇ) ಯಾವ ಕಾಲಮಿತಿಯೊಳಗೆ ಮುಜರಾಯಿ ಇಲಾಖೆಯಡಿ ಬರುವ 'ಸಿ' ವರ್ಗದ ದೇಗುಲಗಳಿಗೆ ಪ್ರಸ್ತುತ ನೀಡುತ್ತಿರುವ ತಸ್ತಿಕ್ ಮೊತ್ತವನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲಾಗುವುದು ;

(ಈ) ಮುಜರಾಯಿ ಇಲಾಖೆಯಡಿ ಬರುವ 'ಸಿ' ವರ್ಗದ ದೇಗುಲಗಳನ್ನು ಕಾರ್ಪೋರೇಟ್ ಸಾಮಾಜಿಕ ಹೊಣೆಗಾರಿಕೆ ನಿಧಿಯನ್ನು (ಸಿಎಸ್ಆರ್) ಬಳಸಿಕೊಂಡು ಅಭಿವೃದ್ಧಿಪಡಿಸಲು ಸರ್ಕಾರ ಈ ಕೂಡಲೇ ಅಗತ್ಯ ಕ್ರಮವಹಿಸುವುದೇ ?

## ದೇಶಿ ಗೋ ತಳಿಗಳ ಸಂರಕ್ಷಣೆ ಕುರಿತು

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೪೮ (೧೩೨೧) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ದೇಶಿ ಗೋ ತಳಿಗಳ ಸಂರಕ್ಷಣೆ, ಅಭಿವೃದ್ಧಿಗೆ ಸರ್ಕಾರ ರೂಪಿಸಿರುವ ಯೋಜನೆ ಮತ್ತು ಕಾರ್ಯಕ್ರಮಗಳೇನು ;

(ಆ) ಪ್ರಸ್ತುತ, ರಾಜ್ಯದಲ್ಲಿ ಎಷ್ಟು ದೇಶಿ ಗೋ ತಳಿಗಳಿವೆ ಮತ್ತು ಪ್ರತಿಯೊಂದು ದೇಶಿ ಗೋ ತಳಿಯಡಿ ಇರುವ ಗೋವುಗಳ ಸಂಖ್ಯೆ ಎಷ್ಟು ;

(ಇ) ಸದರಿ ದೇಶಿ ಗೋ ತಳಿಗಳ ಮಹತ್ವ ಹಾಗೂ ವಿಶೇಷತೆ ಸಾರಲು ಇಲಾಖೆ ವಹಿಸಿರುವ ಕ್ರಮಗಳೇನು ;

(ಈ) ಕಳೆದ ಎರಡು ವರ್ಷಗಳಲ್ಲಿ ಸದರಿ ದೇಶಿ ಗೋ ತಳಿಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಸರ್ಕಾರ ವಿನಿಯೋಗಿಸಿರುವ ಅನುದಾನವೆಷ್ಟು ;

(ಉ) ಈ ಅನುದಾನದ ಮೂಲಕ ಅನುಷ್ಠಾನಗೊಳಿಸಿರುವ ಕಾರ್ಯಕ್ರಮಗಳು ಯಾವುವು ; ಹಾಗೂ ಅವುಗಳ ವಿವರಗಳೇನು ?

## ಅಕ್ರಮ ಸಕ್ರಮಕ್ಕೆ ಸಲ್ಲಿಕೆಯಾಗಿರುವ ಅರ್ಜಿಗಳ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೪೯ (೧೩೦೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಅಕ್ರಮ ಸಕ್ರಮಕ್ಕೆ ಸಲ್ಲಿಕೆಯಾಗಿರುವ ಹಲವಾರು ಅರ್ಹ ಅರ್ಜಿಗಳನ್ನು ಅಕಾರಣವಾಗಿ ಮತ್ತು ಅವೈಜ್ಞಾನಿಕವಾಗಿ ತಿರಸ್ಕರಿಸುವ ಪ್ರಕ್ರಿಯೆಯ ಕಾರಣದಿಂದಾಗಿ ತಲಾತಲಾಂತರದಿಂದ ಉಳುಮೆ ಮಾಡುತ್ತಾ ಆ ಭೂಮಿ ತಮಗೆ ಸಕ್ರಮಗೊಳ್ಳುವ ಆಶಾಭಾವನೆ ಹೊಂದಿದ್ದ ರೈತರಿಗೆ ತೀವ್ರ ಆಘಾತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ಅರ್ಜಿಗಳ ವಿಲೇವಾರಿ ಸಲುವಾಗಿ ಸರ್ಕಾರ ರೂಪಿಸಿರುವ ನಿಯಮ, ಮಾನದಂಡ ಮತ್ತು ಮಾರ್ಗಸೂಚಿಗಳೇನು ;

(ಇ) ರಾಜ್ಯದಲ್ಲಿ ಬಗರ್‌ಹುಕುಂ ಸಾಗುವಳಿ ಭೂಮಿಯನ್ನು ಸಕ್ರಮಗೊಳಿಸುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳ ಒಟ್ಟು ಸಂಖ್ಯೆ ಎಷ್ಟು ; ಹಾಗೂ ಸದರಿ ಅರ್ಜಿಗಳ ವಿಲೇವಾರಿ ಪ್ರಕ್ರಿಯೆ ಪ್ರಸ್ತುತ ಯಾವ ಹಂತದಲ್ಲಿದೆ ;

(ಈ) ರಾಜ್ಯದಲ್ಲಿನ ಎಲ್ಲಾ ಅರ್ಹ ಬಗರ್‌ಹುಕುಂ ಸಾಗುವಳಿದಾರರ ಅರ್ಜಿ ಯಾವುದೇ ಕಾರಣಕ್ಕೂ ತಿರಸ್ಕಾರಗೊಳ್ಳದೆ ಅವರಿಗೆ ನ್ಯಾಯ ದೊರಕಿಸಿಕೊಡಲು ಸರ್ಕಾರ ಕೂಡಲೇ ಅಗತ್ಯ ಕ್ರಮ ವಹಿಸುವುದೇ ?

## ಮುಜರಾಯಿ ಇಲಾಖೆಯಲ್ಲಿ ವೇತನ ತಾರತಮ್ಯದ ಬಗ್ಗೆ

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ. (ವಿಧಾನಸಭೆಯಿಂದ ಚುನಾಯಿತರಾದವರು):–**

೧೧೫೦ (೧೩೦೬) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸಾಮಾನ್ಯ ಕರ್ತವ್ಯಕ್ಕೆ ಸಮಾನ ವೇತನ ಎಂಬ ನಿಯಮವಿದ್ದು ರಾಜ್ಯಾದ್ಯಂತ ಎರಡೂವರೆ ಸಾವಿರ ದೇವಾಲಯಗಳ ನೌಕರರು ವೇತನ ತಾರತಮ್ಯಕ್ಕೆ ಒಳಗಾಗಿ ಬದುಕು ನಡೆಸಲು ದುಸ್ತರವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಸದರಿ ನೌಕರರ ವೇತನ ತಾರತಮ್ಯ ನಿವಾರಣೆ ಹಾಗೂ ವೇತನ ಪರಿಷ್ಕರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು ;

(ಇ) ಒಂದೇ ಇಲಾಖೆ, ಒಂದೇ ಸ್ಥಳ ಹಾಗೂ ಒಂದೇ ಕೆಲಸ ಮಾಡುವ ಉದ್ಯೋಗಿಗಳ ನಡುವೆ ಸುಮಾರು ೨೫ ರಿಂದ ೩೦ ಸಾವಿರ ರೂ. ವೇತನ ತಾರತಮ್ಯವಿದ್ದು, ಇದನ್ನು ಸರಿಪಡಿಸಲು ಸರ್ಕಾರ ಇದುವರೆಗೆ ಯಾವುದೇ ಕ್ರಮವಹಿಸದೇ ಇರಲು ಕಾರಣಗಳೇನು ;

(ಈ) ಯಾವ ಕಾಲಮಿತಿಯೊಳಗೆ, ಸದರಿ ನೌಕರರ ವೇತನ ತಾರತಮ್ಯ ನಿವಾರಣೆ ಹಾಗೂ ವೇತನ ಪರಿಷ್ಕರಣೆಗೆ ಅಗತ್ಯ ಕ್ರಮ ವಹಿಸಲಾಗುವುದು ?

# ಗೋಹತ್ಯೆ, ಗೋಹಿಂಸೆ ಮತ್ತು ಅಕ್ರಮ ಗೋಸಾಗಾಣಿಕೆ ವಿರುದ್ಧ ಕೈಗೊಂಡ ಕ್ರಮದ ಕುರಿತು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೧ (೧೩೫೧) ಮಾನ್ಯ ಪಶು ಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಗೋಹತ್ಯೆ, ಗೋಹಿಂಸೆ ಮತ್ತು ಅಕ್ರಮ ಗೋಸಾಗಾಣಿಕೆ ಪ್ರಕರಣಗಳು ಹೆಚ್ಚಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಳೆದ ೨ ವರ್ಷದಿಂದ ಎಷ್ಟು ಗೋಹತ್ಯೆ, ಗೋಹಿಂಸೆ ಮತ್ತು ಅಕ್ರಮ ಗೋ ಸಾಗಾಣೀಕೆ ಪ್ರಕರಣಗಳು ದಾಖಲಾಗಿವೆ ;

(ಆ) ಈ ಪ್ರಕರಣಗಳಲ್ಲಿ ಎಷ್ಟು ಜನರನ್ನು ಬಂಧಿಸಲಾಗಿದೆ ; ಎಷ್ಟು ಜನರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿವೆ ; (ಪ್ರಕರಣವಾರು ವಿವರ ನೀಡುವುದು)

(ಇ) ಕಳೆದ ೨ ವರ್ಷದಿಂದ ಗೋಹತ್ಯೆ, ಗೋಹಿಂಸೆ ಮತ್ತು ಗೋಸಾಗಾಣಿಕೆ ಪ್ರಕರಣಗಳನ್ನು ತಡೆಯಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; (ವಿವರ ಒದಗಿಸುವುದು)

(ಈ) ಇತ್ತೀಚೆಗೆ ರಾಜ್ಯದ ಹಲವೆಡೆ ಹಸುವನ್ನು ಕಡಿದು ಗರ್ಭದಿಂದ ಕರು ತೆಗೆದು ಬಿಸಾಡಿ ಮಾಂಸ ಹೊತ್ತೊಯ್ದಿರುವುದು ಹಾಗೂ ಹಸುಗಳ ಕೆಚ್ಚಲು ಕೊಯ್ದು ಅಮಾನವೀಯ ಪ್ರಕರಣಗಳಿಗೆ ಸಂಬಂಧಪಟ್ಟಂತೆ ಎಷ್ಟು ಜನರ ವಿರುದ್ಧ ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಇವರ ವಿರುದ್ಧ ಸರ್ಕಾರ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಳ್ಳದೆ ಇರಲು ಕಾರಣವೇನು ;

(ಉ) ಗೋಹತ್ಯೆ ಅಕ್ರಮ ಗೋಸಾಗಾಣಿಕೆ ಮತ್ತು ಗೋಹಿಂಸೆ ಪ್ರಕರಣಗಳು ಮರುಕಳಿಸದಂತೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ?

## ರಾಜ್ಯದಲ್ಲಿ ವಸತಿ/ನಿವೇಶನ ರಹಿತರ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೨ (೧೩೫೨) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ವಸತಿ ರಹಿತರು ಹಾಗೂ ನಿವೇಶನ ರಹಿತರ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ಒದಗಿಸುವುದು)

(ಆ) ಈ ಪೈಕಿ ಗ್ರಾಮೀಣ ಪ್ರದೇಶ ಹಾಗೂ ನಗರ ಪ್ರದೇಶದ ವಸತಿ ರಹಿತರು ಹಾಗೂ ನಿವೇಶನ ರಹಿತರ ಸಂಖ್ಯೆ ಎಷ್ಟು ;

(ಇ) ಕಳೆದ ೨ ವರ್ಷದಿಂದ ಸರ್ಕಾರದಿಂದ ಗ್ರಾಮೀಣ ಹಾಗೂ ನಗರ ಪ್ರದೇಶದ ವಸತಿ ರಹಿತರಿಗೆ ಹಾಗೂ ನಿವೇಶನ ರಹಿತರಿಗೆ ಎಷ್ಟು ಮನೆ/ನಿವೇಶನಗಳನ್ನು ಯಾವ ಯಾವ ಯೋಜನೆಯಡಿ ಮಂಜೂರು ಮಾಡಲಾಗಿದೆ ; (ಜಿಲ್ಲಾವಾರು ವಿವರ ಒದಗಿಸುವುದು)

(ಈ) ಮಂಜೂರು ಮಾಡಲಾದ ಮನೆಗಳ ನಿರ್ಮಾಣ ಕಾರ್ಯ ಪೂರ್ಣಗೊಂಡಿದೆಯೇ ; ಪ್ರಗತಿಯಲ್ಲಿರುವ ಮನೆಗಳೆಷ್ಟು ; ಎಷ್ಟು ಮನೆಗಳನ್ನು ಫಲಾನುಭವಿಗಳಿಗೆ ಹಂಚಿಕೆ ಮಾಡಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ಲೋಕೋಪಯೋಗಿ ಇಲಾಖೆಯಿಂದ ಕೈಗೊಂಡಿರುವ ಕಾಮಗಾರಿಗಳ ಕುರಿತು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೩ (೧೩೫೭) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೩ ವರ್ಷಗಳಲ್ಲಿ ಚಿಕ್ಕಮಗಳೂರು ಜಿಲ್ಲೆಯ ಲೋಕೋಪಯೋಗಿ ರಸ್ತೆ ಹಾಗೂ ಕಟ್ಟಡಗಳ ನಿರ್ವಹಣೆಗಾಗಿ ಎಷ್ಟು ಅನುದಾನ ಮಂಜೂರಾಗಿದೆ ; (ವಿಧಾನಸಭಾ ಕ್ಷೇತ್ರವಾರು ವಿವರ ನೀಡುವುದು)

(ಆ) ಈ ಅನುದಾನದಲ್ಲಿ ಯಾವ ಯಾವ ರಸ್ತೆ ಹಾಗೂ ಕಟ್ಟಡ ನಿರ್ವಹಣೆ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ ; (ವಿಧಾನಸಭಾ ಕ್ಷೇತ್ರವಾರು ವಿವರ ಒದಗಿಸುವುದು)

(ಇ) ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಅನುದಾನ ಮಂಜೂರಾಗಿದೆ ಮತ್ತು ವೆಚ್ಚ ಮಾಡಲಾಗಿದೆ ? (ಕಾಮಗಾರಿವಾರು ವಿವರ ಒದಗಿಸುವುದು)

## ಅಪೆಂಡಿಕ್ಸ್–ಇ ಅಡಿ ಕೈಗೊಂಡಿರುವ ಕಾಮಗಾರಿಗಳಿಗೆ ಅನುದಾನ ಬಿಡುಗಡೆ ಆಗದಿರುವ ಕುರಿತು

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೪ (೧೩೫೮) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೧–೨೨ನೇ ಸಾಲಿನ ಅಪೆಂಡಿಕ್ಸ್–ಇ ಲೆಕ್ಕ ಶೀರ್ಷಿಕೆ ೪೦೫೯ ಅಡಿಯಲ್ಲಿ ಚಿಕ್ಕಮಗಳೂರು ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಸಮುದಾಯ ಭವನಗಳ ನಿರ್ಮಾಣಕ್ಕಾಗಿ ಎಷ್ಟು ಅನುದಾನ ಮಂಜೂರಾಗಿದೆ ; ಈ ಅನುದಾನದಲ್ಲಿ ಎಷ್ಟು ಸಮುದಾಯ ಭವನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲು ಕಾರ್ಯಕ್ರಮ ಪಟ್ಟಿ ತಯಾರಿಸಲಾಗಿತ್ತು ;

(ಆ) ಇವುಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ಅನುಷ್ಠಾನಗೊಳಿಸಿ ಪೂರ್ಣಗೊಳಿಸಲಾಗಿದೆ ; ಪ್ರಗತಿಯಲ್ಲಿರುವ ಮತ್ತು ಬಾಕಿ ಇರುವ ಕಾಮಗಾರಿಗಳು ಯಾವುವು ಬಾಕಿ ಇರಲು ಕಾರಣಗಳೇನು ; (ಕಾಮಗಾರಿವಾರು ವಿವರ ನೀಡುವುದು)

(ಇ) ಪೂರ್ಣಗೊಂಡ ಕಾಮಗಾರಿಗಳಿಗೆ ಬಿಲ್ ಪಾವತಿ ಮಾಡಲು ಅನುದಾನ ಬಿಡುಗಡೆಯಾಗದೆ ಇರುವುದರಿಂದ ಕಾಮಗಾರಿ ನಿರ್ವಹಿಸಿದ ಗುತ್ತಿಗೆದಾರರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಈವರೆಗೆ ಯಾವ ಯಾವ ಕಾಮಗಾರಿಗಳಿಗೆ ಎಷ್ಟು ಬಿಲ್ ಪಾವತಿಸಲಾಗಿದೆ: ಎಷ್ಟು ಬಿಲ್ ಪಾವತಿಸಲು ಬಾಕಿ ಇದೆ ; ಬಿಲ್ ಪಾವತಿಸದೇ ಇರಲು ಕಾರಣಗಳೇನು ; (ವಿವರ ಒದಗಿಸುವುದು)

(ಉ) ಬಾಕಿ ಇರುವ ಬಿಲ್ ಪಾವತಿಸಲು ಯಾವಾಗ ಅನುದಾನ ಬಿಡುಗಡೆ ಮಾಡಲಾಗುವುದು ಹಾಗೂ ಬಾಕಿ ಇರುವ ಸಮುದಾಯ ಭವನ ನಿರ್ಮಾಣ ಕಾಮಗಾರಿಗಳನ್ನು ಯಾವಾಗ ಪೂರ್ಣಗೊಳಿಸಲಾಗುವುದು ? (ವಿವರ ಒದಗಿಸುವುದು)

## ಕೊಳಗೇರಿ ಅಭಿವೃದ್ಧಿ ಮಂಡಳಿಯಿಂದ ಕೈಗೊಂಡಿರುವ ಮನೆಗಳ ನಿರ್ಮಾಣ ಕಾರ್ಯದ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೫ (೧೩೫೯) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೫ ವರ್ಷಗಳಂದ ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೊಳಗೇರಿ ಅಭಿವೃದ್ಧಿ ಮಂಡಳಿ ವತಿಯಿಂದ ಎಷ್ಟು ಮನೆಗಳನ್ನು ನಿರ್ಮಾಣ ಮಾಡಲು ಅನುಮೋದನೆ ನೀಡಲಾಗಿದೆ ; (ತಾಲ್ಲೂಕುವಾರು ವರ್ಷವಾರು ವಿವರವನ್ನು ನೀಡುವುದು)

(ಆ) ಈ ಮನೆಗಳ ಘಟಕ ವೆಚ್ಚ ಎಷ್ಟು ; ಇದರಲ್ಲಿ ಸರ್ಕಾರದ ಅನುದಾನವೆಷ್ಟು ಫಲಾನುಭವಿಗಳ ವಂತಿಗೆ ಎಷ್ಟು ;

(ಇ) ಚಿಕ್ಕಮಗಳೂರು ನಗರ ಕೊಳಗೇರಿಗಳಲ್ಲಿ ಎಷ್ಟು ಮನೆಗಳ ಕಾರ್ಯ ಆರಂಭಿಸಲಾಗಿದೆ ಪೂರ್ಣಗೊಂಡ ಹಾಗೂ ಪ್ರಗತಿಯಲ್ಲಿರುವ ಮನೆಗಳಿಷ್ಟು ; ಪ್ರಾರಂಭಗೊಳ್ಳದ ಮನೆಗಳೆಷ್ಟು ; ಎಷ್ಟು ಮನೆಗಳು ರದ್ದುಗೊಂಡಿವೆ ; (ವಿವರ ಒದಗಿಸುವುದು)

(ಈ) ಈ ಕಾಮಗಾರಿಗಳನ್ನು ನಿರ್ವಹಿಸುತ್ತಿರುವ ಗುತ್ತಿಗೆದಾರರು ಯಾರು ; (ಕಾಮಗಾರಿ ವಿವರ ಬದಗಿಸುವುದು)

(ಉ) ಚಿಕ್ಕಮಗಳೂರು ನಗರದ ಕೊಳಚೆ ಪ್ರದೇಶಗಳಲ್ಲಿ ಮನೆಗಳನ್ನು ಪ್ರಾರಂಭಿಸಿ ವರ್ಷಗಳು ಕಳೆದರೂ ಇದುವರೆಗೂ ಮನೆಗಳನ್ನು ಪೂರ್ಣಗೊಳಿಸದೆ ಇರುವುದರಿಂದ ಫಲಾನುಭವಿಗಳಿಗೆ ತೀವ್ರ ತೊಂದರೆಯಾಗಿರುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದರೆ ಈ ರೀತಿ ವಿಳಂಬವಾಗುತ್ತಿರುವುದಕ್ಕೆ ಕಾರಣಗಳೇನು ;

(ಊ) ಕಾಮಗಾರಿ ವಿಳಂಬ ಮಾಡಿ ಫಲಾನುಭವಿಗಳಿಗೆ ತೊಂದರೆ ಮಾಡುತ್ತಿರುವ ಅಧಿಕಾರಿಗಳು ಹಾಗೂ ಗುತ್ತಿಗೆದಾರರ ಮೇಲೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ ? (ವಿವರ ಒದಗಿಸುವುದು)

## ಕೆ–ರೇರಾ ನಿಯಮಗಳ ಉಲ್ಲಂಘನೆ ಬಗ್ಗೆ

**ಶ್ರೀ ಸಿ.ಟಿ. ರವಿ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೬ (೧೨೯೩) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ನಿಯಮಗಳನ್ನು ಉಲ್ಲಂಘಿಸಿ ನಿವೇಶನ ಮತ್ತು ಮನೆಗಳನ್ನು ನಿರ್ಮಾಣ ಮಾಡಿರುವವರ ವಿರುದ್ಧ ಕೆ–ರೇರಾ ಸಂಸ್ಥೆಯು ಇಲ್ಲಿಯವರೆಗೂ ದಾಖಲಿಸಿಕೊಂಡಿರುವ ದೂರುಗಳು ಎಷ್ಟು ; (ಪ್ರಕರಣವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಕೆ–ರೇರಾ ನಿಯಮಗಳನ್ನು ಉಲ್ಲಂಘನೆ ಮಾಡಿರುವವರಿಗೆ ವಿಧಿಸಿರುವ ದಂಡದ ರೂಪದ ಪರಿಹಾರ ಮೊತ್ತವೆಷ್ಟು ? (ಪ್ರಕರಣವಾರು ಮತ್ತು ಜಿಲ್ಲಾವಾರು ಮಾಹಿತಿ ನೀಡುವುದು)

## ದೇವಸ್ಥಾನಗಳ ಸ್ವಾಯತ್ತತೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೭ (೧೨೭೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೨–೨೩ನೇ ಸಾಲಿನ ಆಯವ್ಯಯದಲ್ಲಿ ಮುಜರಾಯಿ ಇಲಾಖೆ ಆಡಳಿತ ವ್ಯಾಪ್ತಿಗೆ ಒಳಪಟ್ಟಿರುವ ದೇವಸ್ಥಾನಗಳಿಗೆ ಸ್ವಾಯತ್ತತೆ ನೀಡಲು ಕ್ರಮ ವಹಿಸಲಾಗುವುದಾಗಿ ಘೋಷಿಸಿದ್ದು, ಅದರಂತೆ ಇದುವರೆಗೆ ಎಷ್ಟು ದೇವಸ್ಥಾನಗಳಿಗೆ ಸ್ವಾಯತ್ತತೆ ನೀಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ದೇವಸ್ಥಾನಗಳಿಗೆ ಯಾವ ರೀತಿಯಲ್ಲಿ ಸ್ವಾಯತ್ತತೆ ನೀಡಲಾಗುತ್ತದೆ ; ಸಂಪೂರ್ಣ ಸ್ವಾಯತ್ತತೆ ಎಂದರೇನು ; ಸರ್ಕಾರದ ಯಾವುದೇ ರೀತಿಯ ಹಸ್ತಕ್ಷೇಪವು ದೇವಸ್ಥಾನದ ದೈನಂದಿನ ಪೂಜೆ, ವ್ಯವಸ್ಥೆಗಳಲ್ಲಿ ಇರದಿರುವುದನ್ನು ಸ್ವಾಯುತ್ತತೆ ಎಂದು ಕರೆಯಲಾಗಿದೆಯೇ ; ಈ ಕುರಿತು ಸರ್ಕಾರದ ನಿಲುವೇನು ;

(ಇ) ದೇವಸ್ಥಾನಗಳ ಆಡಳಿತ ವ್ಯವಸ್ಥೆ ಹಾಗೂ ದೈನಂದಿನ ಕಾರ್ಯಭಾರಗಳನ್ನು ಸದರಿ ದೇವಸ್ಥಾನದ ಭಕ್ತರ ಅಧೀನಕ್ಕೆ ನೀಡುವ ಕುರಿತು ಸರ್ಕಾರದ ನಿಲುವೇನು ;

(ಈ) ಪ್ರತೀ ದೇವಸ್ಥಾನಕ್ಕೆ ಅದರ ಭಕ್ತರನ್ನೇ ಸದಸರನ್ನಾಗಿ ನೋಂದಾಯಿಸಲು ಅವಕಾಶ ಮಾಡಿಕೊಟ್ಟು ಆ ಸದಸ್ಯರ ಮೂಲಕ ಚುನಾಯಿತ ಸಮಿತಿಯನ್ನು ದೇವಸ್ಥಾನದ ದೈನಂದಿನ ಆಡಳಿತ ನೋಡಿಕೊಳ್ಳಲು ಅವಕಾಶ ಕಲ್ಪಿಸುವ ಮೂಲಕ ದೇವಸ್ಥಾನಗಳನ್ನು ಸರ್ಕಾರಿ ಆಡಳಿತದಿಂದ ಮುಕ್ತಗೊಳಿಸುವ ಕುರಿತು ಸರ್ಕಾರದ ನಿಲುವೇನು ?

## ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ಥಿಯ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೮ (೧೨೮೦) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯ ಜಿಲ್ಲಾವಾರು/ ದೇವಸ್ಥಾನವಾರು ವಿವರ ನೀಡುವುದು: ರಾಜ್ಯದ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯ ಒಟ್ಟು ಮೌಲ್ಯವೆಷ್ಟು ;

(ಆ) ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಪಹಣಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಇದುವರೆಗೆ ಎಷ್ಟು ಎಕರೆ ಭೂಮಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಖಾತೆ/ಪಹಣಿ ಮಾಡಲಾಗಿದೆ ; (ಜಿಲ್ಲಾವಾರು ವಿವರ ನೀಡುವುದು)

(ಇ) ಸರ್ಕಾರಿ ಅನುದಾನಗಳನ್ನು ಪಡೆಯುವ ಖಾಸಗಿ ದೇವಸ್ಥಾನಗಳನ್ನು ಮುಜರಾಯಿ ಇಲಾಖೆ ತನ್ನ ವಶಕ್ಕೆ ಪಡೆಯುವುದೇ ; ಈ ಕುರಿತು ಸರ್ಕಾರದ ನಿಲುವೇನು ;

(ಈ) ರಾಜ್ಯದಲ್ಲಿರುವ ಖಾಸಗಿ ದೇವಸ್ಥಾನಗಳ ಸಂಖ್ಯೆ ಎಷ್ಟು ; ಕಳೆದ ೩ ವರ್ಷದಲ್ಲಿ ಮುಜರಾಯಿ ಇಲಾಖೆಯಲ್ಲಿರುವ ಖಾಸಗಿ ದೇವಸ್ಥಾನಗಳಿಗೆ ನೀಡಲಾದ ಸಹಾಯ ಧನವೆಷ್ಟು ; (ಜಿಲ್ಲಾವಾರು ವಿವರ ನೀಡುವುದು)

(ಉ) ಮುಜರಾಯಿ ಇಲಾಖೆಯು ನಿಧಿಯಿಂದ ಹಿಂದುಯೇತರ ಸಂಸ್ಥೆಗಳಿಗೆ ನೀಡಿದ ಅನುದಾನ/ಧನ ಸಹಾಯ/ವೇತನದ ವಿವರಗಳನ್ನು ಆಯಾಯಾ ಜಿಲ್ಲೆಯ ಪ್ರಮುಖ ಹಿಂದೂ ದೇವಸ್ಥಾನಗಳಲ್ಲಿ ಫಲಕದ ಮೂಲಕ ಪ್ರಕಟಿಸಲು ಸರ್ಕಾರ ಯಾವ ಕ್ರಮಕೈಗೊಂಡಿದೆ ; ಈ ಮೊತ್ತವು ಹಿಂದೂ ಭಕ್ತರು ಹಿಂದೂ

ದೇವಳಗಳಿಗೆ ಕಾಣಿಕೆ / ಸೇವೆ / ಹರಕೆಯ ರೂಪದಲ್ಲಿ ನೀಡಿರುವುದರಿಂದ ಅವರು ಈ ರೀತಿಯಾಗಿ ನೀಡಿದ ಮೊತ್ತವನ್ನು ಯಾವ ರೀತಿಯಲ್ಲಿ ವೆಚ್ಚ ಮಾಡಲಾಗಿದೆ ; ಹಿಂದೂ ಭಕ್ತರ ಸಾಂವಿಧಾನಿಕ ಹಕ್ಕಾಗಿರುವ ಕುರಿತು ಸರ್ಕಾರದ ನಿಲುವೇನು ?

## ಶ್ರೀ ರಾಘವ ಚೈತನ್ಯ ಶಿವಲಿಂಗಕ್ಕೆ ಪೂಜೆ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೫೯ (೧೨೮೧) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿಯಲ್ಲಿರುವ ಶ್ರೀರಾಘವ ಚೈತನ್ಯ ಶಿವಲಿಂಗವು ವಕ್ಫ್ ಇಲಾಖೆಯ ಅಧೀನದಲ್ಲಿದೆಯೇ ಶೈವ ಸಂಪ್ರದಾಯದ ಪ್ರಕಾರ ಪ್ರತಿ ದಿನ ಪೂಜೆಗೊಳ್ಳಬೇಕಾದ ಶಿವಲಿಂಗಕ್ಕೆ ಮಾನ್ಯ ನ್ಯಾಯಾಲಯದ ಆದೇಶದ ಅನ್ವಯ ಪೂಜೆ ಸಲ್ಲಿಸಬೇಕಾಗಿರುವ ಕುರಿತು ಸರ್ಕಾರದ ನಿಲುವೇನು ; (ವಿವರ ನೀಡುವುದು)

(ಆ) ದೇಶವು ಸಂವಿಧಾನದ ಆಶಯದಂತೆ ದೇಶದ ಪ್ರತಿಯೋರ್ವ ಪ್ರಜೆಗೂ ಅವನಿಷ್ಟದಂತೆ ಅವನ ಧರ್ಮಾಚರಣೆಗಳನ್ನು ಆಚರಿಸಲು ಹಕ್ಕು ಇದ್ದು ಈ ಕುರಿತು ಸರ್ಕಾರದ ನಿಲುವೇನು ;

(ಇ) ಶ್ರೀರಾಘವ ಚೈತನ್ಯ ಶಿವಲಿಂಗಕ್ಕೆ ಪ್ರತಿ ದಿನ ಪೂಜಾ ಕೈಂಕರ್ಯಗಳನ್ನು ಕೈಗೊಳ್ಳುವಂತೆ ಮಾಡಲು ವಕ್ಫ್ ಇಲಾಖೆಯು ಕೈಗೊಂಡ ಕ್ರಮಗಳೇನು ?

## ಕಾವೇರಿ ೨ ಸಾಫ್ಟ್‌ವೇರ್ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೬೦ (೧೨೮೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉಪ ನೋಂದಣಿ ಕಛೇರಿಯಲ್ಲಿ ಬಳಸುವ ಕಾವೇರಿ ೨ ಸಾಫ್ಟ್‌ವೇರ್ ತಾಂತ್ರಿಕ ದುರಸ್ಥಿಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ಕಾವೇರಿ ತಂತ್ರಾಂಶವನ್ನು ಯಾರು ನಿರ್ವಹಣೆ ಮಾಡುತ್ತಿದ್ದಾರೆ ; ಈ ನಿರ್ವಹಣೆಗೆ ಸರ್ಕಾರ ಪಾವತಿಸುತ್ತಿರುವ ಮೊತ್ತವೆಷ್ಟು ; (ವಿವರ ನೀಡುವುದು)

(ಆ) ಬೆಂಗಳೂರು ನಗರದಲ್ಲಿ ಇ–ಖಾತೆ ಕಡ್ಡಾಯದಿಂದಾಗಿ ವಸತಿಯೋಗ್ಯ ಬಹು ಮಹಡಿ ಕಟ್ಟಡಗಳ ಫ್ಲಾಟ್‌ಗಳು ಮಾರಾಟ ಮತ್ತು ನೋಂದಣಿಗೆ ಅಡಚಣೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಕಾವೇರಿ ತಂತ್ರಾಂಶವನ್ನು ಸೂಕ್ತ ರೀತಿಯಲ್ಲಿ ಉನ್ನತೀಕರಿಸದ ಕಾರಣ ಸಾರ್ವಜನಿಕರು ಅನುಭವಿಸುತ್ತಿರುವ ಸಮಸ್ಯೆಗೆ ಯಾರನ್ನು ಹೊಣೆಗಾರರನ್ನಾಗಿ ಮಾಡಲಾಗಿದೆ ; (ವಿವರ ನೀಡುವುದು)

(ಇ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಕಳೆದ ಎರಡು ವರ್ಷಗಳಲ್ಲಿ ನೋಂದಣಿ ಕಛೇರಿಯಲ್ಲಿ ಎಷ್ಟು ಫ್ಲಾಟ್‌ಗಳ ಮಾರಾಟ ನೋಂದಣಿಯಾಗಿದೆ ; ಇದರಿಂದ ಸರ್ಕಾರಕ್ಕೆ ಬಂದ ಆದಾಯವೆಷ್ಟು ? (ವರ್ಷವಾರು ವಿವರ ನೀಡುವುದು)

## ರಸ್ತೆ ಹೊಂಡಗಳ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೬೧ (೧೨೮೩) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯವು ಹೊಂದಿರುವ ರಸ್ತೆಗಳ ಒಟ್ಟು ವಿಸ್ತೀರ್ಣವೆಷ್ಟು, ಅದರಲ್ಲಿ ರಾಷ್ಟ್ರೀಯ ಹೆದ್ದಾರಿ, ರಾಜ್ಯ ಹೆದ್ದಾರಿ ಹಾಗೂ ಜಿಲ್ಲಾ ಮಟ್ಟದ ಹೆದ್ದಾರಿಗಳು ಎಷ್ಟು ಕಿ.ಮೀ ಇವೆ ; (ಜಿಲ್ಲಾವಾರು ವಿವರ ನೀಡುವುದು)

(ಆ) ರಾಜ್ಯದ ಎಲ್ಲಾ ರಸ್ತೆಗಳು ಹೊಂಡಗಳಿಂದ ಕೂಡಿದ್ದು, ಗ್ರಾಮೀಣ ಭಾಗದಲ್ಲಿನ ರಸ್ತೆಗಳು ಸಂಪೂರ್ಣವಾಗಿ ಹಾಳಾಗಿರುವುದರಿಂದ ಇದನ್ನು ಸರಿಪಡಿಸಲು ತೆಗೆದುಕೊಂಡ ಕ್ರಮವೇನು ;

(ಇ) ಕಳೆದ ೭ ವರ್ಷದಲ್ಲಿ ರಸ್ತೆಯ ಹೊಂಡಗಳನ್ನು ಮುಚ್ಚಲು ಎಷ್ಟು ಮೊತ್ತವನ್ನು ವೆಚ್ಚ ಮಾಡಲಾಗಿದೆ ? (ರಸ್ತೆ ಹೊಂಡಗಳನ್ನು ಮುಚ್ಚಲು ಗುತ್ತಿಗೆ ಪಡೆದಿರುವ ಗುತ್ತಿಗೆದಾರರ ಹೆಸರಿನೊಂದಿಗೆ ಜಿಲ್ಲಾವಾರು ವಿವರ ನೀಡುವುದು)

## ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ ಸೆಕ್ಷನ್ ೯೫ರ ತಿದ್ದುಪಡಿ ಬಗ್ಗೆ

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೧೬೨ (೧೩೩೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ ಸೆಕ್ಷನ್ ೯೫ರ ತಿದ್ದುಪಡಿ ಅಧಿಸೂಚನೆ ದಿನಾಂಕ:೨೭–೦೧–೨೦೨೩ ರಂದು ಹೊರಡಿಸಿದ್ದರೂ ಇಲ್ಲಿಯವರೆಗೆ ಈ ಅಧಿಸೂಚನೆಯನ್ನು ಜಾರಿ ಮಾಡದಿರಲು ಕಾರಣಗಳೇನು ;

(ಆ) ಈ ಅಧಿಸೂಚನೆ ಹೊರಡಿಸಿದ್ದರೂ ಇದುವರೆವಿಗೂ ಜಾರಿ ಮಾಡದಿರುವುದರಿಂದ ನಗರ ಪ್ರದೇಶಗಳಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಕರ್ನಾಟಕ ಭೂ ಕಂದಾಯ ಕಾಯ್ದೆ ೧೯೬೪ ಸೆಕ್ಷನ್ ೯೫ರ ತಿದ್ದುಪಡಿ ಅಧಿಸೂಚನೆ ದಿನಾಂಕ: ೨೭–೦೧–೨೦೨೩ನ್ನು ಸಾರ್ವಜನಿಕರ ಅನುಕೂಲಕ್ಕಾಗಿ ಯಾವಾಗ ಜಾರಿ ಮಾಡಲಾಗುವುದು ?

# ಕರ್ನಾಟಕ ಗೃಹ ನಿರ್ಮಾಣ ಸಹಕಾರ ಸಂಘ ಪೀಣ್ಯ, ಬೆಂಗಳೂರು ಇದರ ಭೂಸ್ವಾಧೀನ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ಪ್ರಸ್ತಾಪಿಸುವ ಕುರಿತು

**ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರ) :–**

೧೧೬೩ (೧೩೧೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಗೃಹ ನಿರ್ಮಾಣ ಸಹಕಾರ ಸಂಘ, ಪೀಣ್ಯ ಈ ಸಂಘಕ್ಕೆ ಬೆಂಗಳೂರು ಉತ್ತರ ತಾಲ್ಲೂಕು, ಯಶವಂತಪುರ ಹೋಬಳಿ, ನೆಲಗದರನಹಳ್ಳಿ ಗ್ರಾಮದಲ್ಲಿ ೧೯೮೮–೧೯೮೯ರಲ್ಲಿ ವಿಶೇಷ ಭೂಸ್ವಾಧೀನಾಧಿಕಾರಿ, ಬೆಂಗಳೂರು ಇವರಿಗೆ ಭೂಸ್ವಾಧೀನ ಕಾಯ್ದೆ ೧೮೯೪ರ ಕಲಂ ೪(೧) ಮತ್ತು ೬(೧)ರ ಮೂಲಕ ಭೂಸ್ವಾಧೀನಪಡಿಸಿಕೊಂಡಿರುವ ಒಟ್ಟು ಜಮೀನಿನ ವಿಸ್ತೀರ್ಣವೆಷ್ಟು; (ಸಂಪೂರ್ಣ ವಿವರ ನೀಡುವುದು)

(ಆ) ಈ ಭೂಸ್ವಾಧೀನಕ್ಕೆ ಜಮೀನಿನ ಭೂಮಾಲೀಕರಿಗೆ ನೀಡಿರುವ ನೋಟೀಸ್‌ಗಳ ಪ್ರತಿ, ಜಮೀನಿನ ಜೆ.ಎಂ.ಸಿ . ನಕ್ಷೆ, ಭೂಸ್ವಾಧೀನಪಡಿಸಿಕೊಂಡಿರುವ ಜಮೀನಿನ ವಿಸ್ತೀರ್ಣದ ನಕ್ಷೆಗಳು, Consent Award ಪ್ರತಿ, Final Award ಪ್ರತಿ, Indemnity Bond, ಜಮೀನು ಭೂಸ್ವಾಧೀನಕ್ಕೆ ರಚಿಸಿರುವ Committee ಹಾಗೂ ಈ Committee ನೀಡಿರುವ ಶಿಫಾರಸ್ಸಿನ ಪ್ರತಿ ೪(೧) ಮತ್ತು ೬(೧)ರ ಅವಾರ್ಡ್ ಪ್ರತಿಯನ್ನು ಒದಗಿಸುವುದು ;

(ಇ) ಸದರಿ ಸಂಘಕ್ಕೆ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳುವ ಹಂತದಲ್ಲಿ ೪(೧)ರ ಆದೇಶಕ್ಕೆ ಭೂಮಾಲೀಕರು/ರೈತರಿಂದ ಸಲ್ಲಿಕೆಯಾಗಿರುವ ಆಕ್ಷೇಪಣೆಗಳಾವುವು ; (ಪ್ರತಿಗಳನ್ನು ನೀಡುವುದು)

(ಈ) ೪(೧)ರ ಆದೇಶಕ್ಕೆ ಸಲ್ಲಿಕೆಯಾದ ಆಕ್ಷೇಪಣೆಗಳನ್ನು ಪರಿಗಣಿಸಿ ೬(೧)ರ ಅಂತಿಮ ಆದೇಶದಲ್ಲಿ ಎಷ್ಟು ವಿಸ್ತೀರ್ಣದ ಜಮೀನುಗಳನ್ನು ಯಾವ ಕಾರಣಕ್ಕಾಗಿ ಭೂಸ್ವಾಧೀನ ಪ್ರಕ್ರಿಯೆಯಿಂದ ರದ್ದುಪಡಿಸಲಾಗಿದೆ ; (ಈ ಬಗ್ಗೆ ಸಂಪೂರ್ಣ ವಿವರ ನೀಡುವುದು)

(ಉ) ಈ ಭೂಸ್ವಾಧೀನ ಸಂಬಂಧ ಈವರೆಗೆ ಯಾವ ಸರ್ವೆ ನಂಬರ್‌ಗಳ ಭೂಮಾಲೀಕರಿಗೆ ಎಷ್ಟು ಮೊತ್ತದ ಪರಿಹಾರ ಹಣವನ್ನು ನೀಡಲಾಗಿದೆ ; ಹಾಗೂ ಎಷ್ಟು ಮೊತ್ತದ ಪರಿಹಾರ ಹಣವನ್ನು ಠೇವಣಿ ಇಡಲಾಗಿದೆ ; ಹಾಗೂ ಈ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಈವರೆಗೆ ಪರಿಹಾರ ಪಡೆದಿರುವ ಹಾಗೂ ಪರಿಹಾರ ನಿರಾಕರಿಸಿರುವ ಜಮೀನಿನ ಭೂವಾಲೀಕರ ವಿವರಗಳನ್ನು ನೀಡುವುದು ;

(ಊ) ಭೂಸ್ವಾಧೀನ ಪಡಿಸಿಕೊಂಡ ಜಮೀನುಗಳಿಗೆ ನಿಗದಿಪಡಿಸಿರುವ ಪರಿಹಾರ ಮೊತ್ತಕ್ಕೆ ಆಕ್ಷೇಪಣೆ ಸಲ್ಲಿಸಿ, ಹೆಚ್ಚಿನ ಪರಿಹಾರ ಮೊತ್ತ ನೀಡುವಂತೆ ಕೋರಿ ಹಲವು ರೈತರು/ಭೂಮಾಲೀಕರು ಸಕ್ಷಮ ಪ್ರಾಧಿಕಾರಕ್ಕೆ ಮನವಿ ಸಲ್ಲಿಸಿದ್ದು, ಈ ಮನವಿಯನ್ವಯ ಹೆಚ್ಚಿನ ಮೊತ್ತದ ಪರಿಹಾರ ನೀಡುವ ಬಗ್ಗೆ ಸಕ್ಷಮ ಪ್ರಾಧಿಕಾರವು ಕೈಗೊಂಡ ಕ್ರಮವೇನು ? (ವಿವರ ನೀಡುವುದು)

## ಬಂದರು ನಿರ್ಮಾಣದಿಂದ ಸಾಂಪ್ರದಾಯಿಕ ಮೀನುಗಾರರಿಗೆ ಆಗುವ ತೊಂದರೆಗಳ ಕುರಿತು

**ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ) :–**

೧೧೬೪ (೧೩೩೦) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಪಶ್ಚಿಮ ಕರಾವಳಿ ಎಷ್ಟು ಕಿಲೋಮೀಟರ್ ವ್ಯಾಪ್ತಿಯನ್ನು ಹೊಂದಿದೆ ಹಾಗೂ ಈ ವ್ಯಾಪ್ತಿಯಲ್ಲಿ ನಿರ್ಮಾಣವಾದ ಬಂದರುಗಳ ಸಂಖ್ಯೆ ಎಷ್ಟು ಹಾಗೂ ನಿರ್ಮಾಣಗೊಂಡಿರುವ ಸ್ಥಳಗಳು ಯಾವುವು ; (ಸಂಪೂರ್ಣ ಮಾಹಿತಿ ಬದಗಿಸುವುದು)

(ಆ) ಬಂದರು ಹಾಗೂ ಚಟ್ಟ ನಿರ್ಮಾಣವಲ್ಲದೆ ತಡೆಗೋಡೆ ನಿರ್ವಾಣದಿಂದ ಸಾಂಪ್ರದಾಯಿಕ ಮೀನುಗಾರಿಕೆಗೆ ತೊಂದರೆಯಾಗಿದೆಯೆಂಬ ದೂರುಗಳು ಬಂದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಸಾಂಪ್ರದಾಯಿಕ ಮೀನುಗಾರಿಕೆಗೆ ತೊಂದರೆಯಾದ ಬಗ್ಗೆ ಇಲಾಖೆ ಅಧ್ಯಯನ ನಡೆಸಿ ಅವರಿಗೆ ಸೂಕ್ತ ಪರಿಹಾರ ನೀಡುವ ಕ್ರಮ ಕೈಗೊಂಡಿದೆಯೇ ; (ಈ ಕುರಿತು ವಿವರವಾದ ಮಾಹಿತಿ ನೀಡುವುದು)

(ಈ) ಯಾಂತ್ರಿಕ ದೋಣಿ ನಡೆಸುವ ಮೀನುಗಾರರಿಗೆ ವರ್ಷದಲ್ಲಿ ಮಳೆಗಾಲದ ಸಂದರ್ಭದಲ್ಲಿ ಒಂದೂವರೆ ತಿಂಗಳು ಮೀನು ಹಿಡಿಯದಂತೆ (ಮೀನುಗಾರಿಕೆ ರಜೆ) ನಿರ್ಬಂದನೆ ಮಾಡಿ ಸರ್ಕಾರ ಆದೇಶ ಹೊರಡಿಸಿರುವುದು ನಿಜವೇ ;

(ಉ) ಮೀನುಗಾರಿಕೆಗೆ ನಿರ್ಬಂಧ ಹೇರಿರುವ ಹಿನ್ನಲೆಯಲ್ಲಿ ಅಂತವರಿಗೆ ಪರಿಹಾರ ಉಪಕ್ರಮಗಳನ್ನು ಸರ್ಕಾರ ಕೈಗೊಂಡಿದೆಯೇ ?

## ರಾಜ್ಯದಲ್ಲಿ ಟೋಲ್ ಕಂಪನಿಗಳು ಮುದ್ರಾಂಕ ಶುಲ್ಕ ಕಟ್ಟದಿರುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೬೫ (೧೩೭೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿಗಳ ಟೋಲ್ ಕಂಪನಿಗಳು ರಾಜ್ಯ ಸರ್ಕಾರಕ್ಕೆ ಮುದ್ರಾಂಕ ಶುಲ್ಕವನ್ನು ಪಾವತಿಸದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಇದ್ದಲ್ಲಿ, ಎಷ್ಟು ವರ್ಷಗಳಿಂದ ಈ ಮುದ್ರಾಂಕ ಶುಲ್ಕವನ್ನು ಪಾವತಿಸದೆ ಇದರ ವಸೂಲಾತಿಗೆ ಇದುವರೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ದಾಖಲೆಗಳೊಂದಿಗೆ ಮಾಹಿತಿ ಒದಗಿಸುವುದು)

(ಆ) ಕೋಟ್ಯಾಂತರ ರೂಪಾಯಿಗಳ ಮುದ್ರಾಂಕ ಕಟ್ಟದೆ ಇರುವ ಟೋಲ್ ಕಂಪನಿಗಳ ವಿರುದ್ಧ ಕಠಿಣ ಕ್ರಮಗಳನ್ನು ಕೈಗೊಳ್ಳದಿರಲು ಕಾರಣವೇನು ; ಯಾವ ಕಾಲಮಿತಿಯಲ್ಲಿ ಶುಲ್ಕ ವಸೂಲಾತಿ ಮಾಡಲಾಗುವುದು ; (ಮಾಹಿತಿ ಒದಗಿಸುವುದು)

(ಇ) ನಿಗದಿತ ಸಮಯದಲ್ಲಿ ಈ ಮುದ್ರಾಂಕ ಶುಲ್ಕವನ್ನು ಕಟ್ಟದಿರುವ ಟೋಲ್‌ಗಳನ್ನು ಮುಚ್ಚಲು ಸರ್ಕಾರದ ನಿರ್ಧಾರಗಳೇನು ? (ಮಾಹಿತಿ ಒದಗಿಸುವುದು)

## ಮನೆ ಹಾನಿಗಾಗಿ ನೀಡುವ ಪರಿಹಾರದ ಹಣ ದುರುಪಯೋಗವಾಗುತ್ತಿರುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೬೬ (೧೩೭೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮಾಂತರ ಭಾಗದಲ್ಲಿ ಮನೆ ಹಾನಿಗೆ ಪರಿಹಾರವನ್ನು ನೀಡಲು ಇರುವ ಮಾನದಂಡಗಳೇನು: ಮನೆ ಹಾನಿ ಪರಿಹಾರವನ್ನು ಎಷ್ಟು ಬಾರಿ ಪಡೆಯಲು ಅವಕಾಶವಿದೆ ; (ಆದೇಶದ ಪ್ರತಿಯೊಂದಿಗೆ ಮಾಹಿತಿ ನೀಡುವುದು)

(ಆ) ಚಿಕ್ಕಮಗಳೂರು ಜಿಲ್ಲೆಯ ಕಳಸ ತಾಲ್ಲೂಕಿನಲ್ಲಿ ಮನೆ ಹಾನಿಗೆ ಪರಿಹಾರದ ರೂಪವಾಗಿ ಚೆಕ್ ಬೌನ್ಸ್ ಆಗಿರುವುದು ನಿಜವೇ ; ಹಾಗಿದ್ದಲ್ಲಿ, ಯಾಕೆ ಈ ಚೆಕ್‌ನ್ನು ನೀಡಲಾಗಿತ್ತು ; ಇದರಲ್ಲಿ ಸರ್ಕಾರದ ಹಣವನ್ನು ದುರುಪಯೋಗ ಪಡಿಸಲು ಮುಂದಾದ ಅಧಿಕಾರಿಯ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ; (ಮಾಹಿತಿ ನೀಡುವುದು)

(ಇ) ಈ ಪ್ರಕರಣದರಲ್ಲಿ ತನಿಖೆ ನಡೆಸಿ ತಪ್ಪು ಮಾಡಿದ್ದಲ್ಲಿ ಕಠಿಣ ಕ್ರಮ ಕೈಗೊಳ್ಳಲು ಸರ್ಕಾರದ ನಿರ್ಧಾರಗಳೇನು; (ಮಾಹಿತಿ ನೀಡುವುದು)

(ಈ) ಮನೆ ಹಾನಿ ಪರಿಹಾರ ನೀಡಲು ಒಂದು ಬಾರಿ ಅವಕಾಶವಿದ್ದು, ಮತ್ತೆ ಮತ್ತೆ ಪರಿಹಾರ ನೀಡುತ್ತಿರುವ ಅಧಿಕಾರಿಗಳ ಮೇಲೆ ಸರ್ಕಾರದ ಕಠಿಣ ಕ್ರಮಗಳೇನು ? (ಮಾಹಿತಿ ನೀಡುವುದು)

## ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆ ಕುರಿತು

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೬೭ (೧೩೭೯) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಪ್ರಧಾನ ಮಂತ್ರಿ ಮತ್ಸ್ಯಸಂಪದ ಯೋಜನೆಯು ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೂ ರಾಜ್ಯಕ್ಕೆ ಮಂಜೂರಾದ ಯೋಜನೆಗಳಾವುವು ; ಎಷ್ಟು ಮೊತ್ತದ ಯೋಜನೆಗಳು ಮಂಜೂರಾಗಿವೆ ; (ವಿವರ ನೀಡುವುದು)

(ಆ) ಈ ಯೋಜನೆಗಳನ್ನು ಯಾವ ಜಿಲ್ಲೆಗಳಿಗೆ ನಿಗದಿಪಡಿಸಲಾಗಿದೆ ; ಜಿಲ್ಲೆಗಳಲ್ಲಿ ಸಾಧಿಸಿರುವ ಆರ್ಥಿಕ ಭೌತಿಕ ಪ್ರಗತಿ ಆಯ್ಕೆಯಾದ ಅರ್ಜಿದಾರರುಗಳ ಗುರಿಗಳನ್ನು ನಿಗದಿಪಡಿಸದೆ ಇದ್ದಲ್ಲಿ, ಕಾರಣಗಳೇನು ಹಾಗೂ ಯಾವುವು ; (ವಿವರ ನೀಡುವುದು)

(ಇ) ಇಲ್ಲಿಯವರೆವಿಗೂ ಅನುಷ್ಠಾನ ಆಗದಿರುವ ಯೋಜನೆಗಳು ಯಾವುವು ; ಆಗದಿರಲು ಕಾರಣಗಳೇನು ; ಅನುಷ್ಠಾನ ಮಾಡಲು ಯಾವ ಕ್ರಮ ತೆಗೆದುಕೊಳ್ಳಲಾಗಿದೆ ;

(ಈ) ಅರ್ಜಿದಾರರುಗಳನ್ನು ಆಯ್ಕೆ ಮಾಡಲು ಯಾವ ಮಾನದಂಡಗಳನ್ನು ಪಾಲಿಸಲಾಗುತ್ತಿದೆ ; ಎಲ್ಲಾ ಫಲಾನುಭವಿಗಳಿಗೆ ಸಹಾಯಧನ ನೀಡಲಾಗಿದೆಯೇ ; ಬಾಕಿ ಇದ್ದಲ್ಲಿ ಪಾವತಿಸದಿರಲು ಕಾರಣಗಳೇನು ?

## ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಭೂಮಿಗಳ ಒತ್ತುವರಿ ತೆರೆವುಗೊಳಿಸುವ ಬಗ್ಗೆ

**ಶ್ರೀ ಸೂರಜ್ ರೇವಣ್ಣ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೬೮ (೧೩೨೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಹಾಸನ ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ೫ ವರ್ಷಗಳಲ್ಲಿ ಕಂದಾಯ ಇಲಾಖೆಯಡಿಯಲ್ಲಿ ಬರುವ ಸರ್ಕಾರಿ ಭೂಮಿಗಳಾದ ಜಾತ್ರೆ ನಡೆಯುವ ಸ್ಥಳ, ಗ್ರಾಮಕ್ಕೆ ಸೇರಿದ ಸ್ಥಳ. ಗೋಮಾಳಗಳು, ಕೆರೆಗಳು ಹೊಂದಿರುವ ವಿಸ್ತೀರ್ಣ ಹಾಗೂ ಇತರೆ ಸರ್ಕಾರಿ ಭೂಮಿಗಳ ಒಟ್ಟು ವಿಸ್ತೀರ್ಣ ಎಷ್ಟು ; (ತಾಲ್ಲೂಕುವಾರು. ವಿಭಾಗವಾರು ಸಂಪೂರ್ಣ ವಿವರ ನೀಡುವುದು)

(ಆ) ಹಾಗಿದ್ದಲ್ಲಿ, ಕಳೆದ ೫ ವರ್ಷಗಳಲ್ಲಿ ಮೇಲ್ಕಂಡ ಈ ಎಲ್ಲಾ ಸರ್ಕಾರಿ ಭೂ ಪ್ರದೇಶಗಳಲ್ಲಿ ಸಾರ್ವಜನಿಕರಿಂದ/ಪ್ರಭಾವಿ ಮುಖಂಡರುಗಳಿಂದ ಒತ್ತುವರಿ ಮಾಡಿಕೊಂಡಿರುವ ಭೂ ಪ್ರದೇಶದ ವಿಸ್ತೀರ್ಣ ಎಷ್ಟು ; ಈ ಬಗ್ಗೆ ಘನ ನ್ಯಾಯಾಲಯದಲ್ಲಿ ಲೋಕಾಯುಕ್ತ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಸಾರ್ವಜನಿಕರಿಂದ ಒತ್ತುವರಿ ತೆರವುಗೊಳಿಸಲು ಮನವಿ ಸ್ವೀಕರಿಸಲಾಗಿದೆಯೇ ; (ತಾಲ್ಲೂಕುವಾರು, ಪ್ರಕರಣವಾರು ಮನವಿಗಳು ಸ್ವೀಕರಿಸಿದ ಸಂಪೂರ್ಣ ವಿವರ ನೀಡುವುದು)

(ಇ) ಹಾಸನ ಜಿಲ್ಲಾ ಮಾನ್ಯ ಜಿಲ್ಲಾಧಿಕಾರಿಗಳು, ಜಿಲ್ಲೆಯ ತಾಲ್ಲೂಕು ತಹಶೀಲ್ದಾರರು. ಸರ್ಕಾರಿ ಭೂಮಿಯ ಒತ್ತುವರಿ ತೆರವುಗೊಳಿಸುವಲ್ಲಿ ಕ್ರಮ ಜರುಗಿಸಲು ವಿಫಲರಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಅನಧೀಕೃತ ಒತ್ತುವರಿದಾರರಿಗೆ ಇಲಾಖೆಯಿಂದಲೇ ಪ್ರೋತ್ಸಾಹಿಸಿ ಶಾಮೀಲಾಗಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಸರ್ಕಾರಿ ಭೂಮಿಯನ್ನು ಒತ್ತುವರಿ ತೆರವುಗೊಳಿಸಲು ಕೈಗೊಂಡ ಕ್ರಮವೇನು ; (ಸಂಪೂರ್ಣ ವಿವರ ನೀಡುವುದು)

(ಈ) ಚನ್ನರಾಯಪಟ್ಟಣ ತಾಲ್ಲೂಕು, ದಂಡಿಗನಹಳ್ಳಿ ಹೋಬಳಿ, ಪಡುವನಹಳ್ಳಿ ಗ್ರಾಮದ ಸರ್ವೆ ನಂಬರ್ ೬೭ ರಲ್ಲಿ ೬ ಎಕರೆ ೦೯ ಗುಂಟೆ ಕೆರೆ ಭೂಮಿ ಹಾಗೂ ಸರ್ವೆ ನಂಬರ್ ೬೯ರಲ್ಲಿ ಹುಳಿಕಟ್ಟೆ ೨೬ ಎಕರೆ ಜಮೀನು ಒತ್ತುವರಿ ತೆರವುಗೊಳಿಸಲು ಕೈಗೊಂಡಿರುವ ಕ್ರಮವೇನು; ಈ ಬಗ್ಗೆ ಗ್ರಾಮಸ್ಥರಿಂದ ಮನವಿ ಸ್ವೀಕರಿಸಲಾಗಿದೆಯೇ ? (ಸಂಪೂರ್ಣ ವಿವರ ನೀಡುವುದು)

## ಕಂದಾಯ ಇಲಾಖೆಯಲ್ಲಿನ ನೌಕರರ ಮುಂಬಡ್ತಿಯ ಕುರಿತು

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೬೯ (೧೨೬೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯ ನೋಂದಣಿ ಮತ್ತು ಮುದ್ರಾಂಕ ವಿಭಾಗದಲ್ಲಿನ ಸಾಮಾನ್ಯ ಜ್ಯೇಷ್ಠತಾ ಪಟ್ಟಿಯಲ್ಲಿ ದ್ವಿತೀಯ ದರ್ಜೆ ಸಹಾಯಕ ಮತ್ತು ಪ್ರಥಮ ದರ್ಜೆ ಸಹಾಯಕ ಉಪ ನೋಂದಣಾಧಿಕಾರಿ ಹಾಗೂ ಹಿರಿಯ ಉಪ ನೋಂದಣಾಧಿಕಾರಿಗಳು ಪದೋನ್ನತಿಗೆ ಅರ್ಹರಿದ್ದರೂ ಕೂಡ ಹೈದ್ರಾಬಾದ್ ಕರ್ನಾಟಕ ಮೀಸಲಾತಿಯನ್ನು ಆಯ್ಕೆ ಮಾಡಿರುವ ಕಾರಣ ಇವರಿಗೆ ಹೈದ್ರಾಬಾದ್ ಕರ್ನಾಟಕ ಮೀಸಲಾತಿ ಹುದ್ದೆಗಳು ಖಾಲಿ ಇರದೇ ಇರುವ ಕಾರಣ ಇವರುಗಳು ಪದೋನ್ನತಿಯಿಂದ ವಂಚಿತರಾಗುತ್ತಿರುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಬೇರೆ ಎಲ್ಲಾ ಇಲಾಖೆಗಳಲ್ಲಿ, ಅರಣ್ಯ, ಪ್ರಾದೇಶಿಕ ಸಾರಿಗೆ, ಪೌರಾಡಳಿತ ಇಲಾಖೆ ಹಾಗೂ ಖಜಾನೆ ಇಲಾಖೆಗಳಲ್ಲಿ ಒಂದೇ ಹೈದ್ರಾಬಾದ್ ಕರ್ನಾಟಕ ಮೀಸಲಾತಿ ಜ್ಯೇಷ್ಠತಾ ಪಟ್ಟಿ ಇದ್ದು, ನೋಂದಣಿ ಮತ್ತು ಮುದ್ರಾಂಕ ಇಲಾಖೆ ರಾಜ್ಯ ವ್ಯಾಪ್ತಿ ಇಲಾಖೆಯಾಗಿದ್ದರೂ ಪ್ರಾದೇಶಿಕ ಸ್ಥಳೀಯ ವೃಂದ ಮತ್ತು ರಾಜ್ಯ ಮಟ್ಟದ ಸ್ಥಳೀಯ ವೃಂದ ಎಂದು ಎರಡು ಜ್ಯೇಷ್ಠತಾ ಪಟ್ಟಿಯನ್ನು ಮಾಡಿರುವ ಔಚಿತ್ಯವೇನು ;

(ಇ) ಈ ಹಿನ್ನಲೆಯಲ್ಲಿ ಈ ಭಾಗದ ನೌಕರರು ಪದೋನ್ನತಿಯಿಂದ ವಂಚಿತರಾಗಿದ್ದು, ಈ ಬಗ್ಗೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯಿಂದ ಪತ್ರ ಸಂಖ್ಯೆ:ಸಿಆಸುಇ/೭/ಹೈಕಉ/೨೦೨೧, ದಿನಾಂಕ: ೨೬.೦೩.೨೦೨೧ರ ಪ್ರಕಾರ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಜ್ಯೇಷ್ಠತಾ ಪಟ್ಟಿಯಲ್ಲಿನ ನ್ಯೂನತೆಯನ್ನು ಸರಿಪಡಿಸುವಂತೆ ನಿರ್ದೇಶನ ನೀಡಿದ್ದರೂ ಸಹ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಇಲ್ಲಿಯವರೆಗೂ ಯಾವುದೇ ಕ್ರಮವನ್ನು ಕೈಗೊಳ್ಳದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಹಾಗಿದ್ದಲ್ಲಿ, ಈ ಕುರಿತು ಸರ್ಕಾರ ತೆಗೆದುಕೊಂಡ ಕ್ರಮಗಳೇನು ? (ಮಾಹಿತಿಯನ್ನು ಒದಗಿಸುವುದು)

## ಲಿಂಗಸಗೂರು ತಾಲ್ಲೂಕಿನ ತಹಶೀಲ್ದಾರ್ ಕಛೇರಿಯಲ್ಲಿ ನಡೆದ ಹಣ ದುರುಪಯೋಗದ ಕುರಿತು

**ಶ್ರೀ ಶರಣಗೌಡ ಬಯ್ಯಾಪುರ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೭೦ (೧೩೩೩) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ತಹಶೀಲ್ದಾರ್ ಕಛೇರಿಯಲ್ಲಿ ನಡೆದ ೧ ಕೋಟಿ ೮೭ ಲಕ್ಷ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ೧ ಕೋಟಿ ೮೭ ಲಕ್ಷ ಹಣದ ದುರುಪಯೋಗದ ಬಗ್ಗೆ ಸರ್ಕಾರ ಯಾವಯಾವ ಕ್ರಮ ಕೈಗೊಂಡಿದೆ ; (ಸಂಪೂರ್ಣ ಮಾಹಿತಿ ಒದಗಿಸುವುದು)

(ಇ) ಲಿಂಗಸಗೂರು ತಾಲ್ಲೂಕು ತಹಶೀಲ್ದಾರ್ ಕಛೇರಿಗೆ ಪ್ರಕೃತಿ ವಿಕೋಪದಡಿ ತಾಲ್ಲೂಕಿಗೆ ಒಟ್ಟು ಅನುದಾನ ಎಷ್ಟು ;

(ಈ) ಆ ಪೈಕಿ ಖರ್ಚಾದ ಹಾಗೂ ಉಳಿಕೆಯಾಗಿರುವ ಮೊತ್ತ ಎಷ್ಟು ? (ಸಂಪೂರ್ಣ ಮಾಹಿತಿ ಒದಗಿಸುವುದು)

# ರಾಜ್ಯದ ಮಹಾನಗರಪಾಲಿಕೆ ಹಾಗೂ ಸ್ಥಳೀಯ ಸಂಸ್ಥೆಗಳಲ್ಲಿರುವ ನಿವೇಶನಗಳಿಗೆ ಇ–ಖಾತಾ ಕುರಿತಂತೆ ಸಮಸ್ಯೆ ಎದುರಿಸುತ್ತಿರುವ ಕುರಿತು

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೧೧೭೧ (೧೨೮೫) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮಹಾನಗರಪಾಲಿಕೆ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯ ಯಾವ ಯಾವ ಆಸ್ತಿಗಳು ಆಸ್ತಿ ತೆರಿಗೆ ವ್ಯಾಪ್ತಿಗೆ ಒಳಪಡುತ್ತವೆ ಮತ್ತು ಯಾವ ಆಸ್ತಿಗಳು ಒಳಪಡುವುದಿಲ್ಲ; ಇ–ಖಾತಾ ಪ್ರಕ್ರಿಯೆಯಿಂದ ಆಸ್ತಿದಾರರಿಗೆ ಆಗುವ ಉಪಯೋಗಗಳು ಯಾವುವು ; ಇ–ಖಾತಾದಲ್ಲಿರುವ ವಿವಿಧ ನಮೂನೆಯ ಖಾತೆಗಳು ಯಾವುವು ;

(ಆ) ಎ–ಖಾತಾ ಹಾಗೂ ಬಿ–ಖಾತಾಗಳಿಗಿರುವ ವ್ಯತ್ಯಾಸಗಳು ಯಾವುವು; ಎ–ಖಾತಾ ಹಾಗೂ ಬಿ–ಖಾತಾಗಳಿಗಿರುವ ಅನುಕೂಲ ಮತ್ತು ಅನಾನುಕೂಲಗಳು ಯಾವುವು ; (ವಿಸ್ತ್ರತ ವಿವರಣೆ ನೀಡುವುದು)

(ಇ) ಕಳೆದ ೨೦–೨೫ ವರ್ಷಗಳ ಹಿಂದೆ ವಿವಿಧ ಬಡಾವಣೆಗಳಲ್ಲಿ ಉಪ ನೋಂದಣಾಧಿಕಾರಿ ಕಛೇರಿಯಲ್ಲಿ ದಾಖಲಿಸುವ ಮೂಲಕ ಖರೀದಿ ಮಾಡಿದ ನಿವೇಶನದಾರರು ಈಗ ಸರ್ಕಾರವು ಅನಧೀಕೃತ ಬಡಾವಣೆ ಎಂದು ಹೇಳುತ್ತಿರುವುದರಿಂದ ಮತ್ತು ಅವುಗಳಿಗೆ ಕೇವಲ ಬಿ–ಖಾತೆ ನೀಡಲು ಆದೇಶಿಸಿರುವುದರಿಂದ ಅದಕ್ಕಿರುವ ನ್ಯೂನತೆಗಳಿಂದ ತೊಂದರೆಗೊಳಗಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಈ ನ್ಯೂನತೆಗಳನ್ನು ಸರಿಪಡಿಸುವ ಬಗ್ಗೆ ಸರ್ಕಾರದ ನಿಲುವೇನು ? (ವಿವರಣೆ ನೀಡುವುದು)

## ರಾಜ್ಯದಲ್ಲಿರುವ ವಿವಿಧ ಸ್ಥರದ ಗುತ್ತಿಗೆದಾರರಿಗೆ ಬಿಡುಗಡೆಯಾಗಬೇಕಿರುವ ಬಾಕಿ ಮೊತ್ತದ ಬಗ್ಗೆ

**ಶ್ರೀ ಶಶೀಲ್ ಜಿ. ನಮೋಶಿ (ಶಿಕ್ಷಕರ ಕ್ಷೇತ್ರ) :–**

೧೧೭೨ (೧೨೮೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ವಿವಿಧ ಸ್ಥರದ ಗುತ್ತಿಗೆದಾರರು ಈಗಾಗಲೇ ಪೂರ್ಣಗೊಳಿಸಿರುವ ಕಾಮಗಾರಿಗಳಿಗೆ ಸರ್ಕಾರದಿಂದ ಹಣ ಬಿಡುಗಡೆಯಾಗದೆ ಆರ್ಥಿಕವಾಗಿ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಕೈಗೊಂಡ ಕ್ರಮಗಳೇನು ;

(ಆ) ಕಳೆದ ೨ ವರ್ಷಗಳಿಂದ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಇಲಾಖೆಯಿಂದ ಸರ್ಕಾರದ ವಿವಿಧ ಕಾಮಗಾರಿಗಳಿಗೆ ಅನುಮೋದನೆಗೊಂಡ ಅನುದಾನ ಎಷ್ಟು; ಇವುಗಳಲ್ಲಿ ಪೂರ್ಣಗೊಂಡ, ಬಾಕಿ ಉಳಿದ ಕಾಮಗಾರಿಗಳು ಎಷ್ಟು; ಈ ಕಾಮಗಾರಿಗಳಿಗೆ ಬಿಡುಗಡೆಯಾದ ಹಾಗೂ ಬಾಕಿ ಉಳಿದಿರುವ ಅನುದಾನವೆಷ್ಟು ;

(ಇ) ಯಾವ ಕಾಲಮಿತಿಯಲ್ಲಿ ಗುತ್ತಿಗೆದಾರರಿಗೆ ಬಿಡುಗಡೆಯಾಗಬೇಕಿರುವ ಬಾಕಿ ಅನುದಾನವನ್ನು ಬಿಡುಗಡೆ ಮಾಡಲಾಗುವುದು ?

## ರಾಜ್ಯದ ಪಶು ವೈದ್ಯರ ಮತ್ತು ಪಶು ಆಸ್ಪತ್ರೆಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :–**

೧೧೭೩ (೧೩೫೫) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಪಶು ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು; ಹಾಲಿ ಕರ್ತವ್ಯ ನಿರ್ವಹಿಸುತ್ತಿರುವ ಪಶು ವೈದ್ಯರುಗಳ ಮತ್ತು ಖಾಲಿ

ಇರುವ ಪಶು ವೈದ್ಯರ ಹುದ್ದೆ ಎಷ್ಟು; ಮತ್ತು ಖಾಲಿ ಹುದ್ದೆಗಳು ಇರಲು ಕಾರಣಗಳೇನು ;

(ಆ) ಪಶು ಪಾಲಕ ಸಮುದಾಯ ಹೆಚ್ಚಿರುವ ಬೆಳಗಾವಿ ಜಿಲ್ಲೆ, ಖಾನಾಪೂರ ತಾಲ್ಲೂಕಿನ ಗೋಧೂಳಿಯ ಪಶು ಚಿಕಿತ್ಸಾಲಯದಲ್ಲಿ ವೈದ್ಯರ ಮತ್ತು ಸಿಬ್ಬಂದಿಗಳ ಕೊರತೆ ಇದ್ದು. ದೂರದ ಹಲಸಿ ಪಶು ಚಿಕಿತ್ಸಾಲಯದ ಒಬ್ಬರು ಡೆಪ್ಯೂಟೆಷನ್ ಮೇಲೆ ಕೆಲಸ ಮಾಡುತ್ತಿರುವುದರಿಂದ ಸ್ಥಳೀಯ ಪಶು ಪಾಲಕರಿಗೆ ಅನೇಕ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ಮಾಹಿತಿ ನೀಡುವುದು)

(ಇ) ಸದರಿ ಚಿಕಿತ್ಸಾಲಯಕ್ಕೆ ಪ್ರಥಮಾದ್ಯತೆಯ ಮೇರೆಗೆ ಪಶುವೈದ್ಯರು ಮತ್ತು ಸಿಬ್ಬಂದಿ ನೇಮಿಸಲು ಸರ್ಕಾರದ ಮುಂದಿನ ಕ್ರಮಗಳೇನು ?

## ಉತ್ತರ ಕನ್ನಡ ಜಿಲ್ಲೆಯ ಗೌಳಿ ಜನಾಂಗದ ಕಂದಾಯ ಗ್ರಾಮಗಳ ಕುರಿತು

**ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮನಿರ್ದೇಶನ ಹೊಂದಿದವರು) :–**

೧೧೭೪ (೧೩೫೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಉತ್ತರ ಕನ್ನಡ ಜಿಲ್ಲೆಯಲ್ಲಿ ಪ್ರವರ್ಗ–೧ ರಲ್ಲಿ ಬರುವ ಗೌಳಿ ಜನಾಂಗದ ಎಷ್ಟು ಹಾಡಿಗಳಿವೆ ; ಸದರಿ ಹಾಡಿಗಳನ್ನು ಕಂದಾಯ ಗ್ರಾಮಗಳನ್ನಾಗಿ ಮಾಡಿ ಹಕ್ಕುಪತ್ರ ನೀಡುವ ಪ್ರಕ್ರಿಯೆ ಯಾವ ಹಂತದಲ್ಲಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಬಾಕಿ ಉಳಿದಿರುವ ಹಾಡಿಗಳನ್ನು ಕಂದಾಯ ಗ್ರಾಮಗಳಾಗಿ ಮಾಡುವುದಕ್ಕೆ ಸರ್ಕಾರದ ಮುಂದಿನ ಕ್ರಮಗಳಾವುವು ? (ಸಂಪೂರ್ಣವಾಗಿ ವಿವರ ನೀಡುವುದು)

## ಪಶುಸಂಗೋಪನೆ ಇಲಾಖೆಯಲ್ಲಿ ಹಿಂದುಳಿದ ವರ್ಗದವರಿಗೆ ನೀಡಿರುವ ಸೌಲಭ್ಯಗಳ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೧೧೭೫ (೧೩೭೭) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೫ ವರ್ಷಗಳಲ್ಲಿ ಪಶುಸಂಗೋಪನೆ ಇಲಾಖೆಯಲ್ಲಿ ರಾಜ್ಯದ ಅತೀ ಹಿಂದುಳಿದ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದವರಿಗಾಗಿ ರೂಪಿಸಿರುವ ಯೋಜನೆಗಳು ಯಾವುವು ;

(ಆ) ಅತೀ ಹಿಂದುಳಿದ ಅಲೆಮಾರಿ ಮತ್ತು ಅರೆ ಅಲೆಮಾರಿ ಜನಾಂಗದ ಕುಟುಂಬಗಳಿಗೆ ಹೈನುಗಾರಿಕೆ ಯೋಜನೆಯನ್ನು ಅನುಷ್ಠಾನ ಮಾಡಲಾಗಿದೆಯೇ: ಮಾಡದಿದ್ದಲ್ಲಿ ಕಾರಣಗಳೇನು ;

(ಇ) ಹೈನುಗಾರಿಕೆ ಯೋಜನೆಯುನ್ನು ಅನುಷ್ಠಾನಗೊಳಿಸಲು ನಿಗದಿಪಡಿಸಿರುವ ಘಟಕ ವೆಚ್ಚ ಎಷ್ಟು: ಇದರಲ್ಲಿ ಸಹಾಯಧನ ಮತ್ತು ಸಾಲದ ಹಣ ಎಷ್ಟು ?

## ರಾಜ್ಯದಲ್ಲಿರುವ ಕಂದಾಯ ಗ್ರಾಮಗಳ ಬಗ್ಗೆ

**ಶ್ರೀ ಡಿ.ಟಿ. ಶ್ರೀನಿವಾಸ್ (ಡಿ.ಟಿ.ಎಸ್) (ಶಿಕ್ಷಕರ ಕ್ಷೇತ್ರ) :–**

೧೧೭೬ (೧೩೭೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿರುವ ಒಟ್ಟು ಕಂದಾಯ ಗ್ರಾಮಗಳು ಎಷ್ಟು: ಕಂದಾಯ ರಹಿತ ಗ್ರಾಮಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಯ ವ್ಯಾಪ್ತಿಯಲ್ಲಿ ಬರುವ ಕಂದಾಯವಿಲ್ಲದ ಗ್ರಾಮಗಳ ಸಂಖ್ಯೆ ಎಷ್ಟು; ಈ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಇದುವರೆವಿಗೂ ಎಷ್ಟು ಕಂದಾಯ ರಹಿತ ಗ್ರಾಮಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸಲಾಗಿದೆ: ಅವು ಯಾವುವು ? (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು)

## ರಬಕವಿ–ಮಹಿಷವಾಡಗ ಸೇತುವೆ ಮಂಜೂರಾಗಿರುವ ಕುರಿತು

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು) :–**

೧೧೭೭ (೧೩೧೬) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತೇರದಾಳ ವಿಧಾನಸಭೆಯ ವ್ಯಾಪ್ತಿಯಲ್ಲಿ ಬರುವ ಕೃಷ್ಣ ನದಿಯ ಮೇಲೆ ರಬಕವಿ–ಮಹಿಷವಾಡಗ ಸೇತುವೆ ಮಂಜೂರಾಗಿದೆಯೇ ; ಹಾಗೂ ಯಾವಾಗ ಮಂಜೂರಾಯಿತು ;

(ಆ) ಪ್ರಾರಂಭದಲ್ಲಿ ಈ ಸೇತುವೆ ನಿರ್ಮಾಣಕ್ಕೆ ಕಾಯ್ದಿರಿಸಿದ ಅನುದಾನವೆಷ್ಟು ; ಮಂಜೂರಾದ ಸಂದರ್ಭದಲ್ಲಿ ಮೂಲ ನಕ್ಷೆಯಂತೆ ಕಾಮಗಾರಿ ನಡೆಯುತ್ತಿದೆಯೇ ; ಅಥವಾ ನಕ್ಷೆ ಬದಲಾಗಿದೆಯೇ ; ಬದಲಾದ ನಕ್ಷೆಯ ಪ್ರಕಾರ ಅನುದಾನ ಮೊತ್ತ ಹೆಚ್ಚಳವಾಗಿದೆಯೇ ;

(ಇ) ಈ ಸೇತುವೆಯ ಟೆಂಡರ್ ಪ್ರಕ್ರಿಯೆ ಮುಗಿದು ಕಾಮಗಾರಿ ಕಾರ್ಯಾರಂಭವಾಗಿದೆಯೇ ; ಹಾಗಿದ್ದಲಿ, ಯಾವಾಗ ಆರಂಭವಾಯಿತು ; ಹಾಗೂ ಸದರಿ ಕಾಮಗಾರಿ ಪೂರ್ಣಗೊಳಿಸಲು ಟೆಂಡರ್‌ದಾರರಿಗೆ ನೀಡಿದ್ದ ಕಾಲಾವಧಿ ಎಷ್ಟು ?

## ಮಹಿಳಾ ಸಂಘಗಳಿಗೆ ಸಾಲ ಸೌಲಭ್ಯ ನೀಡುವ ಕುರಿತು

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)** :–

೧೧೭೮ (೧೩೧೮) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೀನುಗಾರಿಕೆ ಮಾಡುವ ಮಹಿಳೆಯರ ಸಹಕಾರ ಸಂಘಗಳು ಎಷ್ಟಿವೆ: ಈ ಸಂಘಗಳಿಗೆ ಸಾಲ ಸೌಲಭ್ಯಗಳನ್ನು ನೀಡಗುತ್ತಿದೆಯೇ;

(ಆ) ಮೀನುಗಾರಿಕೆ ಮಹಿಳೆಯರಿಗೆ ಸ್ವಯಂ ಉದ್ಯೋಗ ಮಾಡಲು ನೀಡುವ ಯೋಜನೆಗಳು ಯಾವುವು ;

(ಇ) ಮೀನುಗಾರಿಕೆಯಲ್ಲಿ ಮಹಿಳೆಯರು ಯಾವ ವಿಧವಾದ ಕೆಲಸಗಳಲ್ಲಿ ತೊಡಗಿಸಿಕೊಂಡಿದ್ದಾರೆ ;

(ಈ) ಸಮುದ್ರದಲ್ಲಿ ಮೀನು ಹಿಡಿಯುವ ಕಾರ್ಯಗಳಲ್ಲಿ ಮಹಿಳೆಯರ ಭಾಗವಹಿಸುವಿಕೆ ಶೇಕಡ ಎಷ್ಟು ಪ್ರಮಾಣವಿದೆ ;

(ಉ) ಮೀನುಗಾರಿಕೆಯಲ್ಲಿ ಮಹಿಳೆಯರು ಸ್ವಯಂ ಬೋಟ್ ಹೊಂದಿದ್ದಾರೆಯೇ: ಹೊಂದಿದ್ದಲ್ಲಿ, ಸ್ವಯಂ ಬೋಟ್ ಹೊಂದಿರುವ ಮಹಿಳೆಯರ ಸಂಖ್ಯೆ ಎಷ್ಟು ? (ಮಾಹಿತಿ ನೀಡುವುದು)

## ನೂತನ ತಾಲ್ಲೂಕಿಗೆ ಮೂಲಭೂತ ಸೌಲಭ್ಯ ಒದಗಿಸುವ ಬಗ್ಗೆ

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)** :–

೧೧೭೯ (೧೩೬೯) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬಾಗಲಕೋಟೆ ಜಿಲ್ಲೆಯಲ್ಲಿ ಈ ಹಿಂದೆ ಘೋಷಣೆಯಾಗಿದ್ದ ನೂತನ ತಾಲ್ಲೂಕುಗಳ ಸಂಖ್ಯೆ ಎಷ್ಟು ; ಅವು ಯಾವುವು ;

(ಆ) ಜಿಲ್ಲೆಯ ನೂತನ ತಾಲ್ಲೂಕುಗಳಲ್ಲಿ ರಬಕವಿ–ಬನಹಟ್ಟಿ ತಾಲ್ಲೂಕು ಹಾಗೂ ತೇರದಾಳ ತಾಲ್ಲೂಕು ಕೂಡಿದೆಯೇ ; ಹಾಗಿದ್ದಲ್ಲಿ,

ನೂತನ ತಾಲ್ಲೂಕುಗಳಿಗೆ ಯಾವ ಯಾವ ರೀತಿಯ ಸೌಲಭ್ಯವನ್ನು ಸರ್ಕಾರ ನೀಡುತ್ತದೆ; ಸೌಲಭ್ಯಗಳ ಪಟ್ಟಿ ನೀಡುವುದು ; ಹಾಗೂ ಇದಕ್ಕಾಗಿ ಎಷ್ಟು ಅನುದಾನ ಮೀಸಲಿಡಲಾಗಿದೆ ;

(ಇ) ಈ ರೀತಿಯು ಸೌಲಭ್ಯಗಳನ್ನು ಸದರಿ ತಾಲ್ಲೂಕುಗಳಲ್ಲಿ ನೀಡಲಾಗುತ್ತಿದೆಯೇ: ಎರಡು ತಾಲ್ಲೂಕಿನ ಪ್ರತ್ಯೇಕ ವಿವರ ನೀಡುವುದು ;

(ಈ) ಇಲಾಖಾ ಕಛೇರಿಗಳು ಇಲ್ಲದೆ. ಅನ್ಯ ತಾಲ್ಲೂಕುಗಳಲ್ಲಿ ಕೆಲಸ ಕಾರ್ಯಕ್ಕೆ ಜನ ಅವಲಂಬಿತರಾಗಿರುವುದು ಹಾಗೂ ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಉ) ಬಂದಿದ್ದಲ್ಲಿ, ಸರ್ಕಾರ ಯಾವ ರೀತಿ ಕ್ರಮಕೈಗೊಂಡಿದೆ ?

## ಮೀನುಗಾರಿಕೆ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಯ ಕುರಿತು

**ಡಾ॥ ಉಮಾಶ್ರೀ (ನಾಮನಿರ್ದೇಶನ ಹೊಂದಿದವರು)** :–

೧೧೮೦ (೧೩೧೭) ಮಾನ್ಯ ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಎರಡು ವರ್ಷಗಳಲ್ಲಿ ಮೀನುಗಾರಿಕೆ ಕ್ಷೇತ್ರದ ಸರ್ವತೋಮುಖ ಅಭಿವೃದ್ಧಿಗೆ ಮೀಸಲಿಡಲಾದ ಅನುದಾನವೆಷ್ಟು; (ಯೋಜನೆಗಳ ವಿವರ ನೀಡುವುದು)

(ಆ) ಮೀಸಲಿಡಲಾದ ಅನುದಾನದಲ್ಲಿ ಯಾವ ಯಾವ ಯೋಜನೆಗಳಿಗೆ ಬಿಡುಗಡೆ ಮಾಡಲಾಗಿದೆ: ಈ ಯೋಜನೆಗಳು ಅನುಷ್ಠಾನಗೊಂಡಿದೆಯೇ ; (ಜಿಲ್ಲಾವಾರು ಯೋಜನೆಗಳ ವಿವರ ನೀಡುವುದು)

(ಇ) ಈ ಯೋಜನೆಗಳು ಮಹಿಳೆಯರಿಗೆ ಯಾವ ರೀತಿ ಅನುಕೂಲವಾಗಿದೆ ; ಮಹಿಳಾ ಫಲಾನುಭವಿಗಳ ಸಂಖ್ಯೆ ಎಷ್ಟು ?

## ಕುರಿ ಮತ್ತು ಮೇಕೆ ಮಾಂಸ ಉತ್ಪಾದನೆಗೆ ಪ್ರೋತ್ಸಾಹಿಸುವ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೮೧ (೧೨೯೬) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕುರಿ ಮತ್ತು ಮೇಕೆ ಮಾಂಸ ಉತ್ಪಾದನೆ ಹೆಚ್ಚಿಸಿ ಗ್ರಾಹಕರಿಗೆ ಉತ್ಕೃಷ್ಟಗುಣಮಟ್ಟದ ಮಾಂಸ ವಿತರಣೆಗೆ ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರ ಪ್ರೋತ್ಸಾಹ ಯೋಜನೆಗಳನ್ನೇನಾದರೂ ಹಮ್ಮಿಕೊಂಡಿದೆಯೇ ;

(ಆ) ಕುರಿ ಮತ್ತು ಮೇಕೆ ಸಾಕಾಣಿಕೆದಾರರಿಗೆ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸಲಾಗಿದೆಯೇ ;

(ಇ) ಸರ್ಕಾರವು ಕುರಿ ಮತ್ತು ಮೇಕೆ ಮಾಂಸ ಮಾರಾಟಕ್ಕೆ ಜಿಲ್ಲಾವಾರು ಹಾಗೂ ತಾಲ್ಲೂಕುವಾರು ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವ ಉದ್ದೇಶ ಸರ್ಕಾರದ ಮುಂದಿದೆಯೇ ; ಇದ್ದಲ್ಲಿ ಯಾವಾಗ ಪ್ರಾರಂಭಿಸಲಾಗುವುದು ;

(ಈ) ವಿದೇಶಗಳಿಗೆ ಹಾಗೂ ಹೊರ ರಾಜ್ಯಗಳಿಗೆ ದೇಶಿ ತಳಿ ಕುರಿ ಮತ್ತು ಮೇಕೆ ಮಾಂಸ ರಫ್ತು ಮಾಡಲು ಸರ್ಕಾರ ಕ್ರಮವಹಿಸಿದೆಯೇ; ವಹಿಸಿದ್ದಲ್ಲಿ ತೆಗೆದುಕೊಂಡಿರುವ ಕ್ರಮಗಳೇನು ?

## ನಿವೇಶನ ರಹಿತ ಕುಟುಂಬಗಳ ಕುರಿತು

**ಡಾ. ಯತೀಂದ್ರ ಎಸ್. (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೮೨ (೧೨೯೭) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಾದ್ಯಂತ ನಿವೇಶನ ರಹಿತ ಕುಟುಂಬಗಳ ಕುರಿತು ಸಮೀಕ್ಷೆ ನಡೆಸಿದ್ದಲ್ಲಿ ರಾಜ್ಯದಾದ್ಯಂತ ಪ್ರಸ್ತುತ ಎಷ್ಟು ಕುಟುಂಬಗಳು ನಿವೇಶನರಹಿತವಾಗಿವೆ ; (ಜಿಲ್ಲಾವಾರು ನಗರ ಮತ್ತು ಗ್ರಾಮೀಣ ಪ್ರದೇಶಗಳ ವಿವರವನ್ನು ಪ್ರತ್ಯೇಕವಾಗಿ ಒದಗಿಸುವುದು)

(ಆ) ನಿವೇಶನ ರಹಿತ ಕುಟುಂಬಗಳಿಗೆ ನಿವೇಶನ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ? (ವಿವರ ಒದಗಿಸುವುದು)

## ಕಂದಾಯ ಇಲಾಖೆಯ ವೃಂದ ಬಲ ಕುರಿತು

**ಡಾ. ಯತೀಂದ್ರ ಎಸ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೮೩ (೧೨೯೮) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದ ಕಂದಾಯ ಇಲಾಖೆಯಲ್ಲಿ ಸರ್ಕಾರದ ಆದೇಶ ಸಂಖ್ಯೆ: ಆರ್‌ಡಿ ೫೪ ಎಎಸ್‌ಡಿ ೭೬ ದಿನಾಂಕ: ೨೮.೦೩.೧೯೭೭ರಲ್ಲಿ ಲಿಪಿಕ ವೃಂದದ ವೃಂದ ಬಲ ಮಂಜೂರು ಮಾಡಿದ್ದು, ನಂತರ ವೃಂದ ಬಲವನ್ನು ಪರಿಷ್ಕರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಬಂದಿದ್ದಲ್ಲಿ, ಈಗಿನ ಜನ ಸಂಖ್ಯೆಗನುಗುಣವಾಗಿ ವೃಂದ ಬಲ ಹೆಚ್ಚಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ;

(ಇ) ಕಂದಾಯ ಇಲಾಖೆಯಲ್ಲಿ ವಿವಿಧ ಹೊಸ ಹೊಸ ಯೋಜನೆಗಳನ್ನು ಜಾರಿಗೆ ತಂದಿರುವುದರಿಂದ ಈಗಿರುವ ನೌಕರರಿಗೆ ಹೆಚ್ಚಿನ ಒತ್ತಡ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಒತ್ತಡ ತಗ್ಗಿಸಲು ವೃಂದ ಬಲವನ್ನು ಹೆಚ್ಚಿಸಲು ಯಾವ ಕ್ರಮ ಕೈಗೊಳ್ಳಲಾಗಿದೆ ?

## ರೇಷ್ಮೆ ಇಲಾಖೆಯ ವಿವಿಧ ಹುದ್ದೆ ಮತ್ತು ಮುಂಬಡ್ತಿ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೮೪ (೧೩೩೮) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ಐದು ವರ್ಷಗಳಲ್ಲಿ ರೇಷ್ಮೆ ಇಲಾಖೆಯಲ್ಲಿ ಆಡಳಿತ ಹುದ್ದೆಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಎಷ್ಟು ಹುದ್ದೆಗಳಿಗೆ ಮುಂಬಡ್ತಿಯನ್ನು ನೀಡಲಾಗಿದೆ ; (ಹುದ್ದೆವಾರು ವಿವರ ನೀಡುವುದು)

(ಆ) ಬೆಂಗಳೂರು ನಗರ ವ್ಯಾಪ್ತಿಯಲ್ಲಿ ರೇಷ್ಮೆ ಇಲಾಖೆಗೆ ಮಂಜೂರಾದ ಹುದ್ದೆಗಳೆಷ್ಟು; ಅವುಗಳಲ್ಲಿ ತಾಂತ್ರಿಕ ಹುದ್ದೆಗಳು ಹಾಗೂ ಆಡಳಿತ ಹುದ್ದೆಗಳ ಸಂಖ್ಯೆ ಎಷ್ಟು ; ಖಾಲಿ ಇರುವ ಹುದ್ದೆಗಳೆಷ್ಟು ; ಒಬ್ಬರೇ ಅಧಿಕಾರಿ ಎರಡೆರಡು ಕಡೆ ಕಾರ್ಯನಿರ್ವಹಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಇ) ಐದು ವರ್ಷಗಳಿಗೂ ಹೆಚ್ಚಿನ ಅವಧಿಯಲ್ಲಿ ಬೆಂಗಳೂರಿನಲ್ಲೇ ಇರುವ ಅಧಿಕಾರಿ/ಸಿಬ್ಬಂದಿಗಳ ಸಂಖ್ಯೆ ಎಷ್ಟು ; ವರ್ಗಾವಣೆ ನಿಯಮದಂತೆ ಇವರ ವರ್ಗಾವಣೆಗೆ ಸರ್ಕಾರ ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

(ಈ) ರೇಷ್ಮೆ ಇಲಾಖೆಯು ತಾಂತ್ರಿಕ ಇಲಾಖೆಯಾಗಿದ್ದು, ಇಲಾಖೆಯ ವಿಸ್ತರಣಾ ಚಟುವಟಿಕೆಗಳಿಗೆ ಅದ್ಯತೆ ನೀಡದೇ ಆಡಳಿತಾತ್ಮಕ ಸಿಬ್ಬಂದಿಗಳಿಗೆ ಅನಗತ್ಯವಾಗಿ ಮುಂಬಡ್ತಿ ನೀಡಿ ಇಲಾಖಾ ವಿಸ್ತರಣಾ ಚಟುವಟಿಕೆಗಳು ಕುಂಠಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ? (ವಿವರ ನೀಡುವುದು)

## ಸರ್ಕಾರಿ ರೇಷ್ಮೆ ಕಾರ್ಖಾನೆಗಳ ಪ್ರಾರಂಭಿಸುವ ಬಗ್ಗೆ

**ಶ್ರೀ ಡಿ.ಎಸ್. ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೮೫ (೧೩೩೯) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಸರ್ಕಾರಿ ರೇಷ್ಮೆ ಕಾರ್ಖಾನೆಗಳನ್ನು ಚಾಮರಾಜನಗರದಲ್ಲಿ ಹೆಚ್ಚಿನ ಜನ ಹಿಂದುಳಿದ ಪರಿಶಿಷ್ಟ ಜಾತಿ ಮತ್ತು ಪಂಗಡದ ಜನರಿಗೆ ಉದ್ಯೋಗಾವಕಾಶ ನೀಡುವ ಉದ್ದೇಶದಿಂದ ಪ್ರಾರಂಭಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; (ವಿವರ ನೀಡುವುದು)

(ಆ) ಉತ್ತಮ ಸ್ಥಿತಿಯಲ್ಲಿರುವ ಸದರಿ ಕಾರ್ಖಾನೆಗಳು ಉತ್ಪಾದನೆಗಳನ್ನು ನಿಲ್ಲಿಸಿದ್ದು, ಚಾಮರಾಜನಗರ ಜಿಲ್ಲೆಯ ಜನರಿಗೆ ಉದ್ಯೋಗಾವಕಾಶ ನೀಡಲು ಅವಕಾಶವಿದ್ದರೂ ಇದರ ಬಗ್ಗೆ ಸರ್ಕಾರ ಗಮನಹರಿಸದಿರಲು ಕಾರಣವೇನು ; ಇದರ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಇ) ಈ ಕಾರ್ಖಾನೆಗಳು ಉತ್ಪಾದನೆ ನಿಲ್ಲಿಸಲು ಕಾರ್ಮಿಕರು ಮತ್ತು ಸಿಬ್ಬಂದಿಗಳು ಕಾರಣವೇ ; ಸರ್ಕಾರವು ಎಲ್ಲಾ ಕಾಖಾನೆಗಳನ್ನು ಲಾಭ ತರುವ ಅಥವಾ ಉದ್ಯೋಗ ನೀಡುವ ಉದ್ದೇಶದಿಂದ ಪ್ರಾರಂಭಿಸಲಾಗಿದೆಯೇ ? (ವಿವರ ನೀಡುವುದು)

## ಕೆ.ಎಸ್.ಆರ್.ಟಿ.ಸಿ ಬಸ್ ಸೌಲಭ್ಯ ಹಾಗೂ ಬಸ್ ನಿಲ್ದಾಣವನ್ನು ಒದಗಿಸುವ ಬಗ್ಗೆ

**ಡಾ॥ ಚಂದ್ರಶೇಖರ ಬಸವರಾಜ ಪಾಟೀಲ್ (ಪದವೀಧರರ ಕ್ಷೇತ್ರ) :–**

೧೧೮೬ (೧೩೭೫) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ತುಮಕೂರು ಜಿಲ್ಲೆ. ಸಿರಾ ತಾಲ್ಲೂಕು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಬಸ್ ನಿಲ್ದಾಣದಿಂದ ಗ್ರಾಮಗಳ ಮಾರ್ಗವಾಗಿ ಹಿರಿಯೂರು ತಾಲ್ಲೂಕಿನ ಧರ್ಮಾಪುರ ಗ್ರಾಮಕ್ಕೆ ಸಂಚರಿಸುತ್ತಿರುವ ಸರ್ಕಾರಿ ಬಸ್‌ಗಳು ದಿನಕ್ಕೆ ಎಷ್ಟು ಭಾರಿ ಸಂಚರಿಸಲಾಗುತ್ತಿರುತ್ತದೆ ; (ನಿಗದಿಪಡಿಸಿರುವ ಸಮಯವಾರು ವಿವರ ಒದಗಿಸುವುದು)

(ಆ) ಸದರಿ ಮಾರ್ಗದಲ್ಲಿ ಸಂಚರಿಸುತ್ತಿರುವ ಕೆ.ಎಸ್.ಆರ್.ಟಿ.ಸಿ ಬಸ್‌ಗಳು ನಿಗದಿತ ಸಮಯಕ್ಕೆ ಸಂಚರಿಸದಿರುವುದರಿಂದ ಅಲ್ಲಿಯ ಶಾಲಾ ಕಾಲೇಜುಗಳ ಬಡ ವಿದ್ಯಾರ್ಥಿಗಳಿಗೆ, ಕೂಲಿ ಕಾರ್ಮಿಕರಿಗೆ ಹಾಗೂ ಗ್ರಾಮಸ್ಥರಿಗೆ ತುಂಬ ಅನಾನುಕೂಲವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಇ) ಬಂದಿದ್ದಲ್ಲಿ, ತ್ವರಿತವಾಗಿ ಹೆಚ್ಚುವರಿ ಬಸ್‌ಗಳನ್ನು ಸಮಯಕ್ಕೆ ಸರಿಯಾಗಿ ನಿಯೋಜಿಸಲು ಕ್ರಮ ವಹಿಸಲಾಗುವುದೇ ;

(ಈ) ಧರ್ಮಾಪುರ ಕೆ.ಎಸ್.ಆರ್.ಟಿ.ಸಿ ಬಸ್‌ಗಳನ್ನು ನಿಲ್ಲಿಸಲು ನಿಲ್ದಾಣ ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವಾಗ ಕೆ.ಎಸ್.ಆರ್.ಟಿ.ಸಿ ಬಸ್ ನಿಲ್ದಾಣವನ್ನು ನಿರ್ಮಿಸಲಾಗುವುದು ? (ಸಂಪೂರ್ಣ ವಿವರ ನೀಡುವುದು)

## ಫಾರಂ ನಂಬರ್ ೫೩ ಮತ್ತು ೫೭ರ ತಾಲ್ಲೂಕು ಕಛೇರಿಗೆ ಅರ್ಜಿ ಬಗ್ಗೆ

**ಶ್ರೀ ಎನ್. ನಾಗರಾಜು, (ಎಂ.ಟಿ.ಬಿ.) (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೮೭ (೧೨೬೬) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಭೂ ರಹಿತ ರೈತರು ವ್ಯವಸಾಯ ಮಾಡಲು ಭೂಮಿ ಮಂಜೂರಾತಿ ಕೋರಿ ಫಾರಂ ನಂಬರ್–೫೩ ಮತ್ತು ಫಾರಂ ನಂಬರ್–೫೭ರಲ್ಲಿ ತಮ್ಮ ತಾಲ್ಲೂಕು ಕಂದಾಯ ಕಛೇರಿಗಳಿಗೆ ಅರ್ಜಿ ಸಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಹಾಗಿದ್ದಲ್ಲಿ, ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ವಿಧಾನಸಭಾ ಕ್ಷೇತ್ರದಿಂದ ಸಲ್ಲಿಕೆಯಾಗಿರುವ ಫಾರಂ ನಂಬರ್–೫೩ ಮತ್ತು ೫೭ರಡಿ ಅರ್ಜಿಗಳ ಸಂಖ್ಯೆ ಎಷ್ಟು ? (ಗ್ರಾಮವಾರು ವಿವರಗಳನ್ನು ನೀಡುವುದು)

## ರಾಜ್ಯದ ಬಗರ್ ಹುಕ್ಕುಂ ಸಾಗುವಳಿ ಸಮಿತಿ ಬಗ್ಗೆ

**ಶ್ರೀ ಎನ್. ನಾಗರಾಜು, (ಎಂ.ಟಿ.ಬಿ.) (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೮೮ (೧೨೬೭) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯದಲ್ಲಿ ಬಗರ್ ಹುಕ್ಕುಂ ಸಾಗುವಳಿ ಸಮಿತಿಗಳಲ್ಲಿ ನಿರ್ಣಯಿಸಿ ಅರ್ಹ ಫಲಾನುಭವಿಗಳಿಗೆ ಜಮೀನು ಮಂಜೂರು ಮಾಡಲಾಗಿದ್ದರೂ ಸಹ ಈವರೆವಿಗೂ ಖಾತೆ ಮಾಡದಿರುವ ಪ್ರಕರಣಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)

(ಆ) ಸಾಗುವಳಿ ಚೀಟಿ ನೀಡಿ ವರ್ಷಗಳು ಕಳೆದಿದ್ದರೂ ಸಹ ಈವರೆವಿಗೂ ಯಾವ ಯಾವ ಕಾರಣಗಳಿಗಾಗಿ ಖಾತೆ ಮಾಡದೆ ವಿಲೇ ಇಡಲಾಗಿದೆ ;

(ಇ) ಈ ರೀತಿ ವಿಳಂಬದಿಂದ ಕಂಗಾಲಾಗಿರುವ ಸಾಗುವಳಿದಾರರು ಅರ್ಹ ಫಲಾನುಭವಿಗಳಾಗಿದ್ದರೂ ಖಾತೆಯಾಗದೆ ಮತ್ತು ಪಹಣಿಯಲ್ಲಿ ನಮೂದು ಆಗದೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಈ) ಬಂದಿದ್ದಲ್ಲಿ, ಈ ರೀತಿಯ ಸಮಸ್ಯೆಯನ್ನು ನಿವಾರಿಸಲು ಸರ್ಕಾರವು ಯಾವ ಕ್ರಮ ಕೈಗೊಳ್ಳುವುದು ?

## ಮುಜರಾಯಿ ಇಲಾಖೆಯಿಂದ ದೇವಾಲಯಗಳ ಅನುದಾನದ ಬಗ್ಗೆ

**ಶ್ರೀ ಎನ್. ನಾಗರಾಜು, (ಎಂ.ಟಿ.ಬಿ.) (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೮೯ (೧೨೬೮) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಳೆದ ೦೨ ವರ್ಷಗಳಿಂದ ಹೊಸಕೋಟೆ ವಿಧಾನ ಸಭಾ ಕ್ಷೇತ್ರಕ್ಕೆ ಮುಜರಾಯಿ ಇಲಾಖೆಯಿಂದ ದೇವಾಲಯಗಳ ಅಭಿವೃದ್ಧಿಗಾಗಿ ಮಂಜೂರಾಗಿರುವ ಒಟ್ಟು ಅನುದಾನವೆಷ್ಟು ; (ಆದೇಶವಾರು ಸಂಪೂರ್ಣ ಮಾಹಿತಿ ನೀಡುವುದು)

(ಆ) ಮುಜರಾಯಿ ದೇವಾಲಯಗಳ ಅಭಿವೃದ್ಧಿಗಾಗಿ ಅನುದಾನ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಅನುದಾನವನ್ನು ಬಿಡುಗಡೆ ಮಾಡಲು ಯಾವ ಕ್ರಮಕೈಗೊಳ್ಳಲಾಗಿದೆ ;

(ಇ) ಕಳೆದ ೦೨ ವರ್ಷಗಳಿಂದ ಆರಾಧನಾ ಯೋಜನೆಯಡಿ ಹೊಸಕೋಟೆ ಕ್ಷೇತ್ರಕ್ಕೆ ಮಂಜೂರಾಗಿರುವ ಅನುದಾನವೆಷ್ಟು? (ಆದೇಶವಾರು ಸಂಪೂರ್ಣ ಮಾಹಿತಿ ನೀಡುವುದು)

## ಸಾರಿಗೆ ಇಲಾಖೆಯು ಕಳೆದ ೦೨ ವರ್ಷದಲ್ಲಿ ನಿಗಮಗಳಿಗೆ ವೆಚ್ಚ ಮಾಡಿರುವ ಬಗ್ಗೆ

**ಶ್ರೀ ಎನ್. ನಾಗರಾಜು, (ಎಂ.ಟಿ.ಬಿ.) (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೯೦ (೧೨೬೯) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಸರ್ಕಾರವು ಶಕ್ತಿ ಯೋಜನೆಗಾಗಿ ೨೦೨೩–೨೪ ಹಾಗೂ ೨೦೨೪–೨೫ನೇ ಸಾಲಿನಲ್ಲಿ ಎಲ್ಲಾ ನಿಗಮಗಳಲ್ಲಿ ಆಗಿರುವ ವೆಚ್ಚ ಎಷ್ಟು ;

(ಆ) ಈ ಯೋಜನೆಗಾಗಿ ಸರ್ಕಾರ ಇದುವರೆವಿಗೂ ಬಿಡುಗಡೆ ಮಾಡಿದ ಮೊತ್ತವೆಷ್ಟು; ಬಾಕಿ ಉಳಿಸಿಕೊಂಡಿರುವ ಮೊತ್ತವೆಷ್ಟು ;

(ಇ) ಯಾವ ಕಾಲಮಿತಿಯಲ್ಲಿ ಈ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲಾಗುವುದು ? (ನಿಗಮವಾರು ಸಂಪೂರ್ಣ ಮಾಹಿತಿ ನೀಡುವುದು)

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿನ ಪಶು ಆಸ್ಪತ್ರೆಗಳ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೯೧ (೧೩೪೦) ಮಾನ್ಯ ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಎಷ್ಟು ಪಶು ಆಸ್ಪತ್ರೆಗಳಿವೆ ; ಹಾಗೂ ಈ ಆಸ್ಪತ್ರೆಗಳಲ್ಲಿ ಎಷ್ಟು ಹುದ್ದೆಗಳು ಮಂಜೂರಾಗಿವೆ : (ವಿವರ ನೀಡುವುದು)

(ಆ) ಸದರಿ ಜಿಲ್ಲೆಗಳಲ್ಲಿ ಹೊಸದಾಗಿ ಪಶು ಆಸ್ಪತ್ರೆ ಆರಂಭಿಸಲು ಬೇಡಿಕೆ ಬಂದಿದೆಯೇ ; ಬಂದಿದ್ದಲ್ಲಿ, ಯಾವಾಗ ಹೊಸ ಪಶು ಆಸ್ಪತ್ರೆಯನ್ನು ಮಂಜೂರು ಮಾಡಲಾಗುವುದು ;

(ಇ) ಪಶುಗಳಿಗೆ ತಗಲುವ ಕಾಲುಬಾಯಿ ಜ್ವರದ ಬಗ್ಗೆ ರೈತರಿಗೆ ಜಾಗೃತಿ ಮೂಡಿಸಲು ಸರ್ಕಾರದಿಂದ ಕೈಗೊಂಡಿರುವ ಕ್ರಮಗಳೇನು ?

## ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಕೈಗೊಂಡಿರುವ ಲೋಕೋಪಯೋಗಿ ಇಲಾಖೆಯ ಕಾಮಗಾರಿಗಳ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೯೨ (೧೩೪೧) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಪ್ರಸ್ತುತ ಸರ್ಕಾರ ಬಂದಾಗಿನಿಂದ ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲಾಗಿರುವ ಒಟ್ಟು ಕಾಮಗಾರಿಗಳೆಷ್ಟು ; ಸದರಿ ಕಾಮಗಾರಿಗಳಿಗೆ ಸರ್ಕಾರದಿಂದ ಬಿಡುಗಡೆಯಾದ ಅನುದಾನ ಎಷ್ಟು ; (ವಿವರ ನೀಡುವುದು)

(ಆ) ಕಳೆದ ಒಂದು ವರ್ಷದಿಂದ ಪ್ರಗತಿಯಲ್ಲಿರುವ ಕಾಮಗಾರಿಗಳು ಎಷ್ಟು ಹಾಗೂ ಪ್ರಸ್ತುತ ಸರ್ಕಾರ ರಚನೆಯಾದ ನಂತರ ಎಷ್ಟು ಹೊಸ ರಸ್ತೆ ಹಾಗೂ ಸೇತುವೆಗಳನ್ನು ನಿರ್ಮಾಣ ಮಾಡಲಾಗಿದೆ ; (ವಿವರ ನೀಡುವುದು)

(ಇ) ಲೋಕೋಪಯೋಗಿ ಇಲಾಖೆಯಿಂದ ಸದರಿ ಕಾಮಗಾರಿಗಳಿಗೆ ಯಾವ ಯಾವ ಲೆಕ್ಕ ಶೀರ್ಷಿಕೆಗಳಯಡಿ ಅನುದಾನ ಬಿಡುಗಡೆ ಮಾಡಲಾಗಿದೆ ? (ವಿವರ ನೀಡುವುದು)

## ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿರುವ ಕೆ.ಕೆ. ಆರ್.ಟಿ.ಸಿ ಬಸ್‌ಗಳ ಬಗ್ಗೆ

**ಶ್ರೀ ಬಿ.ಜಿ. ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) :–**

೧೧೯೩ (೧೩೪೨) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ ಬರುವ ಕೆ.ಕೆ.ಆರ್.ಟಿ.ಸಿ ಸಂಸ್ಥೆಯಲ್ಲಿ ಎಷ್ಟು ಎಲೆಕ್ಟ್ರಿಕ್ ಬಸ್‌ಗಳನ್ನು ಸಂಚಾರ ವ್ಯವಸ್ಥೆಯಲ್ಲಿ ಬಳಕೆ ಮಾಡಲಾಗುತ್ತಿದೆ ; ಬಳಕೆ ಮಾಡುತ್ತಿದ್ದಲ್ಲಿ, ಎಷ್ಟು ಎಲೆಕ್ಟ್ರಿಕ್ ವಾಹನಗಳನ್ನು ಖರೀದಿಸಲಾಗಿದೆ ; ಖರೀದಿಗೆ ವಿನಿಯೋಗಿಸಲಾದ ಮೊತ್ತ ಎಷ್ಟು; ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ನೀಡುತ್ತಿರುವ ನೆರವುಗಳು ಯಾವುವು ; (ವಿವರ ನೀಡುವುದು)

(ಆ) ಈ ಸಾರಿಗೆ ಸಂಸ್ಥೆಗಳಿಂದ ಎಲ್ಲೆಲ್ಲಿ ಚಾರ್ಜಿಂಗ್ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ; ಈ ಚಾರ್ಜಿಂಗ್ ವ್ಯವಸ್ಥೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ದೊರೆತಿರುವ ಆರ್ಥಿಕ ನೆರವು ಮತ್ತು ಸೌಲಭ್ಯಗಳು ಯಾವುವು ? (ವಿವರ ನೀಡುವುದು)

## ಕಲಬುರಗಿ ಜಿಲ್ಲೆಯ ಚಿತ್ತಾಪುರ ಪಟ್ಟಣದ ನಾಗಾವಿ ಹತ್ತಿರ ನಿರ್ಮಿಸಿದ ಮನೆಗಳ ಹಂಚಿಕೆ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :–**

೧೧೯೪ (೧೨೭೬) ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ಜಿಲ್ಲೆಯ ಚಿತ್ತಾಪುರ ಪಟ್ಟಣದ ನಾಗಾವಿ ಪ್ರದೇಶದಲ್ಲಿ ಬಡವರಿಗಾಗಿ ರೂ.೫೮ ಕೋಟಿ ವೆಚ್ಚದಲ್ಲಿ ೧೦೦೦ ಮನೆಗಳನ್ನು ಇನ್ನು ಹಂಚಿಕೆ ಮಾಡದಿರಲು ಕಾರಣಗಳೇನು ;

(ಆ) ೧೦೦೦ ಮನೆಗಳು ಮೂಲಭೂತ ಸೌಕರ್ಯಗಳೊಂದಿಗೆ ಸಿದ್ಧವಾಗಿದ್ದರೂ ಮನೆಗಳನ್ನು ಬಡವರಿಗೆ ಹಂಚಿಕೆ ಮಾಡಿ ಹಕ್ಕು ಪತ್ರಗಳನ್ನು ನೀಡಲು ಯಾವಾಗ ಕ್ರಮ ಕೈಗೊಳ್ಳಲಾಗುವುದು ;

(ಇ) ಮನೆಗಳು ನಿರ್ಮಾಣಗೊಂಡು ಹಂಚಿಕೆಯಾಗದಿರುವುದರಿಂದ ಅದೇ ಮನೆಗಳಲ್ಲಿ ಬಾಗಿಲುಗಳನ್ನು ಒಡೆದು ದುರುಪಯೋಗ ಪಡಿಸಿಕೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿಲ್ಲವೆ ;

(ಈ) ಬದುಕಲು ಸೂರಿಲ್ಲದೆ ಕೊಳಗೇರಿಯಲ್ಲಿ ಬದುಕುತ್ತಿರುವ ಬಡ ಕುಟುಂಬಗಳಿಗೆ ಹಂಚಿ ಸರಕಾರವು ನ್ಯಾಯ ಒದಗಿಸಲು ತಕ್ಷಣವೇ ಕ್ರಮ ಕೈಗೊಳ್ಳಲಾಗುವುದೇ ?

## ಬೆಳಗಾವಿ ನಗರ ಸಾರಿಗೆ ಬಸ್ ನಿಲ್ದಾಣದ ಕಾಮಗಾರಿ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :–**

೧೯೫೫ (೧೩೪೭) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿಯಲ್ಲಿ ನಗರ ಸಾರಿಗೆ ಬಸ್ ನಿಲ್ದಾಣದ ಕಾಮಗಾರಿ ಪ್ರಾರಂಭಿಸಿ ೩ ವರ್ಷಗಳಾದರು ಇನ್ನು ಸಾರ್ವಜನಿಕರಿಗೆ ಲಭ್ಯವಾಗದಿರಲು ಕಾರಣಗಳೇನು ;

(ಆ) ನಗರ ಸಾರಿಗೆ ಬಸ್ ನಿಲ್ದಾಣದ ಕಾಮಗಾರಿ ಈಗ ಯಾವ ಹಂತದಲ್ಲಿದೆ ;

(ಇ) ಬೆಳಗಾವಿ ನಗರ ಉತ್ತರ ಕರ್ನಾಟಕದ ಬಹುಮುಖ್ಯ ಹಾಗೂ ದೊಡ್ಡ ನಗರವಾಗಿದ್ದು, ಕಾಮಗಾರಿಗಳನ್ನು ತಕ್ಷಣವೇ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗುವುದೇ ?

## ಕಲಬುರಗಿ ನಗರದಲ್ಲಿರುವ ಸ್ವಾತಂತ್ರ್ಯ ಭವನದ (ರಂಗಾಯಣ ಎದುರು) ಕಾಮಗಾರಿ ಕುರಿತು

**ಡಾ॥ ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) :–**

೧೧೯೬ (೧೩೭೧) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಲಬುರಗಿ ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಹತ್ತಿರದ "ಸ್ವಾತಂತ್ರ್ಯ ಭವನ" (ರಂಗಾಯಣ ಎದುರು) ನಿರ್ಮಾಣ ಕಾಮಗಾರಿ ವಿಳಂಬವಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಆ) ಕಲಬುರಗಿ ನಗರದಲ್ಲಿನ "ಸ್ವಾತಂತ್ರ್ಯ ಭವನ" ನಿರ್ಮಾಣಕ್ಕೆ ಎಷ್ಟು ಹಣ ವೆಚ್ಚವಾಗಿದೆ ಹಾಗೂ ಎಷ್ಟು ಆಸನದ ಸಾಮರ್ಥ್ಯ ಹೊಂದಿದೆ ; (ವಿವರ ನೀಡುವುದು)

(ಇ) ಸಾರ್ವಜನಿಕ ಉಪಯೋಗವಾಗಬೇಕ್ಕಿದ್ದ "ಸ್ವಾತಂತ್ರ್ಯ ಭವನ" ಕಾಮಗಾರಿ ಸುಮಾರು ೮ ವರ್ಷವಾದರೂ ಪೂರ್ಣವಾಗದಿರಲು ಕಾರಣಗಳೇನು ; ಕಳಪೆ ಕಾಮಗಾರಿಯಾಗದೆ ಎಂದು ಸಾರ್ವಜನಿಕ ವಲಯದಲ್ಲಿ ಆರೋಪಗಳು ಕೇಳಿ ಬರುತ್ತಿದ್ದು, ಕಟ್ಟಡ ನಿರ್ಮಾಣದ ಗುಣಮಟ್ಟ ಕಾಪಾಡಲು ತೆಗೆದುಕೊಂಡ ಕ್ರಮಗಳೇನು ;

(ಈ) "ಸ್ವಾತಂತ್ರ್ಯ ಭವನ" ಕಾಮಗಾರಿಯನ್ನು ಯಾವ ಕಾಲಮಿತಿಯೊಳಗೆ ಪೂರ್ಣಗೊಳಿಸಿ ಕಲಬುರಗಿ ಜನರ ಸೇವೆಗೆ ಲಭ್ಯವಾಗುವಂತೆ ಮಾಡಲಾಗುವುದು ?

## ನೆಲಮಂಗಲ ತಾಲ್ಲೂಕಿನ ಗ್ರಾಮಗಳಲ್ಲಿ ಜಮೀನುಗಳಿಗೆ ಓಡಾಡಲು ಉಂಟಾಗಿರುವ ದಾರಿ ಸಮಸ್ಯೆ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು ) :–**

೧೧೯೭ (೧೨೯೪) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಗ್ರಾಮೀಣ ಪ್ರದೇಶಗಳಲ್ಲಿ ಗ್ರಾಮ ನಕ್ಷೆಯಲ್ಲಿ ದಾಖಲಾಗಿರುವಂತೆ ರೈತರ ಜಮೀನುಗಳಿಗೆ ಓಡಾಡಲು ಮತ್ತು ವ್ಯವಸಾಯ ಪರಿಕರಗಳನ್ನು ಸಾಗಿಸಿಕೊಳ್ಳಲು ಅವಶ್ಯಕವಾಗಿರುವ ಕಾಲುದಾರಿ, ಬಂಡಿಜಾಡು ಇತ್ಯಾದಿ ದಾರಿಗಳಿಗೆ ನಿಗದಿಪಡಿಸಿರುವ ಅಗಲಕ್ಕೆ ಸಂಬಂಧಪಟ್ಟಂತೆ ಇರುವ ನಿಯಮಗಳೇನು ; (ಪೂರ್ಣ ವಿವರ ನೀಡುವುದು)

(ಆ) ಗ್ರಾಮ ನಕ್ಷೆಯಲ್ಲಿ ರೈತರ ಜಮೀನುಗಳಿಗೆ ಓಡಾಡಲು ದಾರಿ ದಾಖಲಾಗದೇ ಇರುವ ಪಕ್ಷದಲ್ಲಿ ಮತ್ತು ರೈತರಿಗೆ ಓಡಾಡಲು ಹಾಗೂ ವ್ಯವಸಾಯ ಪರಿಕರಗಳನ್ನು ಸಾಗಿಸಲು ತೊಂದರೆಯಾದ ಸಂದರ್ಭದಲ್ಲಿ ರೈತರು ದಾರಿಗಾಗಿ ನಿರ್ವಹಿಸಬೇಕಾದ ಕ್ರಮಗಳೇನು ; ದಾರಿ ಸಮಸ್ಯೆ ಬಗೆಹರಿಸಲು ಸರ್ಕಾರದಿಂದ ಮಾಡಿಕೊಡುವ ಕ್ರಮಗಳೇನು ;

(ಇ) ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲ ತಾಲ್ಲೂಕಿನ ಸೋಂಪುರ ಹೋಬಳಿಯ ಯಾವ್ಯಾವ ಗ್ರಾಮಗಳ ವ್ಯಾಪ್ತಿಯಲ್ಲಿ ಜಮೀನುಗಳಿಗೆ ದಾರಿಯ ಸಮಸ್ಯೆ ಇದೆ ; ಈ ಸಂಬಂಧ ರೈತರು ಲಿಖಿತ ಮನವಿ/ದೂರು ದಾಖಲು ಮಾಡಿದ್ದಾರೆಯೆ ; (ಗ್ರಾಮ, ಸರ್ವೆ ನಂಬರ್‌ವಾರು ವಿವರ ನೀಡುವುದು)

(ಈ) ಸೋಂಪುರ ಹೋಬಳಿಯ ಕಾಸರಘಟ್ಟ ಗ್ರಾಮ ಮತ್ತು ಹೊಸಹಳ್ಳಿ ದಾಖಲೆಯ ಚನ್ನತಿಮ್ಮಯ್ಯನ ಪಾಳ್ಯದ ರೈತರು ಗ್ರಾಮ ನಕ್ಷೆಯಲ್ಲಿ ದಾಖಲಾಗಿರುವ ರಸ್ತೆಗಳನ್ನು ಸೇರಿಸಿಕೊಂಡು ಬೇಲಿ ಹಾಕಿಕೊಂಡಿರುವುದರಿಂದ ಮತ್ತು ಜಮೀನಿಗೆ ಓಡಾಡಲು ತೊಂದರೆಯಾಗಿದ್ದು, ರಸ್ತೆಯನ್ನು ಸರ್ವೆ ಮಾಡಿ ತೆರವು ಮಾಡಿಸಿಕೊಡಬೇಕೆಂದು ಮನವಿ/ದೂರನ್ನು ಸಲ್ಲಿಸಿರುವುದು ನಿಜವೇ ; ಇದ್ದಲ್ಲಿ, ಯಾವ ದಿನಾಂಕದಂದು ಮನವಿ/ದೂರನ್ನು ಸಲ್ಲಿಸಲಾಗಿದೆ ; ಪರಿಹರಿಸಲು ಕೈಗೊಂಡಿರುವ ಕ್ರಮಗಳೇನು ; ಯಾವ ನಿಗದಿತ ಕಾಲದೊಳಗೆ ಪರಿಹರಿಸಲಾಗುವುದು ? (ಸಂಪೂರ್ಣ ವಿವರ ನೀಡುವುದು)

## ಕಂದಾಯ ಇಲಾಖೆಗೆ ಗ್ರಾಮ ಸಹಾಯಕರ ಸೇವಾ ಭದ್ರತೆ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು ) :–**

೧೧೯೮ (೧೩೭೨) ಮಾನ್ಯ ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಂದಾಯ ಇಲಾಖೆಯಲ್ಲಿ ಎಷ್ಟು ಗ್ರಾಮ ಸಹಾಯಕರು ಸೇವೆ ಸಲ್ಲಿಸುತ್ತಿದ್ದಾರೆ ; ಹಾಗೂ ಕಳೆದ ಎಷ್ಟು ವರ್ಷಗಳಿಂದ ಸೇವೆ ನೀಡುತ್ತಿದ್ದಾರೆ ; ಇವರುಗಳಿಗೆ ಸೇವಾ ಭದ್ರತೆ ಒದಗಿಸಲಾಗಿದೆಯೇ ;

(ಆ) ಸದರಿ ನೌಕರರಿಗೆ ಕನಿಷ್ಠ ವೇತನ ರೂ.೨೭,೦೦೦–೦೦ಕ್ಕೆ ಏರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ ;

(ಇ) ಈ ಗ್ರಾಮ ಸಹಾಯಕರಿಗೆ ಸೇವಾ ಭದ್ರತೆ ಒದಗಿಸಲು ಸರ್ಕಾರದ ಮುಂದಿರುವ ಕಾರ್ಯಕ್ರಮಗಳೇನು ?

## ರಾಯಚೂರು ಜಿಲ್ಲೆಯಲ್ಲಿರುವ ದೇವಸ್ಥಾನಗಳ ಕುರಿತು

**ಶ್ರೀ ಎ. ವಸಂತ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೧೯೯ (೧೨೭೧) ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯಲ್ಲಿ ಮುಜರಾಯಿ ಇಲಾಖೆಯ ಅಧೀನದಲ್ಲಿರುವ ಒಟ್ಟು ದೇವಾಲಯಗಳೆಷ್ಟು ; ಅದರಲ್ಲಿ ಎ, ಬಿ, ಸಿ, ವರ್ಗದಲ್ಲಿರುವ ದೇವಸ್ಥಾನಗಳ ಒಟ್ಟು ಸಂಖ್ಯೆ ಎಷ್ಟು ;

(ಆ) ಕಳೆದ ೧೦ ವರ್ಷಗಳಲ್ಲಿ ಯಾವ ಯಾವ ದೇವಾಲಯಗಳನ್ನು ಸರ್ಕಾರದ ವಶಕ್ಕೆ ಪಡೆಯಲಾಗಿದೆ ; ಯಾವ ಯಾವ ದೇವಾಲಯಗಳನ್ನು ಸರ್ಕಾರದ ವಶದಿಂದ ಬಿಡುಗಡೆ ಮಾಡಲಾಗಿದೆ ;

(ಇ) ಈಗ ಮುಜರಾಯಿ ಇಲಾಖೆ ಯಾವ ಕಾಯ್ದೆ ಅನ್ವಯ ನಡೆಯುತ್ತಿರುವುದು ; ಈಗಿರುವ ಕಾಯ್ದೆ ಈಗಾಗಲೇ ೨ ಬಾರಿ ನ್ಯಾಯಾಲಯದಿಂದ ರದ್ದು ಮಾಡಿರುವುದು ಸರ್ಕಾರದ ಗಮನಕ್ಕಿದೆಯೇ; ರದ್ದಾಗಿರಲು ಕಾರಣವೇನು ?

## ರಾಯಚೂರು ಜಿಲ್ಲೆಯ ರಸ್ತೆಗಳ ಅಭಿವೃದ್ಧಿ ಕುರಿತು

**ಶ್ರೀ ಎ. ವಸಂತ ಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) :–**

೧೨೦೦ (೧೨೬೨) ಮಾನ್ಯ ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿ ರಸ್ತೆಗಳು ತುಂಬಾ ಹದಗೆಟ್ಟಿದ್ದು, ಈ ರಸ್ತೆಗಳ ಅಭಿವೃದ್ಧಿಗೆ ೨೦೨೩ ರಿಂದ ೨೦೨೫ ರವರೆಗೆ ಎಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; (ತಾಲ್ಲೂಕುವಾರು ಕಾಮಗಾರಿಯ ಸಂಪೂರ್ಣ ಮಾಹಿತಿ ನೀಡುವುದು)

(ಆ) ಸರ್ಕಾರವು ಪ್ರಸ್ತುತ ಸಾಲಿನಲ್ಲಿ ನೀಡಿರುವ ಅನುದಾನದಲ್ಲಿ ರಸ್ತೆಗಳ ನಿರ್ಮಾಣ ಮತ್ತು ದುರಸ್ತಿ ಕಾಮಗಾರಿ ಮಾಡಲು ಸಾಧ್ಯವಿಲ್ಲದ ಕಾರಣ ಇನ್ನೂ ಹೆಚ್ಚಿನ ಅನುದಾನವನ್ನು ನೀಡಲು ತೆಗೆದುಕೊಂಡಿರುವ ಕ್ರಮಗಳೇನು ?

**ಕೆ. ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು–59/ಕಾ.ಸೂ. O268/500 ಪ್ರತಿಗಳು/12–03–2025